ಪುಸ್ತಕ ಪ್ರಪಂಚ

ಆಗಸ್ಟ್-೧೯೯೭



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೧



ಆಗಸಕ್ಕೇರುತ್ತಿರುವ ಭಾರತದ ದೈತ್ಯ ರಾಕೆಟ್ ಪಿಎಸ್‌ಎಲ್‌ವಿ (ಕೃಪೆ: ಇಸ್ರೊ) ಲೇಖನ ಪುಟ-೨

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ–೧೧

ಆಗಸ್ಟ್–೧೯೯೭

ಮುಖ ಚಿತ್ರ

ರಾಷ್ಟ್ರಪತಿ ಕೆ. ಆರ್. ನಾರಾಯಣನ್

ರಕ್ಷಾಪುಟ–೪

ಪಿ. ಆರ್. ತಿಪ್ಪೇಸ್ವಾಮಿ

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ಸ್ವಾತಂತ್ರ್ಯದ ಸುವರ್ಣ ಮಹೋತ್ಸವ

ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಭಾರತೀಯರು ಪುಣ್ಯವಂತರು!

ಸ್ವಾತಂತ್ರ್ಯ ನಿಸರ್ಗ ಧರ್ಮ! ಪ್ರತಿಯೊಂದು ಜೀವಿಯ ಪರಮಗಂತವ್ಯ! ಸ್ವಾತಂತ್ರ್ಯಕ್ಕಾಗಿ ಹೋರಾಡುವ ಬದುಕು ಸಾರ್ಥಕ!

ನಾಯಿಯೂ ಹೊಟ್ಟೆ ಹೊರೆದುಕೊಳ್ಳುತ್ತದೆ; ಕ್ರಿಮಿಕೀಟಗಳೂ ಹೊಟ್ಟೆ ಪಾಡಿಗಾಗಿ ಬದುಕುತ್ತವೆ. ಮತಿಸಂಪನ್ನ ಮಾನವನೂ ಹೊಟ್ಟೆಹೊರಕನಾಗಿಯೆ ಉಳಿಯಬೇಕೆ? ಮತಿವಂತಿಕೆಯ ಬೆಲೆ ಅಷ್ಟಕ್ಕೇ ಕೊನೆಗೊಳ್ಳಬೇಕೆ? ಆತ್ಮ ಸ್ವಾತಂತ್ರ್ಯ ಮತ್ತು ಆತ್ಮಶ್ರೀ ಸಂವರ್ಧನೆ ಮತಿವಂತಿಕೆಯ ಮೊದಲ ಗುರಿಯಾಗಬೇಕು. ರಾಜಕೀಯ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ಕಾಯಕ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ—ಇವು ಸ್ವಾತಂತ್ರ್ಯದ ಹಲವು ಸೀಳುಗಳು. ಇವೆಲ್ಲಕ್ಕೂ ಮಿಗಿಲಾದದ್ದು ಆತ್ಮ ಸ್ವಾತಂತ್ರ್ಯ; ಆಲೋಚನಾ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಮಾತ್ರ ಆಧ್ಯಾತ್ಮ ಸಾಧನೆ ಸಾಧ್ಯ. ಲೌಕಿಕಾಮುಷ್ಮಿಕಾದಿ ಸರ್ವಾಭ್ಯುದಯಕ್ಕೆ ಸರ್ವ ಸ್ವಾತಂತ್ರ್ಯ ಅತ್ಯಗತ್ಯ.

ಜಾಗತಿಕ ಇತಿಹಾಸದಲ್ಲಿ ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳು ವಿಜ್ಞಾನ ಮತ್ತು ತಂತ್ರ ವಿಜ್ಞಾನಗಳ ದೃಷ್ಟಿಯಿಂದ ಸುವರ್ಣ ಯುಗವಾದರೂ, ವಸಾಹತುಶಾಹಿ, ದಾಸ್ಯ ಮತ್ತು ದಾರಿದ್ರ್ಯದ ದೃಷ್ಟಿಯಿಂದ ಅಂಧಕಾರಯುಗವೆಂದೇ ಹೇಳಬೇಕಾಗಿದೆ. ಅದು ಅಸಮಾನತೆಯ, ಅನ್ಯಾಯದ, ಅಧರ್ಮದ, ಅಸತ್ಯದ, ದೈವದ್ರೋಹದ, ಶೋಷಣೆಯ ಹಾಗೂ ವರ್ಣದ್ವೇಷದ ಯುಗವೆಂದೇ ತಿಳಿಯಬೇಕಾಗಿದೆ. ಜಗತ್ತಿನ ಬಹುಭಾಗ ಗುಲಾಮಗಿರಿಯ ಪಂಜರದಲ್ಲಿ ಸಿಕ್ಕಿಕೊಂಡು ನರಳುತ್ತಿತ್ತು. ವಸಾಹತುಶಾಹಿ ವಿರುದ್ಧವಾದ ಸಂಗ್ರಾಮ ಮೊದಲು ಪ್ರಾರಂಭವಾದದ್ದೇ ಭರತಖಂಡದಲ್ಲೆಂಬುದನ್ನು ಇತಿಹಾಸಜ್ಞರು ಮರೆಯುತ್ತಾರೆ. ಅಮೆರಿಕ ಮತ್ತು ಫ್ರಾನ್ಸ್‌ಗಳ ಮೂಲಕ ಸ್ವಾತಂತ್ರ್ಯದ ಕಲ್ಪನೆ ಲೋಕದಲ್ಲೆಲ್ಲ ಹರಡಿತೆನ್ನುವುದು ವಿಚಾರಣೀಯ ಸಂಗತಿ. ಆ ದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದ ಸ್ವರೂಪವೇ ಬೇರೆ; ಭರತಖಂಡದಲ್ಲಿ ನಡೆದ ಹೋರಾಟದ

ಸ್ವರೂಪವೇ ಬೇರೆ. ಅದು ಸ್ವಜನರಲ್ಲಿಯೇ ನಡೆದ ಅಂತರ್ಯುದ್ಧ. ತಂತ್ರ ವಿದ್ಯೆಯಲ್ಲಿ, ಯುದ್ಧವಿಜ್ಞಾನದಲ್ಲಿ, ಸುಲಭ ಶ್ರೀಮಂತಿಕೆಯಲ್ಲಿ ಅಪೂರ್ವ ಸಾಮರ್ಥ್ಯವನ್ನು ಪಡೆದಿದ್ದ, ಅಪಾರ ಸೈನಿಕಶಕ್ತಿಯನ್ನು ಹೊಂದಿದ್ದ ವಿದೇಶೀಯ ಸಮ್ರಾಟರ ಕ್ರೂರ ದಾಡೆಯಿಂದ ಪಾರಾಗುವುದು ಸರಳ ಸುಲಭ ಸಾಮಾನ್ಯ ಸಂಗತಿಯಲ್ಲ. ಸೂರ್ಯ ಮುಳುಗದ ಸಾಮ್ರಾಜ್ಯವನ್ನು, ಪ್ರಲಯೋಪಮ ಶತಘ್ನಿ ಜ್ವಾಲೆಯನ್ನು ಅಹಿಂಸಾಸ್ತ್ರದ ಮೂಲಕ ಜಯ ಪ್ರದವಾಗಿ ಎದುರಿಸಿದ್ದೇ ಆ ಅಪೂರ್ವ ಸ್ವಾತಂತ್ರ್ಯ ಸಂಗ್ರಾಮದ ಪವಾಡ ಸದೃಶ ವೈಶಿಷ್ಟ್ಯ. ಇಪ್ಪತ್ತನೆಯ ಶತಮಾನದ ಆಶ್ಚರ್ಯ ಸಾಪೇಕ್ಷತಾ ವಾದವೂ ಅಲ್ಲ, ಕಮ್ಯುನಿಸಮ್ಮೂ ಅಲ್ಲ, ಹಿರೋಷೀಮಾ ಆಟಂ ಬಾಂಬೂ ಅಲ್ಲ, ಸತ್ಯಾಗ್ರಹವೆಂಬುದು ಸೂರ್ಯನಷ್ಟೇ ಸತ್ಯ. ಆ ಸತ್ಯವನ್ನರಿಯ ದಿದ್ದುದರಿಂದಲೇ ಭರತಖಂಡದ ಬುಡ ಅಲುಗಾಡುವಂತಾಗಿದೆ; ಜಗತ್ತು ಅಪಾಯದ ಅಂಚನ್ನು ಮುಟ್ಟುವಂತಾಗಿದೆ.

ಭರತಖಂಡದ ಸ್ವಾತಂತ್ರ್ಯ ತಂತ್ರವೇ ಲೋಕದ ದಾಸ್ಯರಾಷ್ಟ್ರಗಳ ಮುಕ್ತಿ ಮಂತ್ರವಾಯಿತೆಂಬುದನ್ನು ಇತಿಹಾಸಕಾರ ಮರೆಯಬಾರದು. ಭಾರತೀಯ ಸ್ವಾತಂತ್ರ್ಯದಿಂದ ಸ್ಫೂರ್ತಿಪಡೆದ ದೇಶಗಳಲ್ಲಿ ಸ್ವಾತಂತ್ರ್ಯಾವತಾರವಾಗು ತ್ತಿದೆ. ಭರತಖಂಡದ ಸ್ವಾತಂತ್ರ್ಯ ದಾಸ್ಯರಾಷ್ಟ್ರಗಳಿಗೆ ಭರವಸೆಯಾದರೆ, ಸಾಮ್ರಾಜ್ಯಷಾಹಿಗಳ ರಾಕ್ಷಸೀ ಚೇತನಕ್ಕೆ ರಾಮಬಾಣವಾಗುತ್ತದೆ.

ಸರ್ವಕಾಲ ಸರ್ವದೇಶ ಸರ್ವಮೋಕ್ಷ ಮಂತ್ರೀ,
ಅಸ್ವತಂತ್ರ ಸುಸ್ವತಂತ್ರಯಾದೆ ವಿಶ್ವತಂತ್ರಿ.
ಮನುಜಕುಲದ ಪುರೋಗತಿಗೆ ಪೂಜ್ಯ ಅಧಿಷ್ಠಾತ್ರಿ,
ಅಖಂಡಿತೇ ಸಖಂಡಿತೇ ನೀನೆ ಜಗದ್‌ಧಾತ್ರಿ.

ಎಂದು ಕವಿ ಭರತಮಾತೆಯನ್ನೂ, ಸ್ವಾತಂತ್ರ್ಯ ಲಕ್ಷ್ಮಿಯನ್ನೂ ಸ್ತುತಿಸು ವಲ್ಲಿ, ಭರತಖಂಡ ಜಗತ್ತಿಗೆ ನೀಡಬೇಕಾದ ಸಂದೇಶವನ್ನು ಅಭಿವ್ಯಕ್ತಗೊಳಿಸಿ ದಂತಿದೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮಹಾಸೇನಾನಿ ಗಾಂಧೀಜಿ ಎಂಬುದನ್ನೂ, ಸತ್ಯಾಗ್ರಹಾಸ್ತ್ರದಾತ ಅವರೇ ಎಂಬುದನ್ನೂ ಇಡೀ ಜಗತ್ತೇ ಬಲ್ಲುದು. ಆದ್ದರಿಂದಲೇ ಅವರು ರಾಷ್ಟ್ರಪಿತ ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಆಫ್ರಿಕಾಖಂಡದಲ್ಲಿ ಸ್ವಾತಂತ್ರ್ಯ ಬೀಜವನ್ನು ಬಿತ್ತಿ

ದವರೂ ಅವರೇ. ಅವರು ರಾಷ್ಟ್ರಪಿತ ಮಾತ್ರವಲ್ಲ, ಜಗತ್ಪಿತ ಎಂದೂ ಕವಿ ಕರೆದಿದ್ದಾರೆ. ಅಂಥವರನ್ನು ಗುರುತಿಸುವ, ಗೌರವಿಸುವ ಅದೃಷ್ಟ ದುರ್ದೈವೀ ಭಾರತಕ್ಕಿಲ್ಲ. ಯಾರು ಯಾರನ್ನೋ ಅವರೊಡನೆ ಹೋಲಿಸಲು ಕೃತಘ್ನ ಜನ ಕೂಗಾಡುತ್ತಿದ್ದಾರೆ. ಗಾಂಧೀಜಿಗೆ ಸಾಟಿ ಗಾಂಧೀಜಿಯೆ ಹೊರತು ಬೇರೊಬ್ಬರಿಲ್ಲ. ಸತ್ಯ, ಅಹಿಂಸೆ, ಅಸಹಕಾರ, ಶಾಸನಭಂಗ ಚಳುವಳಿಯ ಪರಿಣಾಮಗಳಿಗೆ ಶರಣಾಗತಿ, ಹಗೆಗೊದಗಿದ ಆಪತ್ತಿನ ಲಾಭ ನಿರಾಕರಣೆ—ಇವು ಸತ್ಯಾಗ್ರಹದ ಲಕ್ಷಣಗಳೆಂಬುದನ್ನವರು ದೀರ್ಘ ಪ್ರಯೋಗಾನುಭವದ ಫಲವಾಗಿ ಸಿದ್ಧಾಂತಗೊಳಿಸಿದ್ದಾರೆ. ಅವರು ಬರಿಯ ಕನಸುಗಾರರಲ್ಲ, ಪ್ರಾಯೋಗಿಕ ಆದರ್ಶವ್ಯಕ್ತಿಯೆಂಬುದನ್ನು ಲೋಕವೇ ಬಲ್ಲುದು. ಅಧಿಕಾರದ ಕೇಂದ್ರೀಕರಣ ಯಾವ ರೂಪದಲ್ಲಿದ್ದರೂ ಅಪಾಯ ಕಾರಿ. ಖಾಸಗಿ ಬಂಡವಾಳ ಮತ್ತು ಸರ್ಕಾರಿ ಬಂಡವಾಳಗಳೆರಡೂ ತಪ್ಪು. ಸರ್ಕಾರದ ಅಧಿಕಾರ ಅಧಿಕವಾದಂತೆಲ್ಲ ಮಾನವನ ಶೋಷಣೆ ಭೀಕರ ಪ್ರಮಾಣ ವನ್ನು ಮುಟ್ಟುತ್ತದೆ; ಅವನ ಸ್ವಾತಂತ್ರ್ಯಕ್ಕೆ ಧಕ್ಕೆಯೊದಗುತ್ತದೆಂಬುದ ರಲ್ಲಿ ಅವರಿಗೆ ಸಂದೇಹವಿಲ್ಲ. ಮಾನವೀಯತೆಗೆ ಅಹಿಂಸೆಯೇ ಆಧಾರ. ಆದರೆ ಹೇಡಿತನ ಮತ್ತು ಹಿಂಸೆಗಳ ನಡುವೆ ಆಯ್ಕೆ ಅನಿವಾರ್ಯವೆನ್ನುವುದಾದರೆ ತಾವು ಹಿಂಸೆಯನ್ನು ಸ್ವಾಗತಿಸುವುದಾಗಿ ಅವರು ಸ್ಪಷ್ಟಪಡಿಸುತ್ತಾರೆ. ಸತ್ಯಜೀವನದ ಸಾರಸರ್ವಸ್ವವೇ ಕ್ರಿಯೆ; ಸತ್ಯನಿಯಮಗಳ ಗರ್ಭದಿಂದ ನೈತಿಕ ಸೂತ್ರಗಳು ಹೊರಹೊಮ್ಮಬೇಕಾಗಿದೆಯೆಂಬುದು ಅವರ ಅಭಿಮತ. ಎಲ್ಲ ಮತಗಳ ಆಧ್ಯಾತ್ಮ ತತ್ತ್ವದ ಪ್ರಸರಣದಿಂದ ಮಾತ್ರ ಮತೀಯ ದ್ವೇಷ ನಿವಾರಣೆಯಾಗುತ್ತದೆಂಬುದು ಅವರ ಅಭಿಪ್ರಾಯ.

'ನನಗೆ ಭಾರತೀಯ ಸ್ವಾತಂತ್ರ್ಯಮಾತ್ರವೇ ಮುಖ್ಯವಲ್ಲ, ಎಲ್ಲ ರಾಷ್ಟ್ರ ಗಳು ಸ್ವಾತಂತ್ರ್ಯ ಪಡೆದಾಗಲೇ ನನಗೆ ಸಂತೃಪ್ತಿ. ಎಲ್ಲ ಸ್ವತಂತ್ರ ರಾಷ್ಟ್ರಗಳ ವಿಶ್ವಸಂಯುಕ್ತ ವ್ಯವಸ್ಥೆ ಕಾರ್ಯಗತಗೊಂಡಾಗ ನನಗೆ ಸಮಾಧಾನವಾಗು ತ್ತದೆ....ಬಡವರು ಈ ದೇಶ ತಮ್ಮದೆನ್ನುವಂತಾಗಬೇಕು; ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಅವರ ಧ್ವನಿಗೆ ಬೆಲೆ ಸಿಗುವಂತಾಗಬೇಕು, ದೇಶದಲ್ಲಿ ನೀಚೋಚ್ಚ ವರ್ಗಗಳಿರಬಾರದು; ಅಂಥ ಭಾರತದ ಏಳ್ಗೆಗಾಗಿ ನಾನು ದುಡಿಯುತ್ತೇನೆ' ಎಂದು ಗಾಂಧೀಜಿ ಮೇಲಿಂದ ಮೇಲೆ ಹೇಳುತ್ತಿದ್ದರು. ಮಾನವ ಕ್ಷೇಮವೆ ಪ್ರಗತಿಯ ಮಾನಕ; ಸರಳ ಜೀವನ ಮತ್ತು ದುಡಿಮೆಮಾತ್ರ ಯಶಸ್ಸಿನ ಮಾರ್ಗಗಳೆಂದವರು ಲೋಕಕ್ಕೆ ಕರೆ ನೀಡುತ್ತಾರೆ. ಅವರು ತಮ್ಮ ನಂಬಿಕೆ

ಗಳಿಗಾಗಿ ಪ್ರಾಣತೆತ್ತರು; ಕ್ರೌರ್ಯ ಮತ್ತು ದಮನ ಕೊನೆಗೊಳ್ಳಲೆಂದು ಪ್ರಾಣ ತ್ಯಾಗಮಾಡಿದರು; ಹಿಂದೂ ಮುಸ್ಲಿಮ್ ಸ್ನೇಹ ಚಿರಾಯುವಾಗ ಲೆಂದು ಹಾರೈಸುತ್ತ ಸತ್ತರು; ಅಸ್ಪೃಶ್ಯತೆ ನಿರ್ಮೂಲವಾಗಬೇಕೆಂದು ಹಂಬಲಿಸುತ್ತ ಕೊನೆಯುಸಿರೆಳೆದರು; ಜಗತ್ತು ಹಿಂಸೆಯಿಂದ ಮುಕ್ತಗೊಳ್ಳ ಲೆಂದು, ಅಲ್ಲಿ ಶಾಂತಿ ಶಾಶ್ವತವಾಗಿ ನೆಲಸಲೆಂದು ಪ್ರಾರ್ಥಿಸುತ್ತ ಹುತಾತ್ಮ ರಾದರು.

ಸತ್ಯ-ಅಹಿಂಸೆ ಸಹನೆ ಮಾನವೀಯತೆ ಗಾಂಧೀಜಿಯ ಬದುಕಿನ ಸಾರಾಂಶ ಗಳಾಗಿವೆ. ಆ ದ್ದ ರಿಂ ದ ಲೇ ಅನೇಕ ಲೋಕಪ್ರಮುಖರು ಅವರನ್ನು ಇಪ್ಪತ್ತನೆಯ ಶತಮಾನದ ಸಂತಫ್ರಾನ್ಸಿಸ್ ಎಂದು, ಬುದ್ಧನೆಂದು, ಕ್ರಿಸ್ತ ನೆಂದು ಹಲವು ಬಗೆಯಾಗಿ ಕರೆಯುತ್ತಾರೆ. ಕಳೆದ ಎರಡುಸಾವಿರ ವರ್ಷದ ಕಾಲಮಾನದಲ್ಲಿ ಜಗತ್ತುಕಂಡ ಮಹಾಪುರುಷನೆಂದು ಗಾಂಧೀಜಿಯ ಜೀವನ ಚರಿತ್ರಕಾರರಾದ ಲೂಯಿಫಿಷರ್ ಘೋಷಿಸುತ್ತಾರೆ. ಭರತಖಂಡದ ಆತ್ಮ ಎಂದು, ಏಷಿಯಾದ ಬೆಳಕು ಎಂದು ಜವಹರಲಾಲನೆಹ್ರೂ ಅವರಿಗೆ ನುಡಿನಮನ ಸಲ್ಲಿಸುತ್ತಾರೆ. ಭರತಖಂಡದ ಇಂದಿನ ಅವನತಿಗೆ ಗಾಂಧಿತತ್ತ್ವ ವನ್ನು ಮರೆತದ್ದೇ ಕಾರಣ. ಜಗತ್ತಿನ ಹಲವು ಸಮಸ್ಯೆಗಳಿಗೆ ಆ ತತ್ತ್ವವೇ ಪರಿಹಾರವೆನ್ನುವುದನ್ನು ವಿವೇಕಿಗಳು ಅರಿಯಬೇಕಾಗಿದೆ.

ನಾಡಿನ ದಾಸ್ಯವಿಮೋಚನೆಗಾಗಿ ಸರ್ವತ್ಯಾಗಕ್ಕೂ ಸಿದ್ಧರಾಗಿ ಹುತಾತ್ಮ ರಾದ ನೇತಾಜಿ ಸುಭಾಷ್‌ಚಂದ್ರ ಬೋಸ್‌ರನ್ನು ಈ ಸಂದರ್ಭದಲ್ಲಿ ಕೃತಜ್ಞತೆ ಯಿಂದ ನೆನೆಯಬೇಕಾಗಿದೆ. ಅವರು ಉತ್ಕಟ ದೇಶಪ್ರೇಮಿ; ರೋಮಾಂಚ ಕಾರಕ ವ್ಯಕ್ತಿ. ಅಂದಿನ ಐಸಿಎಸ್ ಪರೀಕ್ಷೆಯಲ್ಲಿ ಪಾಸಾಗಿದ್ದ ಅವರು ಐಷಾರಾಮವಾಗಿ ಬದುಕಬಹುದಾಗಿದ್ದರೂ, ಸ್ವಾಮಿ ವಿವೇಕಾನಂದರ ಜೀವನ ಸಂದೇಶದಿಂದ ಉತ್ತೇಜಿತರಾಗಿ ಸ್ವಾತಂತ್ರ್ಯ ಸಂಗ್ರಾಮದ ಅಗ್ನಿ ಕುಂಡಕ್ಕೆ ಧುಮುಕುತ್ತಾರೆ. ಗುರಿ ಒಂದೆಯಾದರೂ, ಗಾಂಧೀಜಿ ನೇತಾಜಿ ಯರ ಸಾಧನಾಮಾರ್ಗ ಭಿನ್ನವಾಗುತ್ತವೆ. ಸುಭಾಷ್‌ಚಂದ್ರರದು ಕ್ಷಾತ್ರ ಮಾರ್ಗ. ಗಾಂಧೀಜಿಯ ಅಹಿಂಸಾಮಾರ್ಗದಿಂದ ಜಗತ್ತಿನ ಪ್ರಬಲ ಸಮ್ರಾಟ ರನ್ನು ಗೆಲ್ಲಲಾಗದೆಂಬ ತರ್ಕ ಅವರದು. ಅದರಿಂದಾಗಿ ಆಂಗ್ಲರ ಗುಪ್ತಚರರು ಯಾವಾಗಲೂ ಅವರನ್ನು ಹಿಂಬಾಲಿಸುತ್ತಾರೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಅವರು ಜೈಲಿನಿಂದ ತಪ್ಪಿಸಿಕೊಂಡು, ವೇಷಾಂತರದಿಂದ ದೇಶದ ಗಡಿಯನ್ನು ದಾಟಿ, ಜರ್ಮನಿಯನ್ನು ಸೇರಿ, ಹಿಟ್ಲರನ ನೆರವಿನಿಂದ ಆಜಾದ್

ಹಿಂದ್ ಸರ್ಕಾರವನ್ನು ಸ್ಥಾಪಿಸಿ, ಸೈನ್ಯವನ್ನು ಕಟ್ಟಿ, ಜಪಾನನ್ನು ನೆಲೆ ಮಾಡಿಕೊಂಡು, ತನ್ನ ಸೈನ್ಯಕ್ಕೆ ದೆಹಲಿ ಚಲೋ ಕರೆಯನ್ನು ಕೊಟ್ಟು, ವಿಮಾನಾಪಘಾತದಲ್ಲಿ ಮರಣಕ್ಕೆ ಗುರಿಯಾಗುತ್ತಾರೆ. ಅವರ ಮುಂದೆ ನೆಪೋಲಿಯನ್ ಕೂಡ ಅಲ್ಲ. ಅಂಥ ಜಗದೇಕವೀರರನ್ನು ನೆನೆದಾಗ ಹೇಡಿಯ ನಾಡಿ ನಾಡಿಗಳಲ್ಲಿ ವೀರರಕ್ತ ಹರಿಯದಿರಲಾರದು.

ಭಗತ್‌ಸಿಂಗ್ ಮೊದಲಾದ ನೂರಾರು ಮಂದಿ ತರುಣರ ಬಲಿದಾನದಿಂದ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿತು ನಿಜ. ಆ ಸ್ವಾತಂತ್ರ್ಯದ ಫಲವಾಗಿ ಗಾಂಧೀಜಿ ನೇತಾಜಿಯರ ಕನಸು ನನಸಾಗುತ್ತಿದೆಯೇ? ಎಂಬುದನ್ನು ಗಂಭೀರವಾಗಿ ವಿಚಾರಿಸಿದಾಗ ಮಾತ್ರ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರಗಳಿಗೆ ಕೊನೆ ಸನ್ನಿಹಿತವಾದೀತು; ದುರ್ಗತಿ ಸುಗತಿಮುಖವಾದೀತು. ಸ್ವಾತಂತ್ರ್ಯಕ್ಕೆ ಬೆಲೆ ಕಟ್ಟಲಾಗದು. ಅದು ಆತ್ಮ ಗೌರವದ, ಮನುಷ್ಯತ್ವದ, ಆಧ್ಯಾತ್ಮ ಶಕ್ತಿಯ ದಿವ್ಯಸಂಕೇತ. ಅದರಿಂದಾಗಿ ಭಾರತೀಯರು ಜಗತ್ತಿನ ಮುಂದು ವರಿದ ಜನಾಂಗಗಳೊಡನೆ ತಲೆಯೆತ್ತಿ ಸರಿಸಮನಾಗಿ ವರ್ತಿಸುವಂತಾಗಿದೆ. ಸ್ವಾತಂತ್ರ್ಯೋತ್ತರ ಭಾರತ ನಾನಾ ಕ್ಷೇತ್ರಗಳಲ್ಲಿ ಆಶ್ಚರ್ಯಕರ ಪ್ರಗತಿ ಯನ್ನು ಸಾಧಿಸಿದೆ ನಿಜ. ಆದರೆ ಈ ಪ್ರಗತಿಯ ಲಾಭವನ್ನು ಅನುಭವಿಸು ತ್ತಿರುವ ಜನ ಯಾರು? ದೀನಾತಿದೀನರೆ? ಗ್ರಾಮೀಣ ಜನರೆ? ಎಂಜಲೆಲೆ ಗಾಗಿ ನಾಯಿಗಳೊಡನೆ ಕಾದಾಡುವ ರಿಕ್ತರೆ? ಕೊಳಚೆಗೇರಿಗಳಲ್ಲಿ ವಾಸಿಸುವ ದುರ್ದೈವಿಗಳೆ? ಇಂಥ ಜನರ ಕಷ್ಟ ಕಾರ್ಪಣ್ಯಗಳಿಗೆ ಸಂವೇದನೆಗೊಳ್ಳದೆ, ಅದ್ದೂರಿಯ ಜೀವನ ನಡಸುವ ಶ್ರೀಮಂತರೆ? ಅಧಿಕಾರಿಗಳೆ? ಸಮಾಜದ ಕೊನೆಯ ಮನುಷ್ಯನನ್ನು ಕೇಳಿದರೂ ತಟಕ್ಕನೆ ಉತ್ತರ ದೊರೆತೀತು. ಗಾಂಧೀಜಿ ನೇತಾಜಿಯರ ವಿವೇಕಾನಂದರ ನಾಡಿನಲ್ಲಿ ನೈತಿಕ ಮೌಲ್ಯಗಳು ದಿನೇದಿನೇ ಕುಸಿಯುತ್ತಿವೆ ಎಂಬ ಮಾತಂತು ಸತ್ಯ. ಬುದ್ಧಿಜೀವಿಗಳ ಮೌನ, ಹೇಡಿತನ ಮತ್ತು ಕುಹಕ ಕಾಪಟ್ಯಗಳು ಅವರ ಮುಖಕ್ಕೆಸೆದ ರಾಡಿಗಳಾಗಿವೆ ಎಂದು ಈ ಸುವರ್ಣ ಸಂದರ್ಭದಲ್ಲಿ ಘೋಷಿಸಬೇಕಾಗಿದೆ.

ಈ ಎಲ್ಲ ಭ್ರಷ್ಟಾಚಾರಗಳ ಮತ್ತು ಅಪಮೌಲ್ಯಗಳ ನಡುವೆಯೂ ನಾಡಿನ ಪೂರ್ವ ದಿಗಂತದಲ್ಲಿ ಆಶಾಕಿರಣ ಮೂಡುತ್ತಿದೆ ಎಂಬುದಕ್ಕೆ ಈ ಸಲದ ಹೆಚ್ಚು ಕಡಮೆ ಸರ್ವಾನುಮತದ ರಾಷ್ಟ್ರಪತಿಯ ಆಯ್ಕೆಯೇ ಸಾಕ್ಷಿ ಯಾಗಿದೆ. ದಲಿತ ಟಿಕೆಟ್ಟಿನ ಮೇಲೆ ಶ್ರೀ ಕೆ. ಆರ್. ನಾರಾಯಣರು ಆ ಸ್ಥಾನಕ್ಕೆ ಆಯ್ಕೆಗೊಂಡಿದ್ದಾರೆನ್ನುವುದಕ್ಕಿಂತ, ಅವರ ಸಾಧನೆ ಸಿದ್ಧಿರೂಪದ

ಅವರ ಭಾಗ್ಯತಾರೆಯೆ ಅವರ ಉನ್ನತಿಗೆ ಕಾರಣವಾಗಿದೆ ಎಂದು ಹೇಳ ಬೇಕಾಗಿದೆ. ಕೇರಳದ ಕೊಟ್ಟಾಯಂ ಜಿಲ್ಲೆಯ ಉಳವೂರಿನ ಬಡಕುಟುಂಬ ವೊಂದರಲ್ಲಿ ಜನಿಸಿ, ವಿದ್ಯಾರ್ಥಿ ದಶೆಯಲ್ಲಿ ಸರ್ವ ಪ್ರಥಮಗಳನ್ನು ಗಿಟ್ಟಿಸಿ ಕೊಂಡರೂ, ಗುಮಾಸ್ತೆಯಾಗಿ ಪತ್ರಿಕೋದ್ಯೋಗಿಯಾಗಿ ಜೀವನವನ್ನು ಹೊರೆಯುತ್ತಿದ್ದು, ಜೆಆರ್‌ಡಿ ತಾತಾ ಅವರ ಕೃಪೆಯಿಂದ ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಲ್ಲಿ ಹೆರಾಲ್ಡ್‌ಲಾಸ್ಕಿಯ ಬಳಿ ಸ್ನಾತಕೋತ್ತರ ವ್ಯಾಸಂಗವನ್ನು ಮುಂದುವರಿಸಿ, ರಾಜಕೀಯ ಶಾಸ್ತ್ರದಲ್ಲಿ ಪ್ರಥಮದರ್ಜೆ ಯನ್ನು ಪಡೆದಾಗ, ಅವರ ಭಾಗ್ಯದ ಬಾಗಿಲು ತೆರೆಯುತ್ತದೆ. ಲಾಸ್ಕಿ ಯವರು ಅವರ ಬಗ್ಗೆ ನೆಹ್ರೂ ಅವರಿಗೆ ಶಿಫಾರಸು ಪತ್ರ ನೀಡಲಾಗಿ, ವಿದೇಶೀಯ ವ್ಯವಹಾರಗಳ ಇಲಾಖೆಯಲ್ಲಿ ಅವರಿಗೆ ಸೂಕ್ತ ಸ್ಥಾನ ದೊರೆಯು ತ್ತದೆ. ಆ ಪದವಿ ಅವರನ್ನು ರಂಗೂನ್, ಟೋಕಿಯೋ, ಲಂಡನ್, ಕ್ಯಾನಬೆರಾ, ಹಾನಾಯ್, ಬ್ಯಾಂಕಾಕ್, ಇಸ್ತಾನ್‌ಬುಲ್, ಬೀಜಿಂಗ್, ವಾಷಿಂಗ್‌ಟನ್ ಮೊದಲಾದ ನಗರಗಳಿಗೆ ಕರೆದೊಯ್ಯುತ್ತದೆ. ರಂಗೂನ್ ನಲ್ಲಿದ್ದಾಗ ಮಾತಿಂಟ್‌ತಿಂಟ್ ಅವರನ್ನು ಮದುವೆಯಾಗುತ್ತಾರೆ. ಅವರ ಭಾರತೀಯ ಹೆಸರು ಉಷಾ. ಜವಹರ್ ವಿಶ್ವವಿದ್ಯಾನಿಲಯದ ಕುಲಪತಿ ಯಾಗಿ, ಕೇಂದ್ರದ ಮಂತ್ರಿಯಾಗಿ, ಕೊನೆಗೆ ಉಪರಾಷ್ಟ್ರಪತಿಯಾಗಿ ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಕಳಂಕರಹಿತವಾಗಿ ನೆರವೇರಿಸಿ, ಪಕ್ಷಾತೀತರಾಗಿ ವಿವಾದಾತೀತರಾಗಿ ಜನಮನವನ್ನು ಗೆದ್ದುಕೊಳ್ಳುತ್ತಾರೆ. ಗಾಂಧೀಜಿಯ ಆಶಯನ್ನು ಈಡೇರಿಸಿ, ರಾಷ್ಟ್ರಪತಿಯ ಪೀಠವನ್ನಲಂಕರಿಸಿರುವ ಈ ವಿದ್ವಾಂಸರಿಗೆ ದೇಶದ ಇಂದಿನ ಪರಿಸ್ಥಿತಿಯಲ್ಲಿ ಯಶಸ್ಸು ಶುಭಗಳೊದಗ ಲೆಂದು ನಾಡಿನ ಜನ ಹಾರೈಸಬೇಕಾಗಿದೆ!

ಸ್ವಾತಂತ್ರ್ಯ ಚಿರಾಯುವಾಗಲಿ!

ದೇಜಗೌ

ಅಚ್ಚಳಿಯದ ಪುಟಗಳು

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦೦೦೪

ಭಾರತ ಸ್ವಾತಂತ್ರ್ಯದ ಬಗ್ಗೆ ಹಲವಾರು ಅಸದೃಶ ಕೃತಿಗಳಿವೆ. ಆ ಪೈಕಿ 'ಡೊಮಿನಿಕ್ ಲೇಪಿಯರ್' ಮತ್ತು 'ಲ್ಯಾರಿ ಕಾಲಿನ್ಸ್' ಬರೆದಿರುವ 'ಫ್ರೀಡಂ ಎಟ್ ಮಿಡ್‌ನೈಟ್' ಗ್ರಂಥವೂ ಒಂದು. ಇದರಲ್ಲಿ ಉದಾಹರಿಸಿರುವ ಘಟನೆಗಳಲ್ಲಿ ಕೆಲವನ್ನು ಇಲ್ಲಿ ನಿರೂಪಿಸಿದೆ.

ಗಾಂಧೀಜಿಯಿಂದ ಗುರುಚರಣ್‌ಸಿಂಗ್ ಬದುಕಿದ

ಗಾಂಧಿ–ಇರ್ವಿನ್ ಒಪ್ಪಂದದಿಂದ ಕೂಡಲೇ ಅನುಕೂಲವಾದದ್ದು ಗುರುಚರಣ್‌ಸಿಂಗ್ ಎಂಬ ವಿದ್ಯಾರ್ಥಿಗೆ. ಕೈಗಳನ್ನು ಹಿಂದಕ್ಕೆ ಕಟ್ಟಿ ಗುರುಚರಣ್‌ನನ್ನು ಲಾಹೋರಿನ ಕಾರಾಗೃಹದಿಂದ ಆ ಬೆಳಗ್ಗೆ ಅಂಗಳದಲ್ಲಿರುವ ನೇಣುಗಂಬಕ್ಕೆ ಕರೆದೊಯ್ಯುತ್ತಿದ್ದರು. ನೇಣುಗಂಬಕ್ಕೆ ಬರುವಷ್ಟರಲ್ಲಿ ಮೊಗಸಾಲೆಯಿಂದ ಒಬ್ಬ ಓಡೋಡಿ ಬಂದ. ಗುರುಚರಣ್ ಹಿಂದೆ ತಿರುಗಿ ನೋಡಿದ. ಬಂದವನು ಇಂಗ್ಲಿಷ್ ಜೈಲರ್ ಮೇಜರ್ ಮಾರ್ಟಿನ್. ಆತ ಕೈಯಲ್ಲಿ ಒಂದು ನೀಲಿ ಕಾಗದ ಹಿಡಿದಿದ್ದ.

'ಅಭಿನಂದನೆಗಳು', ಎಂದು ಕೂಗಿದ ಮಾರ್ಟಿನ್.

ಗುರುಚರಣ್‌ಗೆ ಮೂರ್ಛೆ ಹೋಗುವಂತಾಯಿತು.

'ನೀನೊಬ್ಬ ಅಸಾಧ್ಯ ಮನುಷ್ಯ. ನಾನು ನೇಣುಗಂಬಕ್ಕೆ ಹೋಗುತ್ತಿದ್ದೇನೆ. ಇದಕ್ಕೆ ನನಗೆ ಅಭಿನಂದನೆಯೋ?'

ಇಲ್ಲ. ಗಾಂಧಿ–ಇರ್ವಿನ್ ಒಪ್ಪಂದದ ಪ್ರಕಾರ ಎಲ್ಲಾ ದಂಡನೆಗಳನ್ನೂ ಮುಂದಕ್ಕೆ ಹಾಕಿದ್ದಾರೆ', ತೊದಲಿದ ಮಾರ್ಟಿನ್.

ಕೆಲವು ವಾರಗಳ ನಂತರ ಗುರುಚರಣ್‌ಸಿಂಗ್‌ನ ಬಿಡುಗಡೆಯಾಯಿತು. ಆತನ ಪ್ರಥಮ ಕೃತಜ್ಞತಾ ನಡವಳಿಕೆ ಎಂದರೆ ಗಾಂಧೀಜಿಯವರನ್ನು ಅವರ ಆಶ್ರಮದಲ್ಲಿ ಭೇಟಿಯಾಗುವುದು. ಕಟ್ಟಾಕ್ರಾಂತಿಕಾರಿಯಾಗಿದ್ದ ಗುರುಚರಣ್ ಮಹಾತ್ಮರ ಪಾದಕ್ಕೆರಗಿ ತಾನು ಇನ್ನು ಮುಂದೆ ಹಿಂಸಾಚಾರವನ್ನು ತ್ಯಜಿಸಿ ಅಹಿಂಸೆಯ ಮಾರ್ಗದಲ್ಲಿ ನಡೆಯುತ್ತೇನೆಂದು ಪ್ರತಿಜ್ಞೆ ಮಾಡಿದ. ವಿಧಿ ವಿಲಾಸ! ಗಾಂಧೀಜಿ ಗುಂಡಿನೇಟಿಗೆ ಆಹುತಿಯಾಗಿ ಬಿದ್ದಾಗ ಅವರನ್ನು ಎತ್ತಿಕೊಂಡು ಬಂದಿದ್ದು ಗುರುಚರಣ್.

* * * * *

ನಾಯಿಗೆ ತಂದ ಮಾಂಸವನ್ನು ವೈಸ್‌ರಾಯ್ ಪತ್ನಿ ತಿಂದಳು

ವೈಸ್‌ರಾಯ್ ಆಗಿ ನೇಮಕಗೊಂಡ ಮೌಂಟ್‌ಬೇಟನ್ ಭಾರತಕ್ಕೆ ಪತ್ನಿಯೊಡನೆ ಯಾರ್ಕ್ ವಿಮಾನದಲ್ಲಿ ಬಂದು ವೈಸ್‌-ರಾಯ್ ಭವನದಲ್ಲಿ ವೇವೆಲ್‌ರನ್ನು ಕಂಡು ಮಾತನಾಡುತ್ತಿದ್ದರು.

ಎಡ್ವಿನಾ ಆಳೊಬ್ಬನಿಗೆ ಲಂಡನ್ನಿನಿಂದ ಆಕೆ ತಂದಿದ್ದ ನಾಯಿಗಳಾದ ಮಿಜೆನ್ ಮತ್ತು ಜಿಬ್‌ಗೆ ತಿಂಡಿ ತರಬೇಕೆಂದು ಹೇಳಿದರು. ಅರ್ಧ ಗಂಟೆ ತರುವಾಯ ವೇಷ ಧರಿಸಿದ ಇಬ್ಬರು ಆಳುಗಳು ವಿಧಿಪೂರ್ವಕ

ವಾಗಿ ಆಕೆಯ ಮಲಗುವ ಕೋಣೆಗೆ ಕೈಯ್ಯಲ್ಲಿ ಬೆಳ್ಳಿಯ ಟ್ರೇ ಹಿಡಿದುಕೊಂಡು ಬಂದರು. ಟ್ರೇನಲ್ಲಿದ್ದ ಪೋರ್ಸಲೀನ್ ತಟ್ಟೆಯಲ್ಲಿ ಹೊಸದಾಗಿ ಹುರಿದ ಗಮಗಮಿಸುತ್ತಿದ್ದ ಕೋಳಿಯ ಎದೆಯ ಮಾಂಸವಿತ್ತು. ಕಣ್ಣುಗಳನ್ನಗಲಿಸಿ ಎಡ್ವಿನಾ ತಟ್ಟೆಯನ್ನು ನೋಡಿದರು. ಮಿತವ್ಯಯ ಪಾಲಿಸುತ್ತಿದ್ದ ಇಂಗ್ಲೆಂಡಿನಲ್ಲಿ ಅಂಥ ಆಹಾರ ಕಂಡು ವಾರಗಳೇ ಆಗಿದ್ದುವು. ನಾಯಿಗಳು ಮಾಂಸಕ್ಕೆ ಬೊಗಳುತ್ತಾ ಆಕೆಯ ಕಾಲಬಳಿಗೆ ಬಂದವು. ಆಳುಗಳ ಕೈಯಿಂದ ತಟ್ಟೆಗಳನ್ನು ತೆಗೆದುಕೊಂಡು ಅವರನ್ನು ಕಳುಹಿಸಿ, ಅವರು ಬಾತ್‌ರೂಂಗೆ ಹೋಗಿ ಬಾಗಿಲು ಹಾಕಿಕೊಂಡು ತಟ್ಟೆಯಲ್ಲಿದ್ದ ಮಾಂಸವನ್ನು ತಿಂದರು. ಮುಂದೆ ವೈಸ್‌ರಾಯ್ ಪತ್ನಿಯಾಗಿ ೨೫,೦೦೦ ಜನರಿಗೆ ಆತಿಥ್ಯ ನೀಡುವ ಆಕೆ ಈಗ ನಾಯಿಗೆ ತಂದ ಮಾಂಸ ಮುಕ್ಕಿದರು.

* * * * *

'ಅರೆನಗ್ನ ಫಕೀರ್'—ಗಾಂಧಿ

ಮಹಾತ್ಮ ಗಾಂಧೀಜಿ ಬ್ರಿಟಿಷ್ ಚಕ್ರವರ್ತಿಯೊಡನೆ ಬಕಿಂಗ್‌ಹ್ಯಾಂ ಪ್ಯಾಲೆಸ್‌ಗೆ ಹೋಗುತ್ತಿರುವುದನ್ನು ಕಂಡು ಬ್ರಿಟಿಷ್ ಜನತೆ ಆಶ್ಚರ್ಯಗೊಂಡಿತು. ಗಾಂಧೀಜಿ ತೊಟ್ಟಿದ್ದು ಮಂಡಿಯ ಮೇಲೆ ಬರುತ್ತಿದ್ದ ಪಂಚೆ ಮತ್ತು ಹೊದೆಯಲು ಬಿಳಿ ಶಾಲು ಮತ್ತು ಕಾಲಿಗೆ ಎಕ್ಕಡ—ಕಿಪ್ಲಿಂಗ್‌ನ ಗಂಗಾ—ದಿನ್‌ನಂತೆ. ಚಕ್ರವರ್ತಿಯನ್ನು ಭೇಟಿಯಾಗುವಾಗ ತೊಟ್ಟಿದ್ದ ಅವರ ಉಡುಪಿನ ಸೂಕ್ತತೆಯ ಬಗ್ಗೆ ಕೇಳಿದಾಗ ಗಾಂಧೀಜಿ ನಗುತ್ತಾ 'ಚಕ್ರವರ್ತಿ ನಮ್ಮಿಬ್ಬರಿಗೆ ಸಾಕಾಗುವಷ್ಟು ಉಡುಪನ್ನು ತೊಟ್ಟಿದ್ದರು' ಎಂದರು.

* * * * *

ನರಹಂತಕ ಡೈಯ್ಯರ್

೬-೪-೧೯೧೯, ಹರತಾಳ ಮಾಡಬೇಕಾದ ದಿನ. ಭಾರತ ಸರ್ಕಾರದ ವಿರುದ್ಧ ನಡೆಸುವ ಮುಷ್ಕರ. ಮಾತನಾಡದೆ ಸರ್ಕಾರದ ಕೆಲಸಗಳನ್ನು ಅಚಲಿತ ಮಾಡಿ ಸರ್ಕಾರಕ್ಕೆ ಜನರು ತಮ್ಮ ಧ್ಯೇಯವನ್ನು ತಿಳಿಸುವ ಮಾರ್ಗ ಹರತಾಳ.

ದುರದೃಷ್ಟ ಎಲ್ಲೆಡೆ ಜನ ಹರತಾಳವನ್ನು ಅಹಿಂಸಾ ಮಾರ್ಗದಲ್ಲಿ ಆಚರಿಸಲಿಲ್ಲ. ಅಲ್ಲಲ್ಲಿ ದೊಂಬಿ ಕಾಣಿಸಿಕೊಂಡಿತು. ಅಮೃತಸರದಲ್ಲಿ ಹೆಚ್ಚು ಗಲಾಟೆ. ಸರ್ಕಾರ ಪ್ರಜೆಗಳ ಹಕ್ಕುಗಳನ್ನು ನಿರ್ಬಂಧಗೊಳಿಸಿರುವುದನ್ನು ಧಿಕ್ಕರಿಸಲು ಜನರು ೧೩ನೇ ತಾರೀಖು ಒಟ್ಟಿಗೆ ಸೇರಿದರು. ಅದೊಂದು ಶಾಂತಿಯುತವಾದ ಆದರೆ ಕಾನೂನು ವಿರೋಧಿ ಸಭೆ. ಈ ಸಭೆಯಾಗಬೇಕಾಗಿದ್ದುದು 'ಜಲಿಯನ್ ವಾಲಾಬಾಗ್'ನಲ್ಲಿ. ಅದಕ್ಕೆ ಇದ್ದುದು ಒಂದೇ ದಾರಿ, ಎರಡು ಕಟ್ಟಡಗಳ ಮಧ್ಯೆ. ಸಭೆ ಶುರುವಾಯಿತು. ಅಮೃತಸರದ ಮಾರ್ಷಲ್ ಲಾ ಕಮಾಂಡರ್, ಬ್ರಿಗೇಡಿಯರ್ ಆರ್. ಸಿ. ಡೈಯ್ಯರ್ ೫೦ ಸಿಪಾಯಿಗಳನ್ನು ಕರೆದುಕೊಂಡು ಬಂದ. ಅವರನ್ನು ದ್ವಾರದ ಎರಡು ಕಡೆಯೂ ನಿಲ್ಲಿಸಿ ಎಚ್ಚರಿಕೆ ಕೊಡದೆ ಮೆಷಿನ್‌ಗನ್ನುಗಳಿಂದ ತುಪಾಕಿ ಹಾರಿಸಲು ಆಜ್ಞೆ ಕೊಟ್ಟ. ಹತ್ತು ನಿಮಿಷಗಳ ಕಾಲ ಆ ಸಿಪಾಯಿಗಳು ಒಳಗಿದ್ದ ಭಾರತೀಯರ ಮೇಲೆ ಕರುಣೆ ಇಲ್ಲದೆ ಗುಂಡು ಹಾರಿಸಿದರು. ಗುಂಡು ಹಾರಿಸಿದ್ದು ೧೬೫೦ ಬಾರಿ, ೧೫೧೬ ಜನ ಸತ್ತರು ಅಥವಾ ಗಾಯಗೊಂಡರು. ನಂತರ ಡೈಯ್ಯರ್, ತನ್ನ ಸಿಪಾಯಿಗಳೊಡನೆ 'ಏನೋ ಒಂದು

ಒಳ್ಳೆಯ ಕಾರ್ಯ' ಮಾಡಿದೆ ಎಂದು ತಿಳಿದು ವಾಪಸ್ಸಾದ.

ಡೈಯ್ಯರ್‌ನನ್ನು ಅವನು ಮಾಡಿದ ಕಾರ್ಯಕ್ಕೆ ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ್ ಸದಸ್ಯರು ಛೀಮಾರಿ ಹಾಕಿದರು. ಸೇನೆಗೆ ರಾಜೀನಾಮೆ ಕೊಡುವಂತೆ ಆತನನ್ನು ಕೇಳಲಾಯಿತು. ಆದರೆ ದೊರೆಯಬೇಕಾದ ಪೂರ್ಣ ಪ್ರಮಾಣದ ಪೆನ್‌ಷನ್ ಅವನಿಗೆ ದೊರೆಯಿತು. ಆತನ ಕಾರ್ಯವನ್ನು ಭಾರತದಲ್ಲಿದ್ದ ಬಹಳ ಜನ ಬ್ರಿಟಿಷರು ಕೊಂಡಾಡಿದರು. ಅವಧಿಗೆ ಮುಂಚೆ ಕೆಲಸದಿಂದ ನಿವೃತ್ತಿಯಾಗುತ್ತಾನೆಂದು ಕ್ಲಬ್‌ಗಳಲ್ಲಿ ಅವನಿಗೋಸ್ಕರ ವಂತಿಕೆ ಶೇಖರಿಸಿದರು. ಅದೊಂದು ಭಾರಿ ಪ್ರಮಾಣದ ಹಣ ೨೬,೦೦೦ ಪೌಂಡುಗಳು. ಸರ್ಕಾರದಲ್ಲಿ ನಂಬಿಕೆ ಇಟ್ಟ ಗಾಂಧೀಜಿಗೆ ಬ್ರಿಟಿಷರು ನಂಬಿಕೆದ್ರೋಹ ಮಾಡಿದ್ದಾರೆನಿಸಿತು.

* * * * *

ನೆಹರೂ ಮತ್ತು ಭಾರತೀಯರು

ಹುಟ್ಟಿದ್ದು ಹೆಮ್ಮೆಯ ಶ್ರೀಮಂತ ಕಾಶ್ಮೀರಿ ವಂಶದಲ್ಲಿ. ೧೬ ವರ್ಷದ ಹುಡುಗನಾಗಿದ್ದಾಗ ನೆಹರೂ ಇಂಗ್ಲೆಂಡಿಗೆ ಹೋಗಿ ಹ್ಯಾರೊ ಶಾಲೆ ಸೇರಿದರು. ಅಲ್ಲಿ ಕ್ರಿಕೆಟ್ ಮತ್ತು ಲ್ಯಾಟಿನ್ ಕಲಿತರು, ವಿಜ್ಞಾನ ವ್ಯಾಸಂಗ ಮಾಡಿದರು. ಕೇಂಬ್ರಿಜ್‌ನಲ್ಲಿ 'ನೀಶೆ' ಮತ್ತು 'ಚಾಸರ್' ಅನ್ನು ಅಭ್ಯಾಸ ಮಾಡಿದರು. ಇನ್ಸ್ ಕೋರ್ಟಿನಲ್ಲಿ ಬ್ಯಾರಿಸ್ಟರ್‌ನ ವಾದವೈಖರಿಯನ್ನು ಕಂಡು ಮೆಚ್ಚಿದರು. ಹೋದ ಕಡೆಯಲ್ಲೆಲ್ಲಾ ತಮ್ಮ ಚೆಲುವು, ನಡತೆ ಮತ್ತು ಸಂಸ್ಕೃತಿಯಿಂದ ಜನರ ಮನಸ್ಸನ್ನು ಗೆದ್ದರು ನೆಹರೂ. ಇಂಗ್ಲಿಷರ ಸಮಾಜದಲ್ಲಿ ಅವರು ಸುಲಭವಾಗಿ ಬೆರೆಯುತ್ತಿದ್ದರು. ಹೀಗಾಗಿ ಏಳು ವರ್ಷಗಳ ನಂತರ ಇಂಗ್ಲೆಂಡ್ ಬಿಟ್ಟು ಅಲಹಾಬಾದಿಗೆ ಬಂದಾಗ ಪೂರ್ಣವಾಗಿ ನೆಹರೂ ಅಭಾರತೀಯರಾಗಿರುವುದನ್ನು ಅವರ ಸ್ನೇಹಿತರು ಮತ್ತು ಕುಟುಂಬದವರು ಕಂಡುಕೊಂಡರು. ಅವರ ಅಭಾರತೀಯತನದ ಮಿತಿ ಅವರಿಗೆ ಸ್ವಲ್ಪ ದಿನದಲ್ಲೇ ತಿಳಿಯಿತು. ಸ್ಥಳೀಯ ಬ್ರಿಟಿಷ್ ಕ್ಲಬ್‌ನ ಸದಸ್ಯತ್ವ ಅವರಿಗೆ ಸಿಗಲಿಲ್ಲ. ಅವರು ಹ್ಯಾರೊ ಮತ್ತು ಕೇಂಬ್ರಿಜ್‌ನಲ್ಲಿ ಓದಿರಬಹುದು. ಆದರೆ ಶ್ವೇತರಿಗೆ ಮಾತ್ರ ಮೀಸಲಾಗಿದ್ದ ಆ ಕ್ಲಬ್‌ನಲ್ಲಿ ಅವರಿಗೆ ಕಪ್ಪು ಭಾರತೀಯನೆಂದು ಪ್ರವೇಶವಿಲ್ಲ. ಇದರಿಂದ ನೆಹರೂರವರ ಮನಸ್ಸು ಕಹಿಯಾಯಿತು. ಭಾರತದ ಸ್ವಾತಂತ್ರ್ಯಕ್ಕೆ ಅವರು ಕಾಂಗ್ರೆಸ್ ಸೇರಿದರು. ಜೈಲು ಅವರಿಗೆ ರಾಜಕೀಯ ಪ್ರಶಿಕ್ಷಣ ಕೇಂದ್ರವಾಯಿತು. ಇಂಗ್ಲೆಂಡಿನ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಮತ್ತು ಕಾರ್ಲ್ ಮಾರ್ಕ್ಸ್‌ನ ಸಮಾಜವಾದವಿರುವ ಸ್ವತಂತ್ರ ಭಾರತ ಅವರ ಕನಸಾಯಿತು.

ನೆಹರೂ ಕಂಡ ಭವಿಷ್ಯ ಭಾರತವನ್ನು ಅವರಲ್ಲದೆ ಬೇರೊಬ್ಬರು ಸೃಷ್ಟಿಸಲು ಸಾಧ್ಯವಿಲ್ಲ. ಕಾಂಗ್ರೆಸ್ಸಿನ ತತ್ತ್ವದಂತೆ ನೆಹರೂ ಖಾದಿ ಧರಿಸುತ್ತಿದ್ದರೂ ಅಂತರಾತ್ಮದಲ್ಲಿ ಅವರೊಬ್ಬ 'ಆಂಗ್ಲ ಸಂಭಾವಿತ'. ವಿಜ್ಞಾನ ಓದಿದ ಅವರಿಗೆ ದೇವರಲ್ಲಿ ಅಥವಾ ಅತೀಂದ್ರಿಯದಲ್ಲಿ ನಂಬಿಕೆ ಇಲ್ಲ. ಪೂಜಾರಿಗಳು, ಸಾಧುಗಳು, ಸನ್ಯಾಸಿಗಳು, ಫಕೀರರು ದೇಶದ ಪ್ರಗತಿಗೆ ಅಡ್ಡ ಎಂದು ಅವರನ್ನು ಕಂಡರೆ ಜಿಗುಪ್ಸೆ. ಹಾಗಿದ್ದರೂ ಸಾಧುಸಂತರು ಕುರುಡು ನಂಬಿಕೆ ಇಟ್ಟವರು, ಎಲ್ಲಾ ಭಾರತೀಯರು ನೆಹರೂರವರನ್ನು ಗೌರವಾದರದಿಂದ ಪ್ರೀತಿಸುತ್ತಿದ್ದರು.

ಗಾಮಿನಿಯ ಉಡುಗೊರೆ

ಸರಸ್ವತಿ ಬಡೆಕ್ಕಿಲ
ಎಂ. ೪೭, ೩ನೇ ಹಂತ
ಕೆ.ಟಿ.ಕೆ. ಬಡಾವಣೆ, ಕುವೆಂಪು ನಗರ
ಮೈಸೂರು-೫೭೦ ೦೨೩

ನಿಸರ್ಗಕ್ಕೆ ಜೀವಸಂಕುಲ ಸೃಷ್ಟಿಗೈಯ್ಯುವುದರಲ್ಲಿ ಉದ್ದೇಶವೇನಾದರೂ ಇರುವುದಾದರೆ ಅದು : ಸಹಜೀವನದಿಂದ ಸಮೃದ್ಧಿ, ನಿಸರ್ಗದೊಂದಿಗೆ ಶ್ರುತಿಲಯಲೀನ ಜೀವನ, ಪ್ರೀತಿನೀತಿಯುಕ್ತ ದಿನಚರಿ. ಈ ಯಾವುದೇ ಉದ್ದೇಶಕ್ಕೆ ವ್ಯತಿರಿಕ್ತವಾಗಿ "ಬುದ್ಧಿವಂತ" ಮನುಷ್ಯ ವರ್ತಿಸುವಾಗ ಮೂಲತಃ ಆತನ ಜೀವನವೇ ದುಸ್ಸಹನೀಯವಾಗುವುದು. ಯುದ್ಧ ಒಂದು ನಿದರ್ಶನ ಮಾತ್ರ. ಈ ಮರುಭೂಮಿಯಲ್ಲಿಯೂ ಬಂಧಸಂಬಂಧಗಳ ಜೀವಾಂಕುರ ಎಂಥ ಪವಾಡಗಳನ್ನು ಮಾಡಿಸಬಲ್ಲುದು ಎಂಬುದಕ್ಕೆ ಜೀವಂತ ನಿದರ್ಶನವಿಲ್ಲಿದೆ—

ಬದುಕುವ ಅವಶ್ಯಕತೆ ಶ್ರೀಲಂಕೆಯ ಆ ತರುಣ ಸಿಪಾಯಿಗಿದ್ದಷ್ಟು ಇನ್ನಾರಿಗೂ ಇರಲಿಲ್ಲ.

* * *

ಅರ್ಧ ಡಜನ್ ಸೈನಿಕರ ನಾಯಕ (ಲ್ಯಾನ್ಸ್‌ಕೊರ್ಪೊರಲ್) ಗಾಮಿನಿ ಕುಲರತ್ನೆ ತನ್ನ ಜತೆಗಾರರೊಡನೆ 'ತೊಡೆಸೋಂಕಿ'ನಲಿ ನಿಂತು ಕಾವಲು ಕೋಣೆಯ ಸರಳುಗಳ ಬಲೆಯ ಕಿಟಕಿಯಿಂದ ದಂಗೆಕೋರರ ಸುಳಿವಿಗಾಗಿ ಏಕಾಗ್ರತೆಯಿಂದ ಸೂಕ್ಷ್ಮ ಅವಲೋಕನೆ ನಡೆಸಿದ್ದ. ಲಂಕೆಯ ಉತ್ತರದ ತುದಿಯ ಈ 'ಎಲಿಫೆಂಟ್ ಪಾಸ್'ನಲ್ಲಿ ಕೇವಲ ೨೪ರ ತರುಣ ೬೦೦ ಸಶಸ್ತ್ರ ಸೈನಿಕರ ಸುರಕ್ಷೆಗಾಗಿ ಕಾವಲು ಕೆಲಸ ಮಾಡುತ್ತಾ ಇದ್ದ. ಅವನ ಮುಂದೆ, ಎಡ, ಬಲಗಳಲ್ಲಿ 'ತಮಿಳು ಈಲಂ'ಗೆ ಸೇರಿದ 'ಲಿಬರೇಶನ್ ಟೈಗರ್'ಗಳ ಐದು ಸಾವಿರ ತಂಡಗಳು ನೆಲೆಯೂರಿದ್ದ ಅರಣ್ಯ ಪ್ರದೇಶವಿದೆ. ಟೈಗರ್‌ಗಳ ದಳವಾಯಿ 'ಬೆಂಕಿ ನವಾಬ' (ಪ್ರಭಾಕರನ್ ?) ಹೇಳುವಂತೆ–ಅವರ ಎಲ್ಲ ಯುದ್ಧಗಳ ಜನನಿ ಈ ಪ್ರದೇಶ. ತಮಿಳು ಹುಲಿಗಳು ಹೋರಾಟದ ದೀಕ್ಷೆ ಹೊಂದಿದ ಸ್ಥಳವೂ ಇದೇ.

ಹತ್ತು ವರ್ಷಗಳಷ್ಟು ದೀರ್ಘಕಾಲ ಶ್ರೀಲಂಕೆಯಲ್ಲೆಲ್ಲ ನಿರಂತರ ಯಾದವೀಕಲಹವನ್ನು ಹಬ್ಬಿಸಿದ ಈ ಉಗ್ರಗಾಮಿಗಳಿಗೆ ಅನ್ನಾಹಾರ, ಮದ್ದುಗುಂಡು, ಔಷಧ ಇತ್ಯಾದಿಗಳನ್ನು ಸರಬರಾಜು ಮಾಡುವ

ಆಧಾರ: ೧೯೯೫ರ ಮೇ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿನ ದಿನೇಶ್ ವಟವಾಳಂ ಅವರ "ಗಾಮಿನೀಸ್ ಗಿಫ್ಟ್" ಲೇಖನ.

ಏಕೈಕ ಸಂಚಾರ ಮಾರ್ಗವೆಂದರೆ ಈ 'ಎಲಿಫೆಂಟ್‌ಪಾಸ್', ಇಂಥ ಆಯಕಟ್ಟಿನ ಸ್ಥಳವನ್ನು ವಶದಲ್ಲಿಟ್ಟುಕೊಂಡು ದಂಗೆಕೋರರ ಶಕ್ತಿಯನ್ನು ಹರಣಗೊಳಿಸುವ ಕಾರ್ಯದಲ್ಲಿ ಸೈನಿಕರು ನಿರತರಾಗಿದ್ದರು. ಇದರಿಂದಾಗಿ ದಿಕ್ಕುಗಾಣದ ಉಗ್ರರು ಒಂದೇ ಬಾರಿಗೆ ಈ ಕಾವಲು ಪಡೆಗಳ ಮೇಲೆ ಮುಗಿಬಿದ್ದು ತಮಗುಂಟಾದ ದೊಡ್ಡ ಅಡಚಣೆಯನ್ನು ನಿವಾರಿಸುವ ಸನ್ನಾಹದಲ್ಲಿದ್ದುದು ಸ್ಪಷ್ಟವಾಗಿತ್ತು.

ಒತ್ತೊತ್ತಾಗಿ ಸೇರಿಕೊಂಡು ಗಾಮಿನಿ, ಅವನ ಸೈನಿಕ ಸಿಬ್ಬಂದಿಯವರು ತಮ್ಮ ಏ.ಕೆ. ೪೭, ರೈಫಲ್‌ನ ಹಿಡಿಕೆಯ ಮೇಲೆ ಬೆರಳನ್ನಿರಿಸಿ ಸಜ್ಜಾಗಿ ನಿಂತಿದ್ದಾಗ ಅವರು ಕಂಡದ್ದೇನು? ವಿಚಿತ್ರಾಕಾರದ ಬಹು ದೊಡ್ಡ ವಾಹನವೊಂದು ಉರುಳುತ್ತಾ ಮುಂದೆ ಮುಂದೆ ಬರುತ್ತಾ ಇದೆ! ಅದಕ್ಕೂ ಗಾಮಿನಿಯಿದ್ದ ಬಂಕರ್-(ಅಡಗುತಾಣ)ಗೂ ನಡುವೆ ಕೇವಲ ನೂರು ಮೀಟರ್‌ಗಳ ಅಂತರವಿತ್ತಷ್ಟೆ!! ಸುಮಾರು ಆರು ಮೀಟರ್ ಎತ್ತರದ ಕಡು ಹಸಿರು ಬಣ್ಣದ ಆ ವಿನೂತನ ಟ್ಯಾಂಕ್ ಘರ್ಜಿಸುತ್ತಾ ರಭಸದಿಂದ ಮುನ್ನುಗ್ಗುತ್ತಿತ್ತು. ಹತ್ತಿರ ಹತ್ತಿರವಾಗುತ್ತಿದ್ದಂತೆ, ಅದೊಂದು ಮೆಷಿನ್‌ಗನ್ ಅಳವಡಿಸಲಾದ ಬೃಹದಾಕಾರದ ಬುಲ್‌ಡೋಜರ್ ಎಂದು ಗೊತ್ತಾಯಿತು. ಅದರ ಮುಖಭಾಗದಲ್ಲಿ ಹರಿತ ಧಾರೆಯ ಶಕ್ತಿಶಾಲಿ ಉಕ್ಕಿನ ತಗಡುಗಳ ಬೆಸುಗೆಯಿತ್ತು. ಅದರ ದಾರಿಗೆ ಅಡ್ಡ ಬಂದ ಎಂಥ ವಸ್ತುವನ್ನಾದರೂ ಕತ್ತರಿಸಿ ಪುಡಿಮಾಡಬಲ್ಲ, ಚಕ್ರಾಕಾರವಾಗಿ ಕಡೆಯಬಲ್ಲ, ಚಾಚುಗಡಾರಿಗಳ ಸಾಲುಗಳು. ಓ! ಶಿಬಿರದ ಕಾಂಕ್ರೀಟಿನ ಗೋಡೆ ಮತ್ತು ಸರಳುಗಳ ಗೇಟನ್ನು ಮುರಿದು ಬೀಳಿಸಿ ನೆಲಸಮ ಮಾಡುವುದಕ್ಕಾಗಿಯೇ ತಯಾರಿಸಿದ ಯಂತ್ರವಿದು!

ಕಾವಲು ಪಡೆಯವರು ಟ್ಯಾಂಕಿನ ಮೇಲೆ ಗುಂಡಿನ ಮಳೆಗರೆದರೂ ಟ್ಯಾಂಕಿಗೆ ತಿಲಮಾತ್ರವೂ ಘಾತವಾಗಲಿಲ್ಲ. ಆದರೆ ಯಂತ್ರ ಹಿಂದಕ್ಕೆ ಹೊರಟುಹೋಯಿತು. ಮರು ದಿನ ಶಿಬಿರದ ದಂಡನಾಯಕ ಮೇಜರ್ ಸನತ್‌ಕರುಣರತ್ನೆ-ಅವರು ನೋಡಿದ್ದ ಟ್ಯಾಂಕಿನ ರೇಖಾಚಿತ್ರ ಬರೆದು ಕೊಡಲು ಗಾಮಿನಿಯ ತಂಡದವರಿಗೆ ಹೇಳಿದ. ಚಿತ್ರ ನೋಡಿದೊಡನೆ ಮೇಜರ್‌ಗೆ ಅದರ ಸಾಮರ್ಥ್ಯದ ಅರಿವಾಯಿತು. "ಉಗ್ರಗಾಮಿಗಳು ಆ ರಾಕ್ಷಸಯಂತ್ರದಿಂದ (ಸರಕಾರೀ) ಸೇನಾಪಡೆಯನ್ನೇ ನಿರ್ನಾಮಗೊಳಿಸುವುದು ಖಂಡಿತ. ಆದರೆ ಯಾವಾಗ? ಕೆಲವು ದಿನಗಳೊಳಗೆ? ಕೆಲವೇ ಗಂಟೆಗಳೊಳಗೆ? ಹೌದು ಕೆಲವು ಗಂಟೆಗಳೊಳಗೇ ಇರಬಹುದು! ಎಲ್ಲ ಮುಗಿದುಹೋಗಬಹುದು! ಆದರೆ ಯಾವಾಗ?"

ಗಾಮಿನಿ ಕುಲರತ್ನೆಗೆ ಜೀವಂತನಾಗಿರಬೇಕಾದ ಅಗತ್ಯ ಇತರ ಎಲ್ಲರಿಗಿಂತ ಹೆಚ್ಚಾಗಿತ್ತು. ಆತ ಕೊಲೊಂಬೋದಿಂದ ೨೫೫ ಕಿ.ಮೀ. ದೂರದ 'ಹಾಸಲಾಕ' ಎಂಬ ಹಳ್ಳಿಯ ಬಡ ಹುಡುಗ. ತಂದೆ ತಾಯಿಯರ ಐವರು ಗಂಡು ಮಕ್ಕಳಲ್ಲಿ ಗಾಮಿನಿ ಎರಡನೆಯವ-ಹಳೆಯದೊಂದು ಮಣ್ಣಿನ ಗುಡಿಸಲು. ಅದರಲ್ಲಿರುವುದು ಒಂದೇ ಮಲಗುವ ಕೋಣೆ. ಮಳೆಗೆ ಸೋರುವ, ತೆಂಗಿನ ಹರಕು ಮುರುಕು ಗರಿಗಳ, ಚಪ್ಪರ. ಉಣ್ಣಲು ಅವರಿಗಿದ

ಒಂದೇ ಒಂದು ಆಸರೆ, ತಂದೆ ಉತ್ತುಬಿತ್ತಿ ಬೆಳೆವ ಬತ್ತದ ಗದ್ದೆ. ವರ್ಷ ಹನ್ನೆರಡಾದಂದಿನಿಂದ ಮುಂಜಾನೆ ೪ ಗಂಟೆಗೆ ಗಾಮಿನಿ ಏಳುತ್ತಿದ್ದ. ಹೊಲದ ದುಡಿಮೆಯಲ್ಲಿ ತಂದೆಗೆ ನೆರವಾಗಿ, ಮೂರು ಕಿಲೋಮೀಟರ್ ದೂರದ ಶಾಲೆಗೆ ನಡೆಯುತ್ತಿದ್ದ. ಪಾಠಶಾಲೆಯಿಂದ ಬಂದೊಡನೆ ಮತ್ತೆ ಗದ್ದೆಯಲ್ಲಿ ಕೆಲಸ. ಮಗನ ಕಾರ್ಯತತ್ಪರತೆಯನ್ನು ಕಾಣುತ್ತ, ತಾಯಿ ಜೂಲಿಯೆಟ್ ತನಗೆ ತಾನೇ ಹೇಳಿಕೊಳ್ಳುವಳು. "ನನ್ನ ಕುಟುಂಬಕ್ಕೆ ಈತ ಒಂದಲ್ಲ ಒಂದು ದಿನ ಕೀರ್ತಿ ತರುವುದು ನಿಶ್ಚಯ."

ಗಾಮಿನಿಯ ಹೆಗಲ ಮೇಲೆ, ಕುಟುಂಬವನ್ನು ಕಾಪಾಡುವ ಹೊಣೆ, ಆಕೆ ಯೋಚಿಸಿದ್ದಕ್ಕಿಂತ ಮೊದಲೇ ಬಿದ್ದುಬಿಟ್ಟಿತು. ಹೋರಿಯೊಂದು ಸಿಟ್ಟಿಗೆದ್ದು ಹುಚ್ಚಾಗಿತ್ತು. ಗಾಮಿನಿಯ ತಂದೆ ಅದಕ್ಕೆ ಎದುರಾಗಿ ಸಿಕ್ಕಿಹಾಕಿಕೊಂಡ. ಹೋರಿ ಅವನನ್ನು ಹಾಯ್ದು ಬೀಳಿಸಿತು; ಮತ್ತೆ ಮತ್ತೆ ಹಾಯ್ದು ಘಾಸಿಗೊಳಿಸಿ ಜಜ್ಜಿಹಾಕಿಬಿಟ್ಟಿತು! ೧೫ರ ಹುಡುಗ ಗಾಮಿನಿ ಭಯ, ದಿಗ್ಭ್ರಮೆಗಳಿಂದ ಮರವೊಂದರ ಹಿಂದೆ ನಿಂತು, ಅಸಹಾಯನಾಗಿ ತಂದೆಯ ಭೀಕರ ಮರಣವನ್ನು ನೋಡಿದ! ಮನೆ ಜನರಿಗೆಲ್ಲ ಆಧಾರವಾಗಿದ್ದು ಅನ್ನ ನೀಡುತ್ತಿದ್ದವನ ಅವಸಾನವಾಗಿತ್ತು. ಗಾಮಿನಿಯ ಕಷ್ಟಗಳು ದ್ವಿಗುಣಿತವಾದುವು. ದುಃಖತಪ್ತಳಾಗಿದ್ದ ತಾಯಿಯನ್ನು ಸಂತೈಸಿದ; "ಭಯಪಡಬೇಡಿ. ನಿಮ್ಮನ್ನೆಲ್ಲ ನಾನೇ ಸಾಕುತ್ತೇನೆ" ಎಂದು ಆಶ್ವಾಸನೆಯಿತ್ತ.

ಈಗ ಗಾಮಿನಿ ಶಾಲೆಯ ಹಾಜರಿಯ ಹೊರತು ಬೇರೆಲ್ಲ ಸಮಯ ಗದ್ದೆಯಲ್ಲೇ ಶ್ರಮಿಸತೊಡಗಿದ. ತನ್ನ ಉಪಾಧ್ಯಾಯರ ಮನೆಗೆಲಸಕ್ಕೂ ನೆರವಾಗುತ್ತಿದ್ದ. ಗುರುಗಳು ಅವನು ನೀಡಬೇಕಿದ್ದ ಶಾಲಾಶುಲ್ಕವನ್ನು ಮನ್ನಾ ಮಾಡುತ್ತಿದ್ದರು. ಅಂತೂ ಸ್ವಲ್ಪ ಕಾಲ ಮನೆ ಜನರ ಊಟಕ್ಕೆ ತಕ್ಕಷ್ಟು ವ್ಯವಸ್ಥೆ ಆಯಿತು. ಆದರೆ ಕೃಷಿ ಕಾರ್ಯದ ಖರ್ಚುವೆಚ್ಚಗಳು ಗಗನಕ್ಕೇರತೊಡಗಿದಾಗ ಹುಡುಗ ಗಾಮಿನಿ ಶಾಲಾ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಸೇನೆಗೆ ಹೆಸರು ನೋಂದಾಯಿಸಿದ. ತನಗೆ ಸಿಗುವ ವೇತನವನ್ನೆಲ್ಲಾ ಮನೆಗೆ ಕಳುಹಿಸುವುದೆಂದು ನಿಶ್ಚಯಿಸಿಕೊಂಡ. ತಾನು ಸೈನ್ಯಕ್ಕೆ ಸೇರಿದ ವಿಚಾರವನ್ನು ತಾಯಿಗೆ ತಿಳಿಸಿದಾಗ ಆಕೆ ಕಣ್ಣೀರಿಟ್ಟಳು—ಮಗನೇ ನಮ್ಮೆಲ್ಲರ ಕೂಳಿಗಾಗಿ ನೀನು ಸಾಯುವ ಅಗತ್ಯವಿರಲಿಲ್ಲವಲ್ಲ!" ಎಂದು ಅಳುತ್ತ ಆಕೆ ಆಕ್ಷೇಪಿಸಿದಳು. ಆದರೆ ಗಾಮಿನಿ ತನ್ನ ನಿರ್ಧಾರದಿಂದ ಒಂದಿಷ್ಟೂ ವಿಚಲಿತನಾಗಲಿಲ್ಲ.

ಮುಂದಿನ ನಾಲ್ಕು ವರ್ಷ "ಸಿಂಹ"ರೆಜಿಮೆಂಟಿನ ಆರನೇ ಬೆಟಾಲಿಯನ್‌ಗೆ ಸೇರ್ಪಡೆಯಾದಂದಿನಿಂದ—ಶ್ರೀಲಂಕಾದ ಪೂರ್ವ ಮತ್ತು ಉತ್ತರ ಭಾಗದ ಯುದ್ಧರಂಗದಲ್ಲಿ ಶತ್ರುಗಳನ್ನು ಧ್ವಂಸಗೊಳಿಸಿ ನಿರ್ನಾಮ ಮಾಡುತ್ತಾ ಮುಂದೊತ್ತುತ್ತಾ ಕ್ರಮೇಣ ಎಲಿಫೆಂಟ್ ಪಾಸ್‌ಗೆ ಬಂದು ತಲುಪಿದ್ದ. ಆಗ ೧೯೯೧ರ ಬೇಸಿಗೆಯ ಪ್ರಾರಂಭದ ದಿನಗಳು, 'ಎಲಿಫೆಂಟ್ ಪಾಸ'ನ ಆ ಅರಣ್ಯ ಪ್ರದೇಶದಲ್ಲಿ ಶತ್ರುಗಳನ್ನೆದುರಿಸುವುದು ಸೈನಿಕರ ಸತ್ವಪರೀಕ್ಷೆ ಮಾಡುವ ಕಠಿಣ ಸಜೆಯಂತಿತ್ತು. ಅಲ್ಲಿ ಇಬ್ಬಗೆಯ ಶತ್ರುಕಾಟ. ಮಾರಕಾಸ್ತ್ರಗಳಿಂದ ಅತ್ಯಂತ ಪ್ರಬಲ

ರಾಗಿ ಬೆಳೆದಿದ್ದ, ಗೆರಿಲ್ಲಾ ಯುದ್ಧತಂತ್ರವನ್ನು ಅರಗಿಸಿಕೊಂಡ, ತಮಿಳು ಟೈಗರ್‌ಗಳೊಂದು ಕಡೆ, ಮಲೇರಿಯಾ ಹರಡುವ ಸೊಳ್ಳೆಗಳ ಹಿಂಡು ಹಗಲು ರಾತ್ರಿ ಬೆಂಬಿಡದೆ ನಡೆಸುವ ಅಸಹನೀಯ ಆಕ್ರಮಣ ಇನ್ನೊಂದೆಡೆ. ಕಾಡಿನ ದಟ್ಟ ಅರಣ್ಯದಲ್ಲಿ ಎಲ್ಲೆಲ್ಲೂ ಕೊಳೆತು ನಾರುವ ದುರ್ಗಂಧ ಉಸಿರು ಕಟ್ಟಿಸುತ್ತಿತ್ತು. ಇಷ್ಟೊಂದು ಅಡಚಣೆಗಳ ಜತೆಗೆ ಯಾರೂ ನುಗ್ಗಿಬಾರದಂತೆ ತಡೆಯಲು ಕಾಡಿನ ಉದ್ದಗಲಕ್ಕೂ ಉಗ್ರಗಾಮಿಗಳು ನಿರ್ಮಿಸಿದ ಬೋನಿನಂತಹ ಅಗಲ ಕಿರಿದಾಗಿ ಆಳವಾದ ತೂತುಗಳಂತಹ (ಶ್ರೀಲಂಕಾದಲ್ಲಿ ಬಟ್ಟಾಗಳೆಂದು ಹೆಸರಿಸುವ) ಕಂದಕಗಳು! ತಾಯಿ ಜೂಲಿಯಟ್ಟಳಿಗೆ "ಅಮ್ಮಾ ನಾನು ಯುದ್ಧವನ್ನು ದ್ವೇಷಿಸುತ್ತೇನೆ. ಮನುಷ್ಯರು ಮನುಷ್ಯರನ್ನು ಬಡಿವ ಕೊಲ್ಲುವ ಈ ದಯಾಹೀನ ಹೋರಾಟವನ್ನು ದ್ವೇಷಿಸುತ್ತೇನೆ" ಎಂದಾತ ಬರೆಯುತ್ತಿದ್ದ, ಸದಾ ಯುದ್ಧದಲ್ಲಿ ಕಾದಾಡಿ ಮನುಷ್ಯರನ್ನು ಕಡಿದೊಗೆದು, ಕಲ್ಲಾಗಿ ಹೋದ ಸೈನಿಕರ ನಡುವೆ ಸೌಮ್ಯ ಸ್ವಭಾವದ ಗಾಮಿನಿ ಪ್ರತ್ಯೇಕ ವ್ಯಕ್ತಿಯಾಗಿ ಬೆಳೆದಿದ್ದ. ಒಮ್ಮೆ, ಹಸಿದು ಬೆಂಡಾಗಿದ್ದ ತಮಿಳು ಹೆಂಗಸು ಒಬ್ಬಳು ಅಲೆದಾಡುತ್ತ ಗಾಮಿನಿಯೆಡೆಗೆ ಬಂದು ಅನ್ನ ಬೇಡಿದಳು. ಅವನ ಸಂಗಾತಿಗಳು ಅವಳನ್ನು ಗೇಲಿ ಮಾಡಿ ಬೈದು, ಅಟ್ಟುವುದರಲ್ಲಿದ್ದಾಗ ಗಾಮಿನಿ ಅವರನ್ನು ತಡೆದು ತಾನು ಉಣ್ಣುತ್ತಿದ್ದ ಅನ್ನವನ್ನು ಆಕೆಗೆ ನೀಡಿದ್ದ.

ಸುಮಾರು ನಾಲ್ಕು ವರ್ಷ ಗಾಮಿನಿ ತನ್ನ ಪಗಾರ ಮತ್ತು ಭತ್ಯೆಗಳ ಮೂರನೇ ಎರಡು ಭಾಗವನ್ನು ತನ್ನ ಮನೆಯವರಿಗೆ ಕಳುಹಿಸಿದ—ತಿಂಗಳಿಗೆ ಸುಮಾರು ಮೂರು ಸಾವಿರ ರೂ.ಗಳಷ್ಟು. ಆರು ತಿಂಗಳಿಗೊಮ್ಮೆ ಒಂದು ವಾರದ ರಜೆಯಲ್ಲಿ ತನ್ನೂರಿಗೆ ಹೋಗಲು ಅನುಮತಿ ಸಿಗುತ್ತಿತ್ತು. ಆ ಸಮಯದಲ್ಲಿ ತಾಯಿ, ತಮ್ಮಂದಿರಾದಿ ಮನೆ ಜನರಿಗೆಲ್ಲ, ಬಟ್ಟೆಬರೆ, ಒಂದೆರಡು ವಾರಗಳಿಗಾಗುವಷ್ಟು ಅಕ್ಕಿ ಬೇಳೆ, ಅವರೆಲ್ಲ ಆಸೆ ಪಡುವ ಹಾಲಿನ ಪುಡಿ, ಮಾಂಸ, ಸಾಂಬಾರಜೀನಸುಗಳನ್ನು ಉಳಿಕೆ ಹಣದಿಂದ ಕೊಂಡುಕೊಂಡು ಮನೆಗೆ ಒಯ್ಯುತ್ತಿದ್ದ.

೧೯೯೧ರ ಏಪ್ರಿಲ್ ತಿಂಗಳ ಕೊನೆಯ ವಾರ ಹಾಸಲಾಕಕ್ಕೆ ಹೋಗಿದ್ದಾಗ ತಾಯಿ ತಂಗಿಯರಿಗೆ ತುಸು ದೊಡ್ಡದಾದ ಮನೆಯನ್ನು ಕಟ್ಟಲು ಸಾಕಾಗುವಷ್ಟು ಹಣವನ್ನು ಉಳಿಸಿಕೂಡಿಟ್ಟಿರುವುದನ್ನು ತಿಳಿಸಿದ. ಮನೆ ಕಟ್ಟಿಸುವ ಕಾಲದಲ್ಲಿ ಸಹಾಯಕ್ಕಾಗಿ ಆಗಾಗ ಬಂದು ಹೋಗಲು ಅನುಕೂಲವಾಗುವಂತೆ ಹಾಸಲಕಕ್ಕೆ ಹತ್ತಿರವಿರುವ ಪ್ರದೇಶಕ್ಕೆ ವರ್ಗಾವಣೆ ಮಾಡಿಸಿಕೊಳ್ಳುವುದಾಗಿ ಹೇಳಿದ. ಮನೆಯವರ ಆನಂದಕ್ಕೆ ಪಾರವೇ ಇರಲಿಲ್ಲ. ಮೇ ೩೦ ರಂದು ತಾಯಿಗೆ ಗಾಮಿನಿ ಬರೆದ— "ಅಮ್ಮಾ ನೀನು ಬದುಕಿರುವಷ್ಟು ಕಾಲ ನಿನ್ನನ್ನು ನೋಡಿಕೊಳ್ಳುವೆ...." ತನ್ನ ಒಡಹುಟ್ಟಿದವರಿಗೆ — "ನಿಮ್ಮ ಶಾಲೆ, ಪಾಠಗಳನ್ನು ಅಲಕ್ಷಿಸದಿರಿ. ನನಗೆ ಗೊತ್ತು ಅದೆಷ್ಟು ಕಷ್ಟವೆಂದು, ಏನೇ ಆದರೂ, ನಿಮಗೆ ಅನುಕೂಲಮಾಡಿಕೊಟ್ಟೇ ತೀರುತ್ತೇನೆ." ಎಂದು ಭರವಸೆ ನೀಡಿದ.

ಆದರೆ ಅವರ ಪಾಲಿಗೆ ಗಾಮಿನಿಯ ಈ ಆಶ್ವಾಸನೆ ನೀಡುವ ಅಕ್ಷರಗಳು ಅವನ

ಮರಣಶಾಸನದ ಕೊನೆಯ ಹಸ್ತಾಕ್ಷರಗಳಾದುವು.

ಜುಲೈ ೧೩, ಎಲಿಫೆಂಟ್ ಪಾಸ್‌ನಲ್ಲಿ ಅವರ ನಾಲ್ಕನೇ ದಿನದ ಹೋರಾಟವಾಗಿತ್ತು. ಸೇನೆಯ ಮಹಾದಂಡನಾಯಕರು ಗಾಯಾಳುಗಳನ್ನು ಸ್ಥಳಾಂತರಿಸಲು ಎಲಿಫೆಂಟ್ ಪಾಸಿಗೆ ಹೆಲಿಕಾಪ್ಟರ್‌ಗಳನ್ನು ಕಳುಹಿಸಿದರು. ಆದರೆ ಬಂಡಾಯಗಾರರ ಗುಂಡುಗಳು ಅವುಗಳನ್ನು ಆಕಾಶದಿಂದ ಕೆಳಕ್ಕಿಳಿಯಗೊಡಲಿಲ್ಲ. ಮೇಜರ್ ಸನತ್ ಕರುಣರತ್ನೆಗೆ ತನ್ನ ಸೈನಿಕರು ಆತ್ಮಸ್ಥೈರ್ಯ ಕಳೆದುಕೊಳ್ಳುವುದು ನಿಶ್ಚಯವೆಂದು ಮನವರಿಕೆಯಾಯಿತು—ಗಾಯಗೊಂಡವರನ್ನು ಸಾಗಿಸಿ ಶುಶ್ರೂಷೆ ನೀಡಬೇಕಾಗಿರುವ ಕಠಿಣ ಕಾಲದಲ್ಲಿ ಆ ನತದೃಷ್ಟರು ಬಿದ್ದಲ್ಲೇ ನರಳಿ ಸಾಯಲು ಬಿಡುವ ಹಾಗಾದುದು ಅತ್ಯಂತ ನಿರಾಶಾದಾಯಕವಾಗಿತ್ತು. ಬಂಡುಖೋರರನ್ನು ಅಣಗಿಸಲು ರಕ್ಷಣಾ ಪಡೆಯ ಪ್ರಧಾನ ಸೇನಾಪತಿ ಹತ್ತು ಸಾವಿರ ಸೈನಿಕರನ್ನು ಸಹಾಯಕ್ಕಾಗಿ ಎಲಿಫೆಂಟ್ ಪಾಸಿಗೆ ಕಳುಹಿಸುತ್ತಿರುವುದಾಗಿ ಸಂದೇಶ ಕಳುಹಿಸಿದ. ಆದರೆ ಅವರು ಯುದ್ಧರಂಗಕ್ಕೆ ಬಂದು ಸೇರಲು ಇನ್ನೂ ಹಲವಾರು ದಿನ ಬೇಕಾಗಬಹುದು. ಇತ್ತಲಿನ ಕಾರ್ಯನಿರತ ಸೈನಿಕರ ಬಳಿಯ ಸಿಡಿಮದ್ದಿನ ಭಂಡಾರವು ವೇಗವಾಗಿ ಖಾಲಿಯಾಗುತ್ತ ಬಂದಿತ್ತು.

ಶಿಬಿರದ ದಕ್ಷಿಣ ದ್ವಾರದ ಹೊರಗೆ ಮೂವತ್ತು ಮೀಟರ್ ದೂರದಲ್ಲಿ ಕೊರ್ಪೊರಲ್ ಪೀಟರ್ ರೋವಾಲ್ ತನ್ನ ರೇಡಿಯೋವನ್ನು ಏಕಾಗ್ರತೆಯಿಂದ ಆಲಿಸುತ್ತಾ ಇದ್ದ. ಅವನಿಂದ ಕೆಲವು ಮೀಟರ್ ಅಂತರದಲ್ಲಿ ಗಾಮಿನಿ ಕುಲರತ್ನೆ ಆಳವಾದ ಚಿಂತನೆಯಲ್ಲಿ ಮುಳುಗಿದ್ದ. ರೋವಾಲ್ ತನ್ನ ಪ್ರಿಯ ಮಿತ್ರನನ್ನು "ಏನು ಯೋಚನೆ" ಎಂದು ಪ್ರಶ್ನಿಸಿದ. ಆದರೆ ಉತ್ತರವಿಲ್ಲ. ರೋವಾಲ್ ಅದಕ್ಕಾಗಿ ಚಿಂತಿಸುವವನಲ್ಲ. ಗೆಳೆಯನ ಶಾಂತ, ಮೌನ ಸ್ವಭಾವ ಸೇನೆಯವರಿಗೆಲ್ಲ ಗೊತ್ತಿದೆ. "ಸಹಾಯಕ ಸೇನೆ, ಮದ್ದುಗುಂಡುಗಳು ಬಂದು ತಲುಪುವವರೆಗೆ ಟ್ಯಾಂಕನ್ನು ಮುಂದೆ ನುಗ್ಗದಂತೆ ತಡೆ ಹಿಡಿದರೆ ಮಾತ್ರ ನಮಗೆ ಉಳಿಗಾಲ!" ರೋವಾಲ್ ಮತ್ತೆ ಗೆಳೆಯನಿಗೆ ಹೇಳಿದ.

ಕಗ್ಗತ್ತಲು ಕಾಡನ್ನೆಲ್ಲ ಮುಸುಕಿತ್ತು. ರಾತ್ರಿ ಗಂಟೆ ೭ರ ಸಮಯ. ನಿಶ್ಶಬ್ದವಾಗಿದ್ದ ಎಲಿಫೆಂಟ್ ಪಾಸ್ ಗೆರಿಲ್ಲಾಗಳ ಮೋರ್ಟರ್, ಮಷಿನ್‌ಗನ್‌ಗಳ ಕರ್ಕಶ ಕಠೋರ ಸದ್ದಿನಿಂದ ಮೊರೆಯತೊಡಗಿತು. ಮೇಜರ್ ಕರುಣರತ್ನೆ ತನ್ನ ನಿಶ್ಚಿತ ಜಾಗದಲ್ಲಿ ಉಪಸ್ಥಿತನಾಗಿ ರಾಕ್ಷಸ ಟ್ಯಾಂಕಿನ ಚಿತ್ರವನ್ನು, ಟ್ಯಾಂಕಿನಿಂದಾಗಿ ಬರಬಹುದಾದ ವಿಪತ್ತಿನ ಮಟ್ಟವೆಷ್ಟಾದೀತೆಂಬುದನ್ನು, ಅಧ್ಯಯನ, ಅಂದಾಜು, ಮಾಡುತ್ತಾ ಇದ್ದ. "ಬಹುಶಃ ಇಂದೇ ಈ ಕತ್ತಲಲ್ಲೇ ಉಗ್ರಗಾಮಿಗಳು ರಾಕ್ಷಸ ಯಂತ್ರವನ್ನು ಪ್ರಯೋಗಿಸುವುದು ನಿಶ್ಚಯ!" ಅವನ ಅನುಮಾನ ನಿರ್ಣಯವಾಗುತ್ತಾ ಬರುತ್ತಿತ್ತು. ತಕ್ಷಣ ತನ್ನ ಪತ್ನಿಯನ್ನು ನೋಡಲು ಹೋಗುವುದೆಂದು ಮಾಡಿದ್ದ ವಿಚಾರ ನೆನಪಾಯಿತು. ಅವಳ ಎರಡನೇ ಹೆರಿಗೆಯ ಕಾಲ ಸಮೀಪಿಸಿತ್ತು. "ಅವಳನ್ನು ಮಕ್ಕಳನ್ನು ನೋಡಲು ಬದುಕಿರಬಲ್ಲೆನೇ?" ಕರುಣರತ್ನೆ ತನ್ನನ್ನೇ ಪ್ರಶ್ನಿಸತೊಡಗಿದ್ದ.

ತಮ್ಮ ರೈಫಲ್‌ಗಳನ್ನು ಸಜ್ಜುಗೊಳಿಸುತ್ತಿದ್ದಂತೆ, ಕಾಡಿನ ಕಗ್ಗತ್ತಲನ್ನು ಭೇದಿಸಿ ಆ ಟ್ಯಾಂಕ್ ಹೊರ ಬರುವುದನ್ನು ಗಾಮಿನಿ, ರೋವಾಲರು ನೋಡಿದರು. ಟ್ಯಾಂಕ್ ನೇರವಾಗಿ ದಕ್ಷಿಣದ ಗೇಟಿನ ಕಡೆಗೆ ನುಗ್ಗಿ ಬರುತ್ತಿತ್ತು. ಅದರ ಬೆಳಕಿನ ಛಾಯೆಯಲ್ಲಿ ಸುಮಾರು ಆರುನೂರು 'ಲಿಬರೇಷನ್ ಟೈಗರ್'ಗಳು ಟ್ಯಾಂಕನ್ನು ಅನುಸರಿಸಿ ಬರುತ್ತಿರುವುದು ಕಂಡಿತು. ಟ್ಯಾಂಕಿನ ಮುಂದುಗಡೆ ನೂರು ಜನ ಉಗ್ರರು ಶಿಬಿರವನ್ನು ಸಮೀಪಿಸತೊಡಗಿದ್ದರು, ರಕ್ಷಕ ಪಡೆಯವರು ಮಿಂಚಿನ ವೇಗದಲ್ಲಿ ಅವರ ಮೇಲೆ ಗುಂಡಿನ ಮಳೆಗರೆದರು. ಆರ್.ಪಿ.ಜಿ–ಎಂದರೆ ರಾಕೆಟ್ ಮೂಲಕ ಎಸೆಯುವ ಗ್ರೆನೇಡ್‌ಗಳು, ಮೊರ್ಟರ್‌ಗಳು ಇಕ್ಕಡೆಗಳಿಂದಲೂ ಮಾರಣಹೋಮ ನಡೆಸಿದವು. ಸೇನೆಯು ಮುನ್ನುಗ್ಗುತ್ತಿರುವ ಉಗ್ರಗಾಮಿಗಳನ್ನು ಅಸ್ತವ್ಯಸ್ತಗೊಳಿಸುವ, ಟ್ಯಾಂಕನ್ನು ಪುಡಿಮಾಡುವ, ಪ್ರಯತ್ನದಲ್ಲಿ ತಮ್ಮೆಲ್ಲ ಸಾಮರ್ಥ್ಯವನ್ನು ಒರೆಗೆ ಹಚ್ಚಿದ್ದರು. ಹಲವಾರು ಉಗ್ರರು ಭೂತಲಶಾಯಿಯಾದರು. ಆದರೆ ಟ್ಯಾಂಕ್ ಮಾತ್ರ ಉರುಳುತ್ತಾ ಮುನ್ನುಗ್ಗಿ ಬರುತ್ತಿತ್ತು. ರಕ್ಷಕ ಪಡೆಯವರ ಗುಂಡುಗಳು ಟ್ಯಾಂಕ್‌ಗೆ ಬಡಿದು ಹಿಂದಕ್ಕೆ ಹಾರಿ ಬೀಳುತ್ತಿದ್ದವೇ ವಿನಾ ಟ್ಯಾಂಕಿಗೆ ಒಂದಿಷ್ಟೂ ಏಟಾಗಲಿಲ್ಲ. ಬೆಂಕಿ ಹತ್ತಿಕೊಳ್ಳಲೂ ಇಲ್ಲ. ಅದರ ಕಬ್ಬಿಣದ ಕವಚ ಅಷ್ಟು ಬಲಿಷ್ಠವಾಗಿತ್ತು. ಸೈನಿಕರು ದಿಗ್ಭ್ರಾಂತರಾಗಿ ನೋಡುತ್ತಿದ್ದಂತೆ ಟ್ಯಾಂಕ್ ದಿಢೀರನೆ, ಶಿಬಿರದ ಕಾಂಕ್ರೀಟು ಮತ್ತು ಕಬ್ಬಿಣಗಳ ಸಂಯುಕ್ತ ಗೋಡೆಯ ಹೊರ ಭಾಗ ಸರಳುಗಳ ಬೇಲಿಯ ಒಂದು ಸರಣಿಯನ್ನು ಛಟಾರನೆ ಘಟ್ಟಿಸಿ ಪುಡಿ ಮಾಡಿತು. ಗಾಮಿನಿ ಕುಲರತ್ನೆ ಮೆಶಿನ್ ಗನ್ನಿನಿಂದ ಬೆಂಕಿಯ ಹೊಳೆಯನ್ನೇ ಹರಿಯಬಿಟ್ಟಿದ್ದ. ಅದ್ಯಾವುದನ್ನೂ ಲೆಕ್ಕಿಸದೆ ಟ್ಯಾಂಕ್ ಅವನ ಕಾವಲು ಗೋಡೆಯ ಒಂದು ಪಾರ್ಶ್ವವನ್ನು ನೆಲಸಮ ಮಾಡಿತ್ತು. ಬೆಂಕಿಯ ಮಳೆಗೆ ಕೆಲವು ಬಂಡುಕೋರರು ಅಲ್ಲೇ ಕುಸಿದು ಉರಿದು ಹೋದರು. ಕೆಲವರು ಹಿಂದಕ್ಕೋಡಿದರು. ಸೈನಿಕರೂ, ಉಗ್ರರೂ ಪರಸ್ಪರ ಕೈಕೈ ಮಿಲಾಯಿಸುವಷ್ಟು ಹತ್ತಿರವಾದಾಗ ಇನ್ನೂ ಘೋರವಾದ ಕದನ ನಡೆಯಿತು. ಗಾಯಗೊಳ್ಳುತ್ತಿದ್ದವರ ರೋಷ, ಚೀರಾಟ, ಮರಣಾಸನ್ನಹಿತರಾದವರ ಆಕ್ರಂದನಗಳ ಜತೆ ಬಾಂಬುಗಳ ಕಿವಿಗಡಚಿಕ್ಕುವ ಆಸ್ಫೋಟನೆಯಿಂದ ಕಾಡೆಲ್ಲ ಪ್ರತಿಧ್ವನಿಸಿ ನಡುಗಿದರೂ ಟ್ಯಾಂಕ್ ಮಾತ್ರ ನಿರ್ವಿಘ್ನವಾಗಿ ಕಾರ್ಯಾಚರಣೆ ಮುಂದುವರಿಸಿತ್ತು! ಕಮಾಂಡರ್ ಕರುಣಾರತ್ನೆಯವರಿದ್ದ ಕಾವಲು ಗೋಡೆಯ ಕಡೆಗೆ ನುಗ್ಗತೊಡಗಿತ್ತು! ಕಾರ್ಪೊರಲ್ ರೋವಾಲ್ ಯೋಚಿಸಿದ "ಇದೇ ಕೊನೆ. ಎಲ್ಲವೂ ಈ ಕ್ಷಣ ಮುಗಿದು ಹೋಗುವುದು. ಇದು ಹಿಂದೆಂದೂ ಕಾಣದ, ದೇಶಕ್ಕೇ ಅವಮಾನಕರ ಅಪಜಯ. ಅಸಹಾಯಕನಾಗಿ ನೋಡುತ್ತಿದ್ದಂತೆ ರೋವಾಲ್ ದಂಗಾಗಿ ಹೋದ. ಏಕಾಏಕಿ ಸೈನಿಕನೊಬ್ಬ ಎರಡೂ ಕೈಗಳಲ್ಲಿ ಗ್ರೆನೇಡ್‌ಗಳನ್ನು ಬಿಗಿಯಾಗಿ ಹಿಡಿದು ಟ್ಯಾಂಕಿನ ಬಳಿಗೆ ಬಿರುಗಾಳಿಯಂತೆ ಓಡುತ್ತಿದ್ದಾನೆ!

"ಹಾ! ಬೇಡ—ಹೋಗಬೇಡ!" ಸಾವಿನ ಬಾಯನ್ನೇ ಹೆಣಗುತ್ತಿರುವಾತನನ್ನು ತಡೆಯಲಿಕ್ಕಾಗಿ ರೋವಾಲ್ ಗಟ್ಟಿಯಾಗಿ ಕೂಗಿದ. ಆದರೆ ಗಾವಿನಿ ಮುಂದಕ್ಕೆ ಓಡುತ್ತಲೇ ಇದ್ದ. ಶತ್ರುಗಳ ಗುಂಡೊಂದು ಆತನ ಕೃಶಕಾಯಕ್ಕೆ ಬಡಿದಾಗ ತತ್ತರಿಸಿ ತೂರಾಡಿ ಬೀಳುವುದರಲ್ಲಿದ್ದ. ಒಂದೇಕ್ಷಣ, ಮತ್ತೆ ಸಾವರಿಸಿಕೊಂಡು ನೋವನ್ನೆಲ್ಲ ಒತ್ತಟ್ಟಿಗಿಟ್ಟು ಸಂಕಲ್ಪವೇ ರೂಪು ತಳೆದಂತೆ ಆ ಜಿ ವಿಸಾಟರ್ ಓಡುತ್ತಲೇ ಹೋದ. ಕಲ್ಲು, ಕಬ್ಬಿಣ, ಕಾಂಕ್ರೀಟಿನ ಗೋಡೆ ಎಲ್ಲವನ್ನೂ ಧ್ವಂಸಗೊಳಿಸುತ್ತಾ ಮುಂದುವರಿದು ಭೀಕರವಾದ ಟ್ಯಾಂಕಿನ ಲೋಹದ ಏಣಿಯನ್ನು ಅತಿ ಕಷ್ಟದಿಂದ ಗ್ರೆನೇಡ್‌ಗಳನ್ನು ಹಿಡಿದುಕೊಂಡೇ ಏರಿ ಅದರ ಕಿರಿದಾಗಿದ್ದ ದ್ವಾರದೊಳಕ್ಕೆ ತನ್ನ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಕೈಯನ್ನು ಬೀಸಿ ಒಗೆದ. ಕ್ಷಣಾರ್ಧದಲ್ಲಿ ಎರಡು ಆಸ್ಫೋಟನೆಗಳು ಭೂಮ್ಯಾಕಾಶಗಳನ್ನು ನಡುಗಿಸಿದವು. ಗಾವಿನಿಯ ಸಣಕಲು ಶರೀರ ಈಚೆಗೆ ಹಾರಿ ಸಿಡಿದು ಬಿತ್ತು. ಮತ್ತೆ ಅಲ್ಲೇ ನಿಶ್ಚಲವಾಯಿತು. ಟ್ಯಾಂಕ್ ಭಯಂಕರ ಶಬ್ದ ಮಾಡುತ್ತ ತಿಗರಿಯಂತೆ ತಿರುಗಿ ಶಿಬಿರದ ಒಂದು ಗೋಡೆಗೆ ಅಪ್ಪಳಿಸಿ ನಿಸ್ತಬ್ಧವಾಯಿತು. ಬೆಂಕಿಯ ನಾಲಗೆಗಳು ಬೃಹದಾಕಾರದ ಅದರ ಮೈಯನ್ನು ನೆಕ್ಕಿದುವು. ಕಾವಲು ಪಡೆಗಳ ಒಂದು ಬಂಕರಿನಿಂದ (ಕಾವಲು ಅಡಗುತಾಣ) ಇನ್ನೊಂದು ಬಂಕರಿಗೆ ಟ್ಯಾಂಕ್ ನಾಶವಾದ ಸುದ್ದಿ ಹರಡುತ್ತಾ ಎಲ್ಲ ಸೈನಿಕರಿಗೆ ತಿಳಿದುಹೋಯಿತು. "ಅಂತೂ ನಾವಿನ್ನು ಈ ನರಕದಿಂದ ಹೊರ ಬರಲು ಸಾಧ್ಯವಾಗಬಹುದೆಂದು" ಮೇಜರ್ ತನ್ನೊಳಗೇ ಹೇಳಿಕೊಂಡ. ಆದರೆ ಟ್ಯಾಂಕನ್ನು ಧ್ವಂಸಮಾಡಿದ ವೀರನಾರೆಂದು ಹುಡುಕಲು ಸಮಯವಿರಲಿಲ್ಲ. ಏಕೆಂದರೆ ಇನ್ನೂ ಯುದ್ಧ ಮುಗಿದಿರಲಿಲ್ಲ.

ಟ್ಯಾಂಕ್ ನಾಶವಾದ್ದರಿಂದ ಉತ್ಸಾಹಗೊಂಡ ರಕ್ಷಣಾ ಪಡೆಯವರ ಒಗ್ಗೂಡಿದ ಆಕ್ರಮಣದಿಂದಾಗಿ ಮೊದಲೇ ಹತವೀರ್ಯರಾಗಿದ್ದ ಟೈಗರ್‌ಗಳು ಅಲ್ಲಿಂದ ಪಲಾಯನ ಮಾಡಲೇಬೇಕಾಯಿತು. ಅವರು ಮುನ್ನೂರು ಉಗ್ರಗಾಮಿಗಳನ್ನು ಕಳೆದುಕೊಂಡಿದ್ದರು. ಮಧ್ಯ ರಾತ್ರಿಗೆ ಸ್ವಲ್ಪ ಹೊತ್ತಿನ ಮೊದಲು ಎಲಿಫೆಂಟ್ ಪಾಸ್‌ನಲ್ಲಿ ಗುಂಡುಗಳ ಸದ್ದಡಗಿ ಪೂರ್ಣ ಶಾಂತವಾಯಿತು.

ಮರುದಿನ ಜುಲೈ ೧೫ನೇ ತಾರೀಕು. ಬೆಳಕು ಹರಿಯುತ್ತಿದ್ದಂತೆ ಮೇಜರ್ ಕರುಣರತ್ನೆ ಟ್ಯಾಂಕ್ ನಾಶವಾದುದರ ರಹಸ್ಯವೇನೆಂದು ತಿಳಿಯಲು ಶಿಬಿರದಿಂದ ಹೊರ ಬಂದು ಪರೀಕ್ಷೆ ನಡೆಸತೊಡಗಿದ್ದ. ಟ್ಯಾಂಕಿನ ಸುಟ್ಟು ಕರಕಾದ ಮುರಿದ ಭಾಗಗಳನ್ನು ನೋಡುತ್ತಿದ್ದಾಗ—ಕೊರ್ಪೊರಲ್ ರೊವೊಲ್ ಮೇಜರ್ ಬಳಿಗೆ ಬಂದು—ಟ್ಯಾಂಕನ್ನು ನಿಸ್ತಬ್ಧಗೊಳಿಸಿದವರು ಯಾರೆಂದು ನನಗೆ ಗೊತ್ತಿದೆ. ಲ್ಯಾನ್ಸ್ ಕೊರ್ಪೊರಲ್ ಗಾವಿನಿ ಕುಲರತ್ನೆ ಟ್ಯಾಂಕನ್ನು ಏರಿ ಹೋಗಿ ಗ್ರೆನೇಡ್ ಎಸೆದುದನ್ನು ಕಣ್ಣಾರೆ ನೋಡಿದ್ದೇನೆ. ಮೇಜರ್ ಸ್ತಬ್ಧವಿಸ್ಮಿತನಾದ! ತೀರಾ ಸಾಮಾನ್ಯ ಸೈನಿಕನೆಂದು ಭಾವಿಸಿದ್ದ ಆ ಸೌಮ್ಯ ಶಾಂತಯುವಕನನ್ನು ಕಣ್ಣು ಮುಂದೆ ಚಿತ್ರಿಸಿಕೊಳ್ಳತೊಡಗಿದ. ಅಂಥ

ವ್ಯಕ್ತಿಯ ಎಂಥ ಕೆಲಸ!—ತಿರುಚಿ ನಜ್ಜುಗುಜ್ಜಾಗಿ ಮುದುರಿಹೋದ ಟ್ಯಾಂಕಿನ ಬೃಹತ್ ಕವಚದ ಅವಶೇಷ! ಅಲ್ಲೇ ತುಸು ದೂರದಲ್ಲಿ ಅವನ ಶರೀರ ಬಿದ್ದುಕೊಂಡಿತ್ತು. ಹಲವು ಗುಂಡುಗಳು ಹೊಕ್ಕು ಶರೀರವೆಲ್ಲ ಜರಡಿಯಂತಾಗಿತ್ತು.

"ಗಾಮಿನಿಗೆ ನಮ್ಮೆಲ್ಲರ ಧನ್ಯವಾದ. ನಾವೆಲ್ಲ ಸಾಯದೆ ಉಳಿದಿದ್ದೇವೆ." ಮೇಜರ್ ಮನದಲ್ಲೇ ಯೋಚಿಸಿದ ಅವನಿಂದಾಗಿಯೇ ನಾನು ನನ್ನ ಪತ್ನಿ ಪುತ್ರಿಯನ್ನು ಮತ್ತೊಮ್ಮೆ ಕಾಣುವಂತಾಯಿತು. ನಾವೆಲ್ಲ ಆತನಿಗೆ ಚಿರಋಣಿಗಳು.

ಮುಂದೆ ಮೂರು ವಾರಗಳೊಳಗೆ ಎಲಿಫೆಂಟ್ ಪಾಸಿನ ಸುತ್ತುಮುತ್ತಲ ತಮಿಳು ಉಗ್ರರ ವಾಸಸ್ಥಾನವನ್ನು ಛೇದಿಸಲಾಯಿತು. ಅಲ್ಲಿಗೆ ಶ್ರೀಲಂಕೆಯ ಚರಿತ್ರೆ ಅತಿ ಭಯಂಕರ ಯುದ್ಧ ಕೊನೆಗೊಂಡಿತು.

ಜುಲೈ ೧೬ರ ಬೆಳಿಗ್ಗೆ ಇಬ್ಬರು ಸೇನಾಧಿಕಾರಿಗಳು, ಐವರು ಸಿಪಾಯಿಗಳು ಗಾಮಿನಿ ಕುಲರತ್ನೆಯ ಕುಟುಂಬವನ್ನು ಕಾಣಲು ಅವರ ಗುಡಿಸಲ ಬಾಗಿಲಿಗೆ ಬಂದರು. ಜೂಲಿಯೆಟ್ ಅವರನ್ನು ಸ್ವಾಗತಿಸಿದಳು. ಅಧಿಕಾರಿಯೊಬ್ಬ ಹೇಳಿದ "ಅಮ್ಮ ನಿನ್ನ ಮಗ ಮಹಾವೀರ." ಜೂಲಿಯೆಟ್‌ಗೆ ಏನಾಗಿದೆಯೆಂದು ತಿಳಿದುಹೋಯಿತು. ರೋದಿಸುತ್ತಾ "ಹಾ! ಗಾಮಿನೀ! ಎಂದು ಸಹಿಸಲಾಗದೆ ನರಳಿದಳು. ಅವಳ ಮಕ್ಕಳೂ ಅಳುವಿನಲ್ಲಿ ಸೇರಿಹೋದರು. ಹಳ್ಳಿಗೆ ಹಳ್ಳಿಯೇ ದುಃಖದಲ್ಲಿ ಮುಳುಗಿತು. ಗಾಮಿನಿಯ ಅದ್ಭುತ ಶೌರ್ಯ ಸಾಹಸ, ಬಲಿದಾನದ ಸುದ್ದಿ ಶ್ರೀಲಂಕೆಯ ಉದ್ದಗಲಕ್ಕೂ ಪಸರಿಸಿತು. ನಾಡಿನಲ್ಲೆಲ್ಲ ಶೋಕಾಚರಣೆಯನ್ನು ಘೋಷಿಸಲಾಯಿತು. ದೇಶದ ಜನರೆಲ್ಲ ಶೋಕಸಂತಪ್ತರಾಗಿ ಉದ್ವೇಗಗೊಂಡರು. ಮುಂದಿನ ಮೂರು ನಾಲ್ಕು ತಿಂಗಳು ಶ್ರೀಲಂಕೆಯ ಎಲ್ಲೆಡೆಗಳಿಂದ ಗಾಮಿನಿಯ ಮನೆ ಜನರನ್ನು ಕಾಣಲು ಜನರು ಬರುತ್ತಾ ಇದ್ದರು. ಬಂದವರೆಲ್ಲ ಗಾಮಿನಿಯ ಧೀರತೆಯನ್ನು, ಅವನ ಕರ್ತವ್ಯ ಪ್ರಜ್ಞೆಯನ್ನು ಕೊಂಡಾಡಿ ಅವರನ್ನು ಸಂತೈಸಿದರು. ತಮ್ಮೆಲ್ಲರ ಸಹವೇದನೆಯನ್ನು ಪ್ರಕಟಿಸಿದರು.

ಆಗಸ್ಟ್ ೧೫ರಂದು ಅಂದಿನ ರಾಷ್ಟ್ರದ ಅಧ್ಯಕ್ಷ 'ರಣಸಿಂಗೆ ಪ್ರೇಮದಾಸ'ರೇ ಸ್ವತಃ ಗಾಮಿನಿಯ ತಾಯಿ ತಮ್ಮಂದಿರನ್ನು ಕಾಣಲು ಹಾಸಲಕಕ್ಕೆ ಬಂದರು. ಅವರ ಗುಡಿಸಲಿನ ಹುರಿಹಗ್ಗದ ಕುರ್ಚಿಯಲ್ಲಿ ಕುಳಿತು ಜೂಲಿಯೆಟ್ಟಳೊಡನೆ ಮಾತಾಡಿದರು. "ಅಮ್ಮಾ, ನಿನ್ನ ಮಗನ ಎಣೆ ಇಲ್ಲದ ಸಾಹಸವೇ ನಮ್ಮ ವಿಜಯಕ್ಕೆ ಕಾರಣ. ಶ್ರೀಲಂಕೆಯ ಜನರಿಗೆಲ್ಲಾ ಆತ ಪ್ರೇರಕ ಶಕ್ತಿಯಾಗಿ ಬೆಳಗಿದ್ದಾನೆ. ಅವನು ತೋರಿದ ಕರ್ತವ್ಯನಿಷ್ಠೆ, ಸ್ವದೇಶಾಭಿಮಾನ, ಅದ್ಭುತ ಪ್ರಸಂಗಾವಧಾನ ಜಗತ್ತಿಗೇ ಆದರ್ಶವಾಗಿದೆ." ಒಂದು ಗಂಟೆಗೂ ಹೆಚ್ಚು ಕಾಲ ಆ ಮುರುಕು ಮನೆಯಲ್ಲಿ ಕುಲರತ್ನೆಯರೊಂದಿಗೆ ಮಾತನಾಡುತ್ತಾ ಕಳೆದಾಗ ಗಾಮಿನಿ ತನ್ನವರಿಗಾಗಿ ಒಂದು ಮನೆ ಕಟ್ಟಲು ಯೋಚಿಸಿದ್ದನೆಂದು ತಿಳಿಯಿತು. ಪ್ರೇಮದಾಸರು ಗಾಮಿನಿಯ ಕನಸನ್ನು ಪೂರ್ಣಗೊಳಿಸುವ ಭರವಸೆ ನೀಡಿ, ನಿರು-

ಉದ್ಯೋಗಿಯಾಗಿದ್ದ ೨೨ರ ಯುವಕ ಸರತ್ ಕುಲರತ್ನೆಗೆ ಸರಕಾರೀ ಜವುಳಿ ಕಾರ್ಖಾನೆಯಲ್ಲಿ ಒಂದು ಉದ್ಯೋಗವನ್ನು ಕೊಡುಗೆಯಾಗಿತ್ತರು. ಗಾಮಿನಿಯಂತೆ ಓದು ಕಲಿತು ಮುಂದೆ ಬರಬೇಕೆಂಬ ಹಂಬಲ ಇರಿಸಿಕೊಂಡಿದ್ದ ಸೋದರಿ ರಂಜನಿಗೆ ಸರಕಾರೀ ವಿದ್ಯಾರ್ಥಿ ವೇತನ ಕೊಡಿಸುವ ವಾಗ್ದಾನ ಮಾಡಿದರು. ಗಾಮಿನಿಯ ಸ್ಮರಣೆಯನ್ನು ಗೌರವಿಸಿ ಜೀವಂತವಾಗಿ ಇಡುವುದಕ್ಕಾಗಿ ೧೮ ವರ್ಷದ ನಿಮಾಲನನ್ನು ಅವನ ಅಣ್ಣನ ಸ್ಥಾನದಲ್ಲಿ ಸೇನೆಗೆ ಭರ್ತಿಮಾಡಿಕೊಂಡರು. ಮುಂದೆ ಒಂದೆರಡು ವಾರಗಳಲ್ಲಿ ನಿಮಾಲ್ ಸೈನಿಕರ ಸಮವಸ್ತ್ರ ಧರಿಸಿ ಅಭಿಮಾನದಿಂದ ನಡೆಯುತ್ತಾ ಹೋಗುವುದನ್ನು ಹಳ್ಳಿಯವರೆಲ್ಲ ಬೆರಗಿನಿಂದ ನೋಡಿದರು.

ದೇಶದ ರಕ್ಷಣಾ ಮಂತ್ರಾಲಯದಿಂದ ಗಾಮಿನಿಗೆ ಮರಣೋತ್ತರವಾಗಿ ಭಡ್ತಿ ನೀಡಿ ಗೌರವಿಸಿ, ಪೂರ್ಣ ವೇತನವನ್ನು ಮನೆಯವರಿಗೆ ಕೊಡುತ್ತಲಿದ್ದಾರೆಂದೂ, ಅವನ ಪೆನ್ಷನ್‌ನೊಂದಿಗೆ, ಕುಟುಂಬಕ್ಕೆ ಮರಣದಿಂದುಂಟಾದ ನಷ್ಟಕ್ಕೆ ೬೫೦೦೦ ರೂಪಾಯಿಗಳ ಪರಿಹಾರವನ್ನು ಒದಗಿಸುವರೆಂದೂ ತಿಳಿದು ಬಂತು. 'ತಮಗಿನ್ನು ಹಣದ ಕೊರತೆ ಮುಂದೆಂದೂ ಉಂಟಾಗಲಿಕ್ಕಿಲ್ಲವೆಂದು ಜೂಲಿಯೆಟ್ ಸಮಾಧಾನ ಹೊಂದಿದಳು. ಎರಡು ವಾರಗಳ ಮೇಲೆ ಗಾಮಿನಿಯ ಅಂತಿಮ ಯಾತ್ರೆ ನಡೆಯಿತು. ಸಕಲ ಮಿಲಿಟರಿ ಗೌರವಗಳೊಂದಿಗೆ ತರಲಾದ ಚಿತಾಭಸ್ಮವನ್ನು ಹತ್ತುಸಾವಿರಕ್ಕೂ ಹೆಚ್ಚು ಜನ ಅತ್ಯಂತ ಪ್ರೀತ್ಯಾದರಗಳಿಂದ ಸ್ವಾಗತಿಸಿದರು. ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಇಂದು ಹಾಸಲಕದ ಎತ್ತಿನಗಾಡಿಗಳಿಂದ ಸವೆದು ಗುಂಡಿ ಬಿದ್ದುಹೋದ ಬೀದಿಯಲ್ಲಿ ಏರಿ, ಇಳಿದು, ವಾಲಿಕೊಂಡು ಹೋಗುವ ವಾಹನಗಳ ಚಾಲಕರು, ಪ್ರಯಾಣಿಕರು, ಹೆಚ್ಚಾಗಿ ಒಬ್ಬ ಏಕಾಂಗಿ ಸೈನಿಕನ ಕಾಂಕ್ರೀಟ್ ಮೂರ್ತಿಯ ಮುಂದೆ ವಾಹನ ನಿಲ್ಲಿಸಿ ಸ್ವಲ್ಪ ಹೊತ್ತು ಅಲ್ಲೇ ನಿಂತು ನೋಡಿ, ಮತ್ತೆ ಪ್ರಯಾಣ ಮುಂದುವರಿಸುತ್ತಾರೆ. ಮೂರ್ತಿಗೆ ಹತ್ತಿರದಲ್ಲೇ ಒಂದು ಸ್ವಚ್ಛ ಸುಂದರ ಒಂದಂತಸ್ತಿನ ಮನೆ ಇದೆ. ಅದರ ಮುಂಬಾಗಿಲ ಬಳಿ ಒಂದು ಫಲಕವಿದೆ.

"ದೇಶದ ಅಖಂಡತೆ ಮತ್ತು ಸಾರ್ವ
ಭೌಮತ್ವವನ್ನು ಉಳಿಸಲಿಕ್ಕಾಗಿ
ಆತ್ಮಾರ್ಪಣೆ ಗೈದ
ಶ್ರೀಲಂಕಾ ಸೇನೆಯ ಲಾನ್ಸ್
ಕಾರ್ಪೊರಲ್ ಗಾಮಿನಿ
ಕುಲರತ್ನೆಯ
ಸ್ಮರಣಾರ್ಥ
ಶ್ರೀಲಂಕಾ ಸರಕಾರ ಕಟ್ಟಿಸಿದ
ಸ್ಮಾರಕ."

* * *

ಮನೆಯೊಳಗೆ ಹಜಾರದ ಗೋಡೆಯ ಮೇಲೆ ಬೆಳ್ಳಿಯ ಪದಕವಿದೆ. ಅದು ದೇಶದ ಅತ್ಯುನ್ನತ ಗೌರವ ಚಿಹ್ನೆ: 'ಪರಮ ವೀರ

ವಿಭೂಷಣ'ವನ್ನು ಗಾಮಿನಿ ಕುಲ ರತ್ನೆಯ ಪ್ರಚಂಡ ಸಾಹಸ, ಅದ್ಭುತ ಪರಾಕ್ರಮಗಳ ದ್ಯೋತಕವೆಂದು ಪ್ರದಾನ ಮಾಡಲಾಗಿದೆ. ೧೯೪೮ರಲ್ಲಿ ಶ್ರೀಲಂಕೆ ಸ್ವತಂತ್ರ ರಾಷ್ಟ್ರವಾದಂದಿನಿಂದ ಇಂದಿನ ವರಗೆ ಇಂಥ ಪರಮೋಚ್ಚ ಗೌರವಕ್ಕೆ ಪಾತ್ರನಾದವನೆಂದರೆ ಗಾಮಿನಿಯೊಬ್ಬನೇ.

ಆದರೆ ಗಾಮಿನಿಯ ನಿಸ್ವಾರ್ಥ ಜೀವನ ಮತ್ತು ಬಲಿದಾನಕ್ಕೆ ಕೊಡಲಾದ ನಿಜವಾದ ಮತ್ತು ಉಪಯುಕ್ತವಾದ ಉಡುಗೊರೆಯೆಂದರೆ, ಒಂದು ಆತನ ಮನೆಯವರಿಗಾಗಿ ಕಟ್ಟಿಸಿಕೊಟ್ಟ ಸಿಮೆಂಟು ಇಟ್ಟಿಗೆಗಳ ಮನೆ; ಇನ್ನೊಂದು ಅವನ ಪ್ರಿಯ ಜನರಿಗೆ ಅವನಿತ್ತ ಸುರಕ್ಷೆ ಮತ್ತು ಬೆಲೆಕಟ್ಟಲಾಗದಂಥ ಭರವಸೆಯುಳ್ಳ ಭವಿಷ್ಯ.



ದೇಶ ಬದುಕಲೆಂದು ವ್ಯಕ್ತಿ ಸಾಯಬೇಕಾಗುತ್ತದೆ, ಭಾರತ ಬದುಕಿ ಸ್ವಾತಂತ್ರ್ಯವನ್ನು ಧನ್ಯತೆಯನ್ನು ಗಳಿಸಲೆಂದು ಇಂದು ನಾನು ಸಾಯಲು ಸಿದ್ಧನಿರುವೆ.

ನೀವು ನಿಮ್ಮ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ತಂದುಕೊಡುತ್ತೇನೆ.

—ನೇತಾಜಿ ಸುಭಾಷ್‌ಚಂದ್ರ ಬೋಸ್

ಕಲಾತಪಸ್ವಿ—ಪಿ. ಆರ್. ತಿಪ್ಪೇಸ್ವಾಮಿ

ಜಿ. ಎಸ್. ಭಟ್ಟ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಕಲಾವಿದ, ಸಾಹಿತಿ, ಜಾನಪದತಜ್ಞ ಶ್ರೀ ಪಿ. ಆರ್. ತಿಪ್ಪೇಸ್ವಾಮಿ (ಜನನ ೧೨-೦೮-೧೯೨೨) ಅವರದು ೭೫ ವರ್ಷಗಳ ಸಾರ್ಥಕ ಬದುಕು. ಕವಿ, ಕಲಾವಿದರು ಸಾಧಾರಣ ಜನರಿಂದ ದೂರ ಎಂಬ ಮಾತಿಗೆ ತಿಪ್ಪೇಸ್ವಾಮಿ ಅವರು ಅಪವಾದ. ಚಿತ್ರದುರ್ಗದ ನಾಯಕರ ಧೈರ್ಯಸಾಹಸ ಇವರ ರಕ್ತದಲ್ಲಿ ಹರಿದರೂ ನೊಂದು ಬೆಂದವರನಷ್ಟು ಸಂತೈಸುವ ಮಾತೃ ಹೃದಯ. ಬ್ರಹ್ಮಚಾರಿ ತಿಪ್ಪೇಸ್ವಾಮಿ ಅವರಿಗೆ ಸಮಾಜವೇ ಸಂಸಾರ. ತನಗೊಪ್ಪದ ವಿಷಯಗಳೊಂದಿಗೆ ರಾಜೀಮಾಡಿಕೊಳ್ಳದ ಛಾಯಮಾನ ಎಂದು ತಿಳಿದರೂ, ಇವರ ಸೇವೆ ಬಯಸಿಬರುವ ಕರೆಗಳು ಹಲವು ಹತ್ತು. ಎಷ್ಟು ದುಡಿದರೂ ದಣಿಯದ ಉತ್ಸಾಹ, ಎಪ್ಪತ್ತೈದರಲ್ಲೂ ಇಪ್ಪತ್ತೈದರ ಹುಮ್ಮಸ್ಸು, ಲವಲವಿಕೆ. ಅರಮನೆ, ಗುರುಮನೆ, ಸರ್ಕಾರ, ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳ ಸರಮಾಲೆ. ಕಲಾವಿದನೊಬ್ಬ ಸಾಹಿತಿಯೂ ಆದಾಗ ಸಾಂಸ್ಕೃತಿಕ ಜಗತ್ತು ಹೇಗೆ ಶ್ರೀಮಂತವಾಗುತ್ತದೆ ಎಂಬುದಕ್ಕೆ ತಿಪ್ಪೇಸ್ವಾಮಿ ಅವರು ಕಟ್ಟಿ ಬೆಳೆಸಿರುವ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯ, ಧರ್ಮಸ್ಥಳದ ಮಂಜೂಷ ವಸ್ತುಸಂಗ್ರಹಾಲಯ ಹಾಗೂ ಇವರ ಕೃತಿಗಳೇ ಸಾಕ್ಷಿ. ಪ್ರಸ್ತುತ ಶ್ರೀಯುತರು ಸುತ್ತೂರು ಸಂಸ್ಥಾನ ಹಾಗೂ ಚಿತ್ರದುರ್ಗ ಬೃಹನ್ಮಠದ ವಸ್ತುಸಂಗ್ರಹಾಲಯಗಳ ಗೌರವ ನಿರ್ದೇಶಕರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. "ಪುಸ್ತಕ ಪ್ರಪಂಚ"ದ ಲೇಖಕರೂ ಆಗಿರುವ ಶ್ರೀ ತಿಪ್ಪೇಸ್ವಾಮಿ ಅವರು ಇದೇ ಅಗಸ್ಟ್ ೧೧ಕ್ಕೆ ೭೫ರ ಗಡಿದಾಟುವ ಸಂದರ್ಭದಲ್ಲಿ ಅವರು ನಡೆದು ಬಂದ ದಾರಿಯನ್ನು ಈ ಕಿರು ಲೇಖನದಲ್ಲಿ ಗುರುತಿಸಿದೆ.

ಎಪ್ಪತ್ತೈದು ವಸಂತಗಳನ್ನು ಪೂರೈಸಿರುವ ಪಿ. ಆರ್. ತಿಪ್ಪೇಸ್ವಾಮಿ ಕಲೆ ಮತ್ತು ಜಾನಪದಕ್ಕಾಗಿ ತಮ್ಮ ಬದುಕನ್ನು ಶ್ರೀಗಂಧದ ಕೊರಡಿನಂತೆ ಸವೆಸಿದವರು. ಕಲೆ ಮತ್ತು ಕಲಾವಿದರಿಗಾಗಿಯೇ ಹೋರಾಟ ನಡೆಸಿದವರು. ಪ್ರಸಿದ್ಧ ಲೇಖಕರು, ಕಲಾವಿಮರ್ಶಕರು. ಎಲ್ಲಕ್ಕಿಂತಲೂ ಹೆಚ್ಚಾಗಿ ಒಬ್ಬ ಸ್ನೇಹ ಜೀವಿ. ದೀನ ದಲಿತರಲ್ಲಿ ದೇವರನ್ನು ಕಾಣುವವರು. ಕರ್ನಾಟಕದ ಕೆಲವೇ ಜನ ನಿಸರ್ಗ ಕಲಾವಿದರಲ್ಲಿ ಒಬ್ಬರಾದ ಅವರು ಬಾಲ್ಯದಿಂದಲೂ ಪ್ರಕೃತಿಯ ಆರಾಧಕರು. ಜಲವರ್ಣದ ನಿಸರ್ಗ ಚಿತ್ರಗಳನ್ನು ಬರೆಯುವಲ್ಲಿ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡವರು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರೆಂದು ಅವರನ್ನು ಸರ್ಕಾರ ನಾಮಕರಣ ಮಾಡಿದಾಗ (೧೯೭೭) ನಾಡಿನಾದ್ಯಂತ ಜನ ಅದನ್ನು ಸ್ವಾಗತಿಸಿದರು. ಅಂದಿನ ಸರ್ಕಾರದ ನಿರ್ಧಾರವನ್ನು ಪ್ರಶಂಸಿಸಿದರು. ಕಲೆ ಮತ್ತು ಕಲಾವಿದರ ಬಗ್ಗೆ ತಮ್ಮ ಬದುಕಿನುದ್ದಕ್ಕೂ ಹೋರಾಟ ನಡೆಸುತ್ತ ಬಂದ ಈ ಕಲಾತಪಸ್ವಿಗೆ ತಡವಾಗಿಯಾದರೂ ಈ ಗೌರವ ಸಂದಿತು. ತಮ್ಮನ್ನು ಅರಸಿಕೊಂಡುಬಂದ ಅಧ್ಯಕ್ಷಪದವಿಯನ್ನು ಅವರು ಅತ್ಯಂತ ಸಮರ್ಥವಾಗಿ ಜನಮೆಚ್ಚುವಂತೆ ನಡೆಸಿಕೊಂಡು ಬಂದರು. ಲಲಿತಕಲಾ ಅಕಾಡೆಮಿಗೆ ಕಾಯಕಲ್ಪ ನೀಡಿದರಲ್ಲದೆ ಹೊಸ ಹೊಸ ಯೋಜನೆಗಳನ್ನು ಹಮ್ಮಿಕೊಂಡರು. ವಿಚಾರಸಂಕಿರಣ, ಕಮ್ಮಟ, ಕಲಾಪ್ರದರ್ಶನ ಇವುಗಳ ಸಂಘಟನೆಯೊಂದಿಗೆ ಕಲೆ ಹಾಗೂ ಕಲಾವಿದರ ಬಗ್ಗೆ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು. ಅಕಾಡೆಮಿಯ ಅಧ್ಯಕ್ಷರಾಗಿ ತಮಗೆ ದೊರೆಯುತ್ತಿದ್ದ ಮಾಸಿಕ ಗೌರವ ಧನವನ್ನು ಬಳಸದೆ ನಿರಖು ಠೇವಣಿಯಲ್ಲಿಟ್ಟಿದ್ದಾರೆ. ಆ ಹಣದಿಂದ ತಮ್ಮ ಹುಟ್ಟೂರಿನ ಶಾಲೆಗೊಂದು ರಂಗಮಂದಿರ ನಿರ್ಮಿಸಲು ನೆರವಾಗಬೇಕೆಂಬುದು ಅವರ ಇಚ್ಛೆ. ಅಕಾಡೆಮಿಯ ಅಧ್ಯಕ್ಷಸ್ಥಾನ ರಾಜ್ಯಸಚಿವ ಮಟ್ಟದ್ದು. ಆದರೆ ತಿಪ್ಪೇಸ್ವಾಮಿ ಅವರು ಮೂರು ವರ್ಷಗಳ ಕಾಲ ಶ್ರೀಸಾಮಾನ್ಯನ ಜೀವನವನ್ನೇ ಮುಂದುವರಿಸಿದರು. ನಾಡಿನಾದ್ಯಂತ ಬಸ್ಸು–ರೈಲುಗಳಲ್ಲೇ ಸಂಚರಿಸಿದರು. ಕರ್ನಾಟಕದ ದೇಗುಲಗಳ ಭಿತ್ತಿ ಚಿತ್ರಗಳನ್ನು ಚಿತ್ರೀಕರಿಸಿ ಅದು ಅಕಾಡೆಮಿಯಲ್ಲಿ ಶಾಶ್ವತವಾಗುವಂತೆ ದಾಖಲಿಸಿದ್ದು ಇವರ ಕಾಲದ ಮಹತ್ಸಾಧನೆ. ಅಕಾಡೆಮಿ ಅಸ್ತಿತ್ವಕ್ಕೆ ಬಂದಾಗಿನಿಂದಲೂ ನಡೆಯುದಷ್ಟು ಕಲಾಪ್ರದರ್ಶನಗಳು ಇವರ ಕಾಲದಲ್ಲಿ ನಡೆದವು. ಛಾಯಾಚಿತ್ರಕಲೆಯನ್ನು ಪ್ರಥಮಬಾರಿಗೆ ತನ್ನ ವ್ಯಾಪ್ತಿಯೊಳಗೆ ಲಲಿತಕಲಾ ಅಕಾಡೆಮಿ ಒಳಗು ಮಾಡಿತು. ಬೆಂಗಳೂರಿನಲ್ಲಿ ಛಾಯಾಚಿತ್ರ ಮತ್ತು ವರ್ಣಚಿತ್ರ ತೌಲನಿಕ ಪ್ರದರ್ಶನವೊಂದು ಜರುಗಿತು. ಹಾಗೆಯೇ ಅಖಿಲ ಭಾರತ ಮಟ್ಟದ ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಪ್ರಕೃತಿಚಿತ್ರ, ಭಾವಚಿತ್ರ ಕಲಾವಿದರ ಶಿಬಿರ, ಚಿತ್ರಕಲಾವಿದರ ಶಿಬಿರ, ಶಿಲ್ಪಿಗಳ ಶಿಬಿರ, ಗ್ರಾಫಿಕ್ ಕಾರ್ಯಗಾರ ಇವು ಉಲ್ಲೇಖನೀಯವಾದವುಗಳು. ನಾಡಿನಾದ್ಯಂತ ಇವರು ಏರ್ಪಡಿಸಿದ್ದ ಸಂಚಾರಿ ಕಲಾಪ್ರದರ್ಶನಗಳು ಜನತೆಯಲ್ಲಿ ಕಲೆಯ ಬಗ್ಗೆ ಜಾಗೃತಿ ಮತ್ತು ಅಭಿರುಚಿ ಹುಟ್ಟಿಸುವುದಕ್ಕೆ ನೆರವಾದವು. ಇದಲ್ಲದೆ ಅವರು ಅಕಾಡೆಮಿಯಲ್ಲಿ ಸ್ಥಾಪಿಸಿದ 'ಕಲಾ ಗ್ರಂಥಾಲಯ' ಇಂದು ಕಲೆಯನ್ನು ಕುರಿತಂತೆ. ಅಧ್ಯಯನ ಮಾಡುವ ಅನೇಕ ವಿದ್ಯಾರ್ಥಿಗಳಿಗೂ ಸಂಶೋಧಕರಿಗೂ ಅತ್ಯುತ್ತಮ ಆಕರ ಗ್ರಂಥಾಲಯವೆನಿಸಿದೆ. ತಮಗೆ ಎಂಥ ಕೆಲಸವನ್ನು ವಹಿಸಿದರೂ ಅದನ್ನು ಅಚ್ಚುಕಟ್ಟಾಗಿ ಶ್ರದ್ಧೆಯಿಂದ ಮಾಡಿ ಮುಗಿಸುವ ಜಾಯಮಾನ ತಿಪ್ಪೇಸ್ವಾಮಿಯವರದು. ಚಿತ್ರಕಲಾ ಪ್ರಪಂಚ, ಶಿಲ್ಪಕಲಾಪ್ರಪಂಚಗಳಂಥ ಬೃಹತ್ ಗ್ರಂಥಗಳ ಪ್ರಕಟಣೆ ಲಲಿತಕಲಾ ಅಕಾಡೆಮಿಯ ಗೌರವ ಹೆಚ್ಚಿಸಿದವು. ರಾಜ್ಯದಲ್ಲಿ ಶಿಲ್ಪಕಲಾ ಅಕಾಡೆಮಿಯ ಸ್ಥಾಪನೆಗೂ ಅವರು ಚಾಲನೆ ನೀಡಿದರು. ಕರ್ನಾಟಕ ಲಲಿತಕಲಾ ಅಕಾಡೆಮಿಗೆ ರಾಷ್ಟ್ರದಲ್ಲೇ

ಗೌರವದ ಸ್ಥಾನವನ್ನು ದೊರಕಿಸಿಕೊಟ್ಟರು ಎಂಬುದು ಅತಿಶಯೋಕ್ತಿಯಲ್ಲ.

ತಿಪ್ಪೇಸ್ವಾಮಿ ಕಲಾವಿದರಷ್ಟೇ ಅಲ್ಲ, ಕನ್ನಡದ ಒಬ್ಬ ಶ್ರೇಷ್ಠ ಲೇಖಕರು, ಕಲಾ ವಿಮರ್ಶಕರು. ಕನ್ನಡದಲ್ಲಿ ೧೫ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅವರ ಬದುಕು ಬರಹಗಳ ಸಮಗ್ರ ಚಿತ್ರಣ ನಮಗೆ ದೊರೆಯುವುದು 'ಕಲಾವಿದನ ನೆನಪುಗಳು' ಗ್ರಂಥದಲ್ಲಿ. ಈ ಪುಸ್ತಕ ಒಮ್ಮೆ ಓದಿದರೆ ಬಹುಕಾಲ ಮೆಲುಕು ಹಾಕುವಂಥದ್ದು. ಕಲೆ ಮತ್ತು ಕಲಾವಿದರ ಬಗ್ಗೆ ಅವರಿಗಿರುವ ಕಳಕಳಿ ಈ ಪುಸ್ತಕದಲ್ಲಿ ಅಭಿವ್ಯಕ್ತಗೊಂಡಿದೆ. ಕಲೋಪಾಸಕರು ಭಾರತೀಯ ಚಿತ್ರಕಲೆಗಳಲ್ಲಿ ನಾಡಿನ ಹಲವಾರು ಕಲಾವಿದರ ಸಾಧನೆಗಳನ್ನು ಅವರು ದಾಖಲಿಸಿದ್ದಾರೆ. ವರಕವಿ ಬೇಂದ್ರೆ ತಿಪ್ಪೇಸ್ವಾಮಿ ಅವರನ್ನು ಕುರಿತಂತೆ ಹೇಳಿರುವ ಮಾತುಗಳು ಮನನೀಯವಾಗಿವೆ. "ಇವರು ಬೇರೆಯವರ ಬಗ್ಗೆ ಹೃದಯತುಂಬಿ ಬರೆಯಬೇಕಾದರೆ ಇವರ ಹೃದಯ ಒಳ್ಳೆಯದು. 'ಪರುಷ' ಎಂಬುದು ತಿಪ್ಪೇಸ್ವಾಮಿಯವರ ಕಾವ್ಯನಾಮ. ಈ ಹೆಸರಿನಲ್ಲೇ ಅವರು 'ಪುಸ್ತಕ ಪ್ರಪಂಚ' ದಲ್ಲಿ ಪುಸ್ತಕಗಳ ವಿಮರ್ಶೆಮಾಡಿದ್ದಾರೆ. ಹೋರಾಟಗಾರ 'ಕೆಂಚಪ್ಪ' 'ಕೆ. ವೆಂಕಟಪ್ಪ' 'ಎಂ. ವೀರಪ್ಪ'—ಇವು ಇವರ ಕೆಲವು ಪುಸ್ತಕಗಳು. ೧೯೮೯ ರಲ್ಲಿ ಸೂತ್ರದ ಗೊಂಬೆ ಕಲಾತಂಡವನ್ನು ಫ್ರಾನ್ಸಿನ ಉತ್ಸವಕ್ಕೆ ಕರೆದುಕೊಂಡು ಹೋಗಿದ್ದರು. ಈ ಪ್ರವಾಸದ ಫಲ. 'ಕಲಾವಿದ ಕಂಡ ಫ್ರಾನ್ಸ್.' ಭಾರತೀಯ ಜಾನಪದ ಮತ್ತು ಕಲಾವಿದರುಗಳ ಬಗ್ಗೆ ಫ್ರಾನ್ಸಿನ ಜನತೆಗಿರುವ ಆಸಕ್ತಿ ಮತ್ತು ಗೌರವಗಳನ್ನು ಸ್ವತಃ ಕಂಡ ತಿಪ್ಪೇಸ್ವಾಮಿ ಅದನ್ನು ತುಂಬ ಸುಂದರವಾಗಿ ಚಿತ್ರಿಸಿದ್ದಾರೆ. ಕನ್ನಡದ ಉತ್ತಮ ಪ್ರವಾಸ ಕಥನಗಳ ಸಾಲಿನಲ್ಲಿ ನಿಲ್ಲಬಹುದಾದ ಕೃತಿ ಇದು. ಒಬ್ಬ ಕಲಾವಿದ ತನ್ನ ಅನುಭವಗಳನ್ನು ಬಿಚ್ಚಿಕೊಳ್ಳುತ್ತ ಆತ್ಮೀಯವಾಗಿ ನಿರೂಪಿಸಿರುವುದು ಇಲ್ಲಿಯ ವಿಶೇಷ. ತಿಪ್ಪೇಸ್ವಾಮಿ ಮಹಾರಾಜ ಕಾಲೇಜಿನಲ್ಲಿದ್ದಾಗ 'ಕಲಾಕ್ಷೇತ್ರ' ಎಂಬ ಒಂದು ಉತ್ತಮ ಸಾಹಿತ್ಯಿಕ ಪತ್ರಿಕೆ ಪ್ರಕಟಿಸಿದ್ದರು. ಸಾಹಿತ್ಯದಲ್ಲಿ ಅವರಿಗೆ ವಿಶೇಷ ಆಸಕ್ತಿ. ಮುಂದೆ ತಮ್ಮ ಕಲಾಕ್ಷೇತ್ರವನ್ನು ಅವರು ಒಂದು ಸಂಸ್ಥೆಯಾಗಿ ಪ್ರಕಾಶನವಾಗಿ ಪರಿವರ್ತಿಸಿ ಹಲವು ಉತ್ತಮ ಪುಸ್ತಕಗಳನ್ನು ಪ್ರಕಟಿಸಿದ್ದುಂಟು. ಚಿತ್ರಕಲೆ ಮತ್ತು ಕಲಾವಿದರ ಬಗ್ಗೆ ನಾಡಿನ ಪತ್ರಿಕೆಗಳಲ್ಲಿ ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ.

ಕಲೆ ಹಾಗೂ ಜಾನಪದ ಎರಡನ್ನೂ ತಮ್ಮ ಉಸಿರೆಂದು ಭಾವಿಸಿರುವ ತಿಪ್ಪೇಸ್ವಾಮಿ ಜಾನಪದ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಅಸಾಧಾರಣವಾದುದು. ಕ.ರಾ.ಕೃ, ಜೀಶಂಪ ಮೊದಲಾದ ವಿದ್ವಾಂಸರೊಡನೆ ಜನಪದ ಸಾಹಿತ್ಯ ಸಂಗ್ರಹಣೆಯ ಮುಂಚೂಣಿಯಲ್ಲಿದ್ದವರು ತಿಪ್ಪೇಸ್ವಾಮಿ. ಜಾನಪದಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಕಾರ್ಯದಲ್ಲಿ ಇವರದು ಅಪಾರ ಅನುಭವ. ಕಾಡುಮೇಡುಗಳಲ್ಲಿ ಸಂಚರಿಸಿ ಅಪೂರ್ವ ವಸ್ತುಗಳನ್ನು ಸಂಗ್ರಹಿಸುವುದರೊಂದಿಗೆ ನಿಸರ್ಗದ ರುದ್ರರಮಣೀಯ ಚಿತ್ರಗಳು ಇವರ ಕುಂಚದಿಂದ ಮೂಡಿದವು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆ ಜಾನಪದ ವಸ್ತು

ಸಿ. ಆರ್. ತಿಪ್ಪೇಸ್ವಾಮಿ ಅವರ ಜಲವರ್ಣ ಚಿತ್ರಗಳು




ಹಂಪೆಯ ಭಗ್ನ ದೇವಾಲಯ



ಬಸವಕಲ್ಯಾಣದ ಬಸವಣ್ಣನವರ ಅರಿವಿನ ಮನೆ



ಬಿಜಾಪುರದಲ್ಲಿರುವ ಸಹಸ್ರಲಿಂಗ



ನಂಜನಗೂಡು ಶ್ರೀಕಂಠೇಶ್ವರ ರಥ

ಸಂಗ್ರಹಾಲಯ ಸ್ಥಾಪಿಸಿದಾಗ ನಾಡಿನಾದ್ಯಂತ ಸಂಚಾರ ಕೈಗೊಂಡು ಜನರ ಮನವೊಲಿಸಿ ಅಪಾರ ವಸ್ತುಗಳನ್ನು ಸಂಗ್ರಹಿಸುವಲ್ಲಿ ಅವರು ಯಶಸ್ವಿಯಾದರು. ಏಷ್ಯದಲ್ಲೇ ಅತ್ಯುತ್ತಮ ಜಾನಪದ ಸಂಗ್ರಹಾಲಯ ವೆಂಬ ಹೆಗ್ಗಳಿಕೆಗೆ ಪಾತ್ರವಾಗುವಲ್ಲಿ ತಿಪ್ಪೇಸ್ವಾಮಿಯವರ ಶ್ರದ್ಧೆ, ಆಸಕ್ತಿ ಹಾಗೂ ನಿರಂತರ ದುಡಿಮೆಗಳು ಕಾರಣವಾಗಿವೆ. ಈ ವಸ್ತು ಸಂಗ್ರಹಾಲಯ ರೂಪುಗೊಳ್ಳುವಲ್ಲಿ ಸುಪ್ರಸಿದ್ಧ ಜಾನಪದ ವಿದ್ವಾಂಸ ಜೀಶಂಪ, ಪ್ರೊ॥ ದೇಜಗೌ ಮತ್ತು ಡಾ॥ ಹಾ. ಮಾ. ನಾಯಕರು, ತಿಪ್ಪೇಸ್ವಾಮಿಯವರನ್ನು ಪ್ರೋತ್ಸಾಹಿಸಿದರು. ಜಾನಪದ ವಸ್ತುಸಂಗ್ರಹಾಲಯದ ಕ್ಯೂರೇಟರ್ ಆಗಿ ಅಪೂರ್ವ ವಸ್ತುಗಳನ್ನು ತಂದದ್ದಷ್ಟೇ ಅಲ್ಲ ಅವನ್ನು ವ್ಯವಸ್ಥಿತವಾಗಿ ಪ್ರದರ್ಶಿಸುವಲ್ಲೂ ತಿಪ್ಪೇಸ್ವಾಮಿಯವರು ತೋರಿದ ಆಸಕ್ತಿ ಮೆಚ್ಚುವಂತಹದ್ದು. ತಾವು ಸಂಗ್ರಹಿಸಿದ ವಸ್ತುಗಳನ್ನು ಅವರು ಗಂಟೆಗಟ್ಟಲೆ ಪರಿಚಯಿಸಬಲ್ಲರು. ಅವರಲ್ಲಿರುವ ಅದಮ್ಯ ಉತ್ಸಾಹ ಬೆರಗುಗೊಳಿಸುವಂತಹದ್ದು.

ತಿಪ್ಪೇಸ್ವಾಮಿ ಕರ್ನಾಟಕ ಜಾನಪದ ಪರಿಷತ್ತಿನ ಸದಸ್ಯರಾಗಿದ್ದರು. ಆಗ ಅವರು ಅನೇಕ ಜಾನಪದ ಸಮ್ಮೇಳನಗಳನ್ನು ಸಂಘಟಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕ್ಯೂರೇಟರ್ ಆಗಿ ನಿವೃತ್ತಿ ಹೊಂದಿದ ಬಳಿಕ ಅವರ ಅಪಾರ ಅನುಭವವನ್ನು ಬಳಸಿಕೊಳ್ಳಬೇಕೆಂದು ಭಾರತದ ನಾನಾ ರಾಜ್ಯಗಳಿಂದ ಅವರಿಗೆ ಆಹ್ವಾನಗಳು ಬಂದವು. ಕೊಟ್ಟಾಯಂನ ಮಹಾತ್ಮಗಾಂಧಿ ವಿಶ್ವವಿದ್ಯಾನಿಲಯ, ಜಾನಪದ ಲೋಕದ ವಸ್ತುಸಂಗ್ರಹಾಲಯ ಹಾಗೂ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆ ಅವರಿಂದ ಕರೆ—ಇವುಗಳಲ್ಲಿ ಮುಖ್ಯವಾದವು. ತಿಪ್ಪೇಸ್ವಾಮಿ ಧರ್ಮಸ್ಥಳವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಹೆಗಡೆಯವರ ಆತ್ಮೀಯ ಕರೆಗೆ ಓಗೊಟ್ಟು ಅಲ್ಲಿ ಸ್ಥಾಪಿಸಲಾದ 'ಮಂಜೂಷ' ವಸ್ತುಸಂಗ್ರಹಾಲಯದ ವ್ಯವಸ್ಥೆ, ವರ್ಗೀಕರಣ ಮತ್ತು ಅದರ ಬೆಳವಣಿಗೆಗೆ ಕಾರಣರಾದರೂ ಈ ಕಾರ್ಯದಲ್ಲಿ ತಮಗೆ ಸಂಪೂರ್ಣ ತೃಪ್ತಿ ದೊರೆಯಿತೆಂಬುದು ಅವರ ಅನಿಸಿಕೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ನುಡಿಯಲ್ಲಿ ತಿಪ್ಪೇಸ್ವಾಮಿಯವರಿಗೆ ದೃಢವಿಶ್ವಾಸ.

ಕಲೆ ಮತ್ತು ಕಲಾವಿದರಿಗೆ ಎಲ್ಲಿಯೇ ಅನ್ಯಾಯವಾಗಲಿ ಅದನ್ನು ಪ್ರತಿಭಟಿಸುವುದು ತಿಪ್ಪೇಸ್ವಾಮಿಯವರ ಜಾಯಮಾನ. ಗಂಡುಮೆಟ್ಟಿನ ಭೂಮಿಯಾದ ಚಿತ್ರದುರ್ಗದ ನಾಯಕರ ಧೈರ್ಯ ಸಾಹಸಗಳು ಅವರ ರಕ್ತದಲ್ಲಿದೆ. ಕಾಯಿಲೆಯಿಂದ ಬಳಲುವ ನಿಶಕ್ತ ಕಲಾವಿದರಿಗೆ ಅವರು ಸರ್ಕಾರದಿಂದ ನೆರವು ದೊರಕಿಸಿಕೊಟ್ಟಿದ್ದಾರೆ. ಸ್ವತಃ ತಾವು ಸಾಧ್ಯವಾದಷ್ಟು ಆರ್ಥಿಕ ನೆರವನ್ನೂ ನೀಡಿದ್ದುಂಟು. ಕಲೆ ಮತ್ತು ಕಲಾವಿದರ ಬಗ್ಗೆ ನಿಖರವಾಗಿ ಮಾತನಾಡಬಲ್ಲ ವ್ಯಕ್ತಿ ಅವರು. ಸ್ನೇಹಶೀಲರಾದ ತಿಪ್ಪೇಸ್ವಾಮಿಯವರಿಗೆ ಭಾರತದಾದ್ಯಂತ ಅಪಾರ ಮಿತ್ರ ಬಳಗ ಹಾಗೂ ಅಭಿಮಾನಿಗಳ ದಂಡೇ ಇದೆ. ತಾನೊಬ್ಬ ಶ್ರೀಸಾಮಾನ್ಯ ಎಂದು ಭಾವಿಸಿರುವ ಅವರು ಬಯಸುವುದು ಶ್ರೀಸಾಮಾನ್ಯರ ಸ್ನೇಹವನ್ನೇ. ಅಧಿಕಾರ ಬಂದಾಗ ಅವರೆಂದೂ ಬೀಗಿದವರಲ್ಲ. ತಮಗೆ ಸರಿದೋರಿದ್ದನ್ನು

ನಿರ್ದಾಕ್ಷಿಣ್ಯವಾಗಿ ಹೇಳುವ ಪ್ರವೃತ್ತಿ ಅವರದು.

ಕೆ. ವೆಂಕಟಪ್ಪ, ಆರ್.ಎಸ್. ನಾಯಿಡು, ಎಸ್. ನಂಜುಂಡಸ್ವಾಮಿ ಮೊದಲಾದ ಸುಪ್ರಸಿದ್ಧ ಕಲಾವಿದರೆಲ್ಲ ತಿಪ್ಪೇಸ್ವಾಮಿಯವರ ವಿಶ್ವಾಸ, ಸ್ನೇಹಕ್ಕೆ ಮಾರುಹೋದವರು. ಕಲಾವಿದರ ಸಂಘಟನೆಗಾಗಿಯೇ ದುಡಿದಿರುವ ತಿಪ್ಪೇಸ್ವಾಮಿ ನಾಡಿನ ಕಲಾವಿದರಿಗೆಲ್ಲ ಆತ್ಮೀಯರು. ಕನ್ನಡ ನಾಡಿನ ಕಲೆ ಮತ್ತು ಕಲಾವಿದರೆಂದರೆ ಇವರಿಗೆ ಎಲ್ಲಿಲ್ಲದ ಅಭಿಮಾನ ಮತ್ತು ಗೌರವ. ಗುಣಕ್ಕೆ ಗೌರವ ನೀಡುವ ಇವರು ಗುಣಪಕ್ಷಪಾತಿ.

ತಿಪ್ಪೇಸ್ವಾಮಿ ಅವರಿಗೆ ಹಲವಾರು ಪ್ರಶಸ್ತಿ ಗೌರವಗಳು ಸಂದಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಲಲಿತ ಕಲಾ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ—ಇವು ಮುಖ್ಯವಾದುವು. 'ಚಿತ್ರಕಲಾ ಕೋವಿದ' ಎಂಬುದು ಚಿತ್ರದುರ್ಗದ ಮಹಾಸಂಸ್ಥಾನದ ಮಠ ನೀಡಿದ ಬಿರುದು. ಧರ್ಮಸ್ಥಳದ 'ಮಂಜೂಷ' ರೂಪುಗೊಳ್ಳುವಲ್ಲಿ ದುಡಿದ ಅವರನ್ನು ಭಾರತದ ನಿವೃತ್ತ ಮುಖ್ಯ ನ್ಯಾಯಾಧೀಶ ಇ. ಎಸ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಗಿದೆ. ಕಳೆದ ವರ್ಷ ಕೆ. ವೆಂಕಟಪ್ಪ ಆಯ್ಕೆ ಸಮಿತಿಯ ಅಧ್ಯಕ್ಷರಾಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

ತಿಪ್ಪೇಸ್ವಾಮಿ ನಿಸರ್ಗ ಚಿತ್ರಕಾರರಾಗಿ ಮಾಡಿದ ಸಾಧನೆ ಅನುಪಮವಾದುದಾಗಿದೆ. ಇದರೊಂದಿಗೆ ರೇಖಾ ಚಿತ್ರ, ವ್ಯಂಗ್ಯ ಚಿತ್ರಗಳನ್ನೂ ಕೂಡ ಬಿಡಿಸಿದ್ದಾರೆ. ತಿಪ್ಪೇಸ್ವಾಮಿ ಇಲ್ಲಿಯವರೆಗೆ ಬರೆದ ಚಿತ್ರಗಳನ್ನು ಒಟ್ಟಿಗಿರಿಸಿದರೆ ನಮಗೆ ಕರ್ನಾಟಕದ ಸಮಗ್ರ ಕಲೆ, ನಿಸರ್ಗದ ಬೆಡಗು ಇವುಗಳ ದರ್ಶನವಾಗುವುದು. ನಾಡಿನ ಪ್ರಸಿದ್ಧ ಕ್ಷೇತ್ರಗಳನ್ನೆಲ್ಲ ಸಂದರ್ಶಿಸಿ ಅವುಗಳನ್ನು ತಮ್ಮ ಕುಂಚದಲ್ಲಿ ಸೆರೆಹಿಡಿದಿದ್ದಾರೆ. ತಿಪ್ಪೇಸ್ವಾಮಿಯವರನ್ನು ವಿಶೇಷವಾಗಿ ಆಕರ್ಷಿಸಿದ್ದು ಲೇಪಾಕ್ಷಿ. ಅಲ್ಲಿಯ ಕಲೆಯ ವೈಭವ ಅವರ ಕುಂಚದಲ್ಲಿ ಸೊಗಸಾಗಿ ಮೂಡಿಬಂದಿದೆ. ಕುವೆಂಪು ಅವರ ಕಾವ್ಯಗಳಿಂದಲೂ ಸ್ಫೂರ್ತಿಗೊಂಡ ತಿಪ್ಪೇಸ್ವಾಮಿ ಮಲೆನಾಡಿನ ಸುಂದರ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಕುವೆಂಪು ಅವರು ತಿಪ್ಪೇಸ್ವಾಮಿ ಚಿತ್ರಿಸಿದ ಮಲೆನಾಡಿನ ದೃಶ್ಯಗಳನ್ನು ಕಂಡು ಭಾವುಕರಾಗಿ ಹೀಗೆ ನುಡಿದರಂತೆ: ನಮ್ಮ ತಿಪ್ಪೇಸ್ವಾಮಿಯವರು ಮಲೆನಾಡಿಗೂ ನನ್ನ ಮನೆಗೂ ನಡುವೆ ಕಿಂಡಿ ಕೊರೆದಂತಿದೆ." ಕವಿ ಪು.ತಿ.ನ. ಅವರ ಜನ್ಮಸ್ಥಳ ಮೇಲುಕೋಟೆಯನ್ನು ತಿಪ್ಪೇಸ್ವಾಮಿ ಚಿತ್ರಿಸಿದ್ದಾರೆ. ಗೋವಾ, ಗೋಕರ್ಣ, ಸ್ವಾದಿ—ಇಲ್ಲಿನ ನಿಸರ್ಗದ ಸೊಬಗನ್ನು ತಮ್ಮ ಕುಂಚದಲ್ಲಿ ಸೆರೆಹಿಡಿದಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹರ್ತಿಕೋಟೆಯ ಪಟೇಲ ವಂಶದಲ್ಲಿ ಜನಿಸಿದ ತಿಪ್ಪೇಸ್ವಾಮಿ ಒಬ್ಬ ಸಜ್ಜನ. ಇವರ ಅಜ್ಜ ತಿಪ್ಪಯ್ಯನವರದು ಅನ್ನದಾನದಲ್ಲಿ ಎತ್ತಿದ ಕೈ ಆಗಿತ್ತಂತೆ. ಬಹುಶಃ ಅಜ್ಜನ ಗುಣ ಇವರಲ್ಲಿ ರಕ್ತಗತವಾಗಿ ಬಂದಿರಬೇಕು. ಇಂದಿಗೂ ಅವರು ಬಡವಿದ್ಯಾರ್ಥಿಗಳಿಗೆ ಊಟ ವಸತಿಗಾಗಿ ನೆರವಾಗುತ್ತಾರೆ. ಇವರ ಕೊಠಡಿಯಲ್ಲೇ ಇದ್ದು ಅಧ್ಯಯನ ಮಾಡಿ ಪದವಿಗಳನ್ನು ಪಡೆದು ದೊಡ್ಡ ಹುದ್ದೆಗಳನ್ನು ಅಲಂಕರಿಸಿದವರಿದ್ದಾರೆ. ತಿಪ್ಪೇಸ್ವಾಮಿ—ಇದು ಒಬ್ಬ ದೈವಾಂಶ ಸಂಭೂತನ ಹೆಸರು. ಆತನೇ ತಮ್ಮ ವಂಶಕ್ಕೆ ಪಟೇಲನಾಗಲಿದ್ದಾನೆ ಎಂದು ಇವರ ತಾತ ತಿಪ್ಪೇಸ್ವಾಮಿ

ಯವರ ಮೇಲೆ ತುಂಬ ಪ್ರೀತಿ ಇಟ್ಟು ಕೊಂಡಿದ್ದರಂತೆ. ಆದರೆ ಬಾಲ್ಯದಿಂದಲೂ ಶಿಪ್ಪೇಸ್ವಾಮಿಯವರನ್ನು ಆಕರ್ಷಿಸಿದ್ದು ನಿಸರ್ಗ. ಅವರು ಪ್ರಕೃತಿ ದೇವಿಯ ಆರಾಧಕ ರಾದರು. ಬಾಲ್ಯದಿಂದಲೂ ಅವರು ಬೆಳೆದ ಪರಿಸರವೇ ಇಂದು ಅವರನ್ನು ದೊಡ್ಡ ಕಲಾವಿದನನ್ನಾಗಿ ರೂಪಿಸಿದೆ. ಅವರ ಊರಿ ನಲ್ಲಿಯೇ ಇದ್ದ ಕೋಟೆ ಕೊತ್ತಲಗಳು, ದೇವಾಲಯಗಳು ಪ್ರಕೃತಿಯ ರಮ್ಯನೋಟ ಅವರ ಕುಂಚಕ್ಕೆ ಸಾಮಗ್ರಿಗಳಾದವು. ಬಾಲ್ಯದಿಂದಲೂ ಅವರಿಗೆ ತಾನೊಬ್ಬ ಕಲಾವಿದನಾಗಬೇಕೆಂಬ ಅದಮ್ಯ ಆಕಾಂಕ್ಷೆ ಯಿತ್ತು. ಹರ್ತಿಕೋಟೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ದಾವಣಗೆರೆಗೆ ಮಾಧ್ಯಮಿಕ ವ್ಯಾಸಂಗಕ್ಕಾಗಿ ತೆರಳಿದರು. ಅಲ್ಲಿ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾದಲ್ಲಿ ಬರುತ್ತಿದ್ದ ಚಿತ್ರಗಳನ್ನೆಲ್ಲ ಕಾಪಿ ಮಾಡು ತ್ತಿದ್ದರಂತೆ. ಗುರುಸಿದ್ದಪ್ಪ ಎಂಬ ಡ್ರಾಯಿಂಗ್ ಶಿಕ್ಷಕರು ಬರೆಯುತ್ತಿದ್ದ ಚಿತ್ರ ಗಳು ಅವರನ್ನು ವಿಶೇಷವಾಗಿ ಆಕರ್ಷಿಸಿ ದವು. ಅದೇ ಸಮಯದಲ್ಲಿ ನಾಟಕ ಸಿನಿಮಾ ಗೀಳು ಬೆಳೆಯಿತು. ಹುಡುಗ ಓದುವುದಿಲ್ಲ ವೆಂದು ದಾವಣಗೆರೆಯಿಂದ ಚಿತ್ರದುರ್ಗ ಶಾಲೆಗೆ ಕಳುಹಿಸಲಾಯಿತು.

ಶಿಪ್ಪೇಸ್ವಾಮಿಯವರು ಹೈಸ್ಕೂಲು ಸೇರಿದಾಗ ಅವರ ಪ್ರತಿಭೆಯನ್ನು ಗುರುತಿಸಿ ದವರು ಸಾಹಿತಿ ಹೊಯ್ಸಳರು. ೧೯೪೨ರಲ್ಲಿ ಜರುಗಿದ ಅಸಹಕಾರ ಚಳವಳಿಯಲ್ಲೂ ಶಿಪ್ಪೇಸ್ವಾಮಿ ಧುಮುಕಿದ್ದರು. ಒಮ್ಮೆ ಕಾಂಗ್ರೆಸ್ ಸಭೆ ನಡೆದಾಗ ಗಾಂಧೀಜಿಯವರ ಚಿತ್ರ ಬರೆದರಂತೆ. ಕಾಂಗ್ರೆಸ್ ಸಭೆಯ ಅಧ್ಯಕ್ಷತೆ ವಹಿಸಿದ್ದ ನಿಜಲಿಂಗಪ್ಪನವರು ಚಿತ್ರ ಬರೆದ ಕಲಾವಿದನ ಬಗ್ಗೆ ವಿಚಾರಿಸಿ ದರು. ಶಿಪ್ಪೇಸ್ವಾಮಿಯವರ ತಂದೆಯನ್ನು ಕರೆದು ಅಧ್ಯಯನಕ್ಕಾಗಿ ಮೈಸೂರಿಗೆ ಕಳುಹಿಸುವ ಸಲಹೆ ನೀಡಿದರು. ತಮ್ಮ ತಾತನ ಚಿತ್ರವನ್ನು ಬಿಡಿಸಿ ಅವರ ಹೃದಯ ಗೆದ್ದ ಶಿಪ್ಪೇಸ್ವಾಮಿ ಪಟೇಲಗಿರಿಯಿಂದ ಮುಕ್ತರಾಗಿ ಕಲಾವಿದನಾಗಲು ಮುಂದಾ ದರು. ತಂದೆ ರುದ್ರಪ್ಪ, ತಾಯಿ ಲಕ್ಷಮ್ಮ. ಐವರು ಮಕ್ಕಳಲ್ಲಿ ಇವರು ನಾಲ್ಕನೆ ಯವರು. ಮಗ ವಕೀಲ ವೃತ್ತಿಯನ್ನಾ ದರೂ ಮಾಡಲಿ ಎಂಬುದು ತಂದೆಯ ಇಚ್ಛೆ ಯಾಗಿತ್ತು. ಆದರೆ ಇದರಿಂದ ಕಲಾ ಪ್ರಪಂಚಕ್ಕೆ ತುಂಬ ನಷ್ಟವಾಗುತ್ತಿತ್ತು. ನೂರೊಂದು ಕನಸುಗಳನ್ನು ಹೊತ್ತು ಮೈಸೂರಿಗೆ ಬಂದ ಶಿಪ್ಪೇಸ್ವಾಮಿ ಜನಪದ ಸಾಹಿತ್ಯ ಮತ್ತು ಕಲಾವಿದರ ಸಂಘಟನೆ ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಬಾಳನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

ತಮ್ಮ ಬದುಕಿನಲ್ಲಿ ತೃಪ್ತಿ ಕಂಡಿರುವ ಶಿಪ್ಪೇಸ್ವಾಮಿ ನಾಡಿನ ಹೆಮ್ಮೆಯ ಕಲಾ ವಿದರು. ನಮ್ಮ ಕಲಾವಿದರು ಯಾವ ಪಂಥ ದವರೇ ಆಗಿರಲಿ ಅವರಿಗೆ ಶಿಪ್ಪೇಸ್ವಾಮಿ ಯವರ ಪ್ರೋತ್ಸಾಹವಿದೆ.

ಶಿಪ್ಪೇಸ್ವಾಮಿ ಕಲಾವಿದರಷ್ಟೇ ಅಲ್ಲ, ಒಂದು ಕಾಲದಲ್ಲಿ ಒಳ್ಳೆಯ ಕುಸ್ತಿಪಟು. ಯೋಗಾಸನವನ್ನು ಅಧ್ಯಯನ ಮಾಡಿರುವ ಅವರದು ಸದೃಢ ಶರೀರ, ಆಕರ್ಷಕ ವ್ಯಕ್ತಿತ್ವ. ಶಿಪ್ಪೇಸ್ವಾಮಿ ಬ್ರಹ್ಮಚಾರಿ. ಆದರೆ ಎಚ್ಚೆಸ್ಕೆ ಅವರು ಬರೆದಂತೆ 'ಕಲಾ-ಸಂಸಾರಿ.'

ಅಂತರಿಕ್ಷದಲ್ಲಿ ಭಾರತ: ಸಾಧನೆಗಳ ಸರಮಾಲೆ

ಬಿ. ಆರ್. ಗುರುಪ್ರಸಾದ್
೬೦೮ 'ಹರ್ಷ' ೩ನೇ 'ಎ' ಮೈನ್
ಇಸ್ರೋ ಲೇಔಟ್
ಬೆಂಗಳೂರು-೫೬೦೦೭೮

ರವಿ ಕಾಣದ್ದನ್ನು ಕವಿ ಕಂಡ, ಕವಿ ಕಂಡದ್ದನ್ನು ವಿಜ್ಞಾನಿ ರಚಿಸಿದ ಮತ್ತು ಕವಿಯ ಕಲ್ಪನೆಗೆ ಹೊಸ ಸಾರ್ಥಕತೆ ಒದಗಿಸಿದ. ವಿಜ್ಞಾನದ ಈ ನಿರಂತರ ಪರಿಕ್ರಮಣದಲ್ಲಿ ಆಕಾಶಾನ್ವೇಷಣೆ ಕವಿ ಕಲಾವಿದ ಸಾಹಿತಿ ವಿಜ್ಞಾನಿಗಳಿಗೆ ಅನಾದಿಕಾಲದಿಂದಲೂ ಅಸಂಖ್ಯ ಅವಕಾಶಗಳನ್ನು ಒದಗಿಸಿದೆ. ಹನುಮಂತನ ಸೂರ್ಯಗಮನವಾಗಲೀ ಸುದರ್ಶನದ ಕೃತಕ ಗ್ರಹಣ ನಿರ್ಮಾಣವಾಗಲೀ ಕೇವಲ ಊಹೆಗಳಾಗದೇ ಕಾಲಾಂತರದಲ್ಲಿ ವಾಸ್ತವತೆಗಳೇ ಆಗಿರುವುದು ಮೇಲಿನ ಹೇಳಿಕೆಗೆ ನಿದರ್ಶನ. ಪ್ರಕೃತ ಆಕಾಶ ವಿಜ್ಞಾನ ತಂತ್ರ ವಿದ್ಯೆಯ ಕ್ಷೇತ್ರದಲ್ಲಿ ಭಾರತದ ಸಾಧನೆ ಏನು ? ಭವಿಷ್ಯ ಎತ್ತ ? ಭಾರತದ ಹೆಮ್ಮೆಯ ಸಂಸ್ಥೆ ಇಸ್ರೋ. ಇದರಲ್ಲಿ ಕಾರ್ಯನಿರತ ವಿಜ್ಞಾನಿ ಕರ್ನಾಟಕದ ಸುಪುತ್ರ ಶ್ರೀ ಬಿ. ಆರ್. ಗುರುಪ್ರಸಾದ್ ನಮ್ಮ ಕೋರಿಕೆ ಮನ್ನಿಸಿ ಈ ಜನಪ್ರಿಯ ಲೇಖನ ಬರೆದಿದ್ದಾರೆ.

ಕೇವಲ ಐವತ್ತು ವರ್ಷಗಳ ಹಿಂದೆ ೧೯೪೭ ಪರಕೀಯರ ಆಳ್ವಿಕೆಯಿಂದ ವಿಮುಕ್ತಿ ಪಡೆದ ಭಾರತವಿಂದು ಅಭಿವೃದ್ಧಿಶೀಲ ರಾಷ್ಟ್ರಗಳ ಗುಂಪಿಗೆ ಸೇರಿದೆ. ಅಂತರಿಕ್ಷ ಯಾನಕ್ಕೆ ಅಗತ್ಯವಾದ ತಂತ್ರವಿದ್ಯೆಯನ್ನು ಕರಗತಮಾಡಿಕೊಳ್ಳುವಲ್ಲಿ ಎದುರಾಗುವ ಸವಾಲುಗಳು ಅಗಾಧವಾದವು ಎಂಬುದು ಇದಕ್ಕೆ ಕಾರಣವಾಗಿದೆ. ಇದರಿಂದಾಗಿ ಅಮೇರಿಕಾದಂಥ ಮುಂದುವರೆದ ರಾಷ್ಟ್ರಗಳೇ ಇಂದು ಅಂತರಿಕ್ಷ ಕ್ಷೇತ್ರದಲ್ಲಿ ಬಹುಮಟ್ಟಿಗೆ ಏಕಸಾಮ್ಯವನ್ನು ಸ್ಥಾಪಿಸಿವೆ.

ಆಶ್ಚರ್ಯವೆಂದರೆ ಅಭಿವೃದ್ಧಿಶೀಲ ರಾಷ್ಟ್ರವಾದರೂ ಭಾರತ ಇಂದು ಅಂತರಿಕ್ಷ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆಮಾಡಿದೆ. ಈ ಸಾಧನೆ ಹೊರಜಗತ್ತು ಭಾರತದತ್ತ ಮೆಚ್ಚುಗೆಯಿಂದ ನೋಡುವಂತೆ ಮಾಡಿದೆ.

ಆದರೆ ಭಾರತದ ಅಂತರಿಕ್ಷ ಕಾರ್ಯಕ್ರಮವಿಂದು ಕೇವಲ ಕೀರ್ತಿ ಪ್ರತಿಷ್ಠೆಗಳನ್ನು ಮಾತ್ರ ನಮಗೆ ಗಳಿಸಿಕೊಟ್ಟಿಲ್ಲ. ಜೊತೆಗೇ ನಮ್ಮ ರಾಷ್ಟ್ರೀಯ ಅಭಿವೃದ್ಧಿಯಲ್ಲೂ ಮುಖ್ಯ ಪಾತ್ರವಹಿಸುತ್ತಿದೆ. ಹೀಗೆ ಅಂತರಿಕ್ಷ ತಂತ್ರವಿದ್ಯೆಯ ಅವಲಂಬನೆ ತನ್ನ ತ್ವರಿತ ಮುನ್ನಡೆಗೆ ನೆರವಾಗುತ್ತದೆಂಬುದು ಸ್ಪಷ್ಟವಾಗಿರುವುದರಿಂದಲೇ ಭಾರತ ಇಂದು ಈ ನಿಟ್ಟಿನಲ್ಲಿ ಉತ್ಸಾಹದಿಂದ ಮುಂದುವರೆಯುತ್ತಿದೆ. ಇಷ್ಟೇ ಅಲ್ಲದೇ ಭಾರತದ

ಅಂತರಿಕ್ಷ ಕಾರ್ಯಕ್ರಮ ನಮಗೆ ಅಂತಾ ರಾಷ್ಟ್ರೀಯ ನೆಲೆಯಲ್ಲಿ ಲಾಭವನ್ನು ತಂದು ಕೊಡುವ ಮಟ್ಟವನ್ನೂ ಇತ್ತೀಚೆಗೆ ತಲಪಿದೆ.

ಇದುವರೆಗೂ (ಜೂನ್ ೧೯೯೭) ಭಾರತ ಕ್ಕಾಗಿ ಇಪ್ಪತ್ತಾರು ಕೃತಕ ಭೂ ಉಪಗ್ರಹ ಗಳು ನಿರ್ಮಿಸಲ್ಪಟ್ಟಿವೆ. ಅಂತರಿಕ್ಷದಲ್ಲಿ ಭೂಮಿಯನ್ನು ಗಂಟೆಗೆ ಸಾವಿರಾರು ಕಿಲೊಮೀಟರ್ ವೇಗದಲ್ಲಿ ಸುತ್ತುವ ಈ ಉಪಗ್ರಹಗಳ ಪೈಕಿ ಇಪ್ಪತ್ತೆರಡನ್ನು ನಮ್ಮ ದೇಶದಲ್ಲೇ ನಿರ್ಮಿಸಲಾಗಿದೆ.

ಅದೇ ರೀತಿ ಭಾರತದ ಹತ್ತು ಉಪಗ್ರಹ ಗಳಿಂದು ನೂರಾರು ಇಲ್ಲವೇ ಸಾವಿರಾರು ಕಿಲೋಮೀಟರ್ ಎತ್ತರದ ಕಕ್ಷೆಗಳಲ್ಲಿ ಭೂಮಿಯಸುತ್ತ ವಿಹರಿಸುತ್ತಲೇ ಅನೇಕ ವಿಧವಾದ ಸೇವೆಗಳನ್ನು ಭಾರತ ಹಾಗೂ ಇತರ ದೇಶಗಳಿಗೆ ಒದಗಿಸುತ್ತಿವೆ. ಇಂಥ ಉಪಗ್ರಹಗಳನ್ನು ಉಡಾಯಿಸಬಲ್ಲ ರಾಕೆಟ್‌ಗಳ ನಿರ್ಮಾಣದಲ್ಲಿ ಸಹ ಭಾರತಕ್ಕೆ ಯಶಸ್ಸು ದೊರತಿದೆ.

ಇಂದು ಅಂತರಿಕ್ಷ ಕ್ಷೇತ್ರದಲ್ಲಿ ಇಷ್ಟೆಲ್ಲ ಸಾಧಿಸಿರುವ ಭಾರತ ಸುಮಾರು ಮೂವತ್ತೈದು ವರ್ಷಗಳ ಹಿಂದೆ ತನ್ನ ಅಂತರಿಕ್ಷ ಕಾರ್ಯಕ್ರಮವನ್ನು ವಿದ್ಯುಕ್ತ ವಾಗಿ ಪ್ರಾರಂಭಿಸಿತು. ಪುಟ್ಟ ಸಂಶೋಧನಾ ರಾಕೆಟ್ ಒಂದರ ಉಡಾವಣೆಯ ಮೂಲಕ ಅದು ೧೯೬೩ರ ನವೆಂಬರ್‌ನಲ್ಲಿ ಪ್ರಾರಂಭ ವಾದಾಗ ಆ ಘಟನೆ ಹೊರಜಗತ್ತಿನ ಲಕ್ಷ್ಯ ವನ್ನು ಅಷ್ಟಾಗಿ ಸೆಳೆಯಲಿಲ್ಲ. ಸಾಮಾಜಿಕ, ಆರ್ಥಿಕ, ತಾಂತ್ರಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನೇಕ ಸಮಸ್ಯೆಗಳನ್ನು ಭಾರತ ಅಂದು ಎದುರಿಸುತ್ತಿರಲಾಗಿ ಆ ಘಟನೆ ಯನ್ನು ಹೊರಜಗತ್ತು ಹಗುರವಾಗಿ ಪರಿಗಣಿಸಿತು.

ಆದರೆ ನಮ್ಮ ಅಂತರಿಕ್ಷ ಕಾರ್ಯಕ್ರಮದ ನೇತಾರರಾದ ಡಾ|| ವಿಕ್ರಮ್ ಸಾರಾಭಾಯಿ ಯವರು ಅಂತರಿಕ್ಷ ತಂತ್ರವಿದ್ಯೆಯ ವಿಶಿಷ್ಟ ಸಾಮರ್ಥ್ಯದ ಬಗ್ಗೆ ಅಚಲನಂಬಿಕೆ ಹೊಂದಿ ದ್ದರು. ಅನೇಕ ಸಮಸ್ಯೆಗಳನ್ನು ಎದುರಿಸು ತ್ತಿದ್ದ ಭಾರತದ ತ್ವರಿತ ಅಭಿವೃದ್ಧಿಗೆ ಅಂತರಿಕ್ಷ ತಂತ್ರವಿದ್ಯೆ ಆಶಾಕಿರಣವಾಗಿ ಪರಿಣಮಿಸಬಲ್ಲದೆಂಬ ಬಗ್ಗೆ ಅವರಿಗೆ ಅನುಮಾನವೇ ಇರಲಿಲ್ಲ. ಆ ನಂಬಿಕೆ ಈಗಾಗಲೇ ಸಾಕಷ್ಟು ಮಟ್ಟಿಗೆ ನಿಜವಾಗಿರು ವುದು ಅವರ ದೂರದರ್ಶಿತ್ವಕ್ಕೆ ಸಾಕ್ಷಿ.

ಅಂತರಿಕ್ಷ ಚಟುವಟಿಕೆಗಳನ್ನು ಪ್ರಾರಂಭಿ ಸಿದ ಕೆಲವರ್ಷಗಳಲ್ಲೇ ಭಾರತ ಪುಟ್ಟ ಸಂಶೋಧನಾ ರಾಕೆಟ್‌ಗಳನ್ನು ಸ್ವತಃ ತಾನೇ ನಿರ್ಮಿಸಬಲ್ಲ ಸಾಮರ್ಥ್ಯಗಳಿಸಿ ಕೊಂಡಿತು. ಅವುಗಳನ್ನು ಹಾರಿಬಿಡುವ ಒಂದು ನೆಲೆಯಾದ ಕೇರಳದಲ್ಲಿರುವ 'ತುಂಬಾ' ತಾಣವನ್ನೂ ಅದು ವಿಶ್ವಸಂಸ್ಥೆಗೆ ಅರ್ಪಿಸಿತು.

ಭೂಮಿಯನ್ನು ಅದೃಶ್ಯ ವಾಯುಕವಚ ವೊಂದು ಹೊದ್ದಿಕೆಯಂತೆ ಆವರಿಸಿದೆಯಷ್ಟೆ. ಇದಕ್ಕೆ ಭೂ ವಾಯುಮಂಡಲ ಎಂದು ಹೆಸರು. ಬಾಹ್ಯಾಕಾಶದಿಂದ ಭೂಮಿಗೆ ಬರುವ ವಿಕಿರಣ ವಿಶೇಷಗಳು, ಭೂಕಾಂತ ಕ್ಷೇತ್ರ, ಗಗನದ ಸ್ವಚ್ಛ ದೃಶ್ಯ ಮುಂತಾದ ವನ್ನು ತಪಾಸಿಸಿ ಅಭ್ಯಸಿಸಲು ವಾಯು ಮಂಡಲದ ಉನ್ನತಪದರ ಪ್ರಶಸ್ತಪ್ರದೇಶ. ಅಲ್ಲಿಗೆ ತಲಪಿ ಮಾಹಿತಿ ಸಂಗ್ರಹಿಸುವ ಸಲುವಾಗಿ ಸಂಶೋಧನ ರಾಕೆಟುಗಳನ್ನು ತಯಾರಿಸಲಾಯಿತು. ಇಂಥ ಪುಟ್ಟ ರಾಕೆಟ್

ಗಳಿಗೆ ಇಂಗ್ಲೀಷಿನಲ್ಲಿ 'ಸೌಂಡಿಂಗ್ ರಾಕೆಟ್' ಗಳೆನ್ನುತ್ತಾರೆ. ಈಗಾಗಲೇ ಎರಡು ಸಾವಿರಕ್ಕೂ ಹೆಚ್ಚು ಸೌಂಡಿಂಗ್ ರಾಕೆಟ್‌ಗಳನ್ನು ಭಾರತದಿಂದ ಹಾರಿಬಿಡಲಾಗಿದೆ.

೧೯೬೦ರ ದಶಕದಲ್ಲಿ ಈ ಸೌಂಡಿಂಗ್ ರಾಕೆಟ್‌ಗಳೇ ನಮ್ಮ ಅಂತರಿಕ್ಷ ಕಾರ್ಯಕ್ರಮದ ಪ್ರಮುಖ ಅಂಗವಾಗಿದ್ದುವು. ಮುಂದೆ ೧೯೭೦ರ ದಶಕದಲ್ಲಿ ಭಾರತ ಕೃತಕ ಭೂ ಉಪಗ್ರಹಗಳ ಕ್ಷೇತ್ರ ಪ್ರವೇಶಿಸಿತು. ಇದರ ಫಲವಾಗಿ ಭಾರತದ ಪ್ರಥಮ ಉಪಗ್ರಹವಾದ 'ಆರ್ಯಭಟ'ದ ನಿರ್ಮಾಣ ೧೯೭೫ರಲ್ಲಿ ಪೂರ್ತಿಯಾಯಿತು. ಮುಂದೆ ಆ ವರ್ಷದ ಏಪ್ರಿಲ್ ೧೯ರಂದು 'ಆರ್ಯಭಟ' ರಷ್ಯಾದ ರಾಕೆಟ್ಟೊಂದರ ಬೆನ್ನೇರಿ ಅಂತರಿಕ್ಷಕ್ಕೆ ತೆರಳಿತು. ಅಷ್ಟೇ ಅಲ್ಲದೇ ಅದು ಸುಮಾರು ೬೦೦ ಕಿಲೊಮೀಟರ್ ಎತ್ತರದ ಕಕ್ಷೆಯೊಂದರಲ್ಲಿ ತನ್ನಷ್ಟಕ್ಕೆ ತಾನೇ ಭೂಮಿಯನ್ನು ಪರಿಭ್ರಮಿಸಲು ಆರಂಭಿಸಿತು. ಆರ್ಯಭಟ ಪ್ರಾಚೀನ ಭಾರತದ ವಿಖ್ಯಾತ ಗಣಿತ ಹಾಗೂ ಖಗೋಲಶಾಸ್ತ್ರಜ್ಞನಾಗಿದ್ದನೆಂಬುದನ್ನು ನಾವಿಲ್ಲಿ ನೆನೆಯಬಹುದು.

ವೈಜ್ಞಾನಿಕ ಅಥವಾ ತಾಂತ್ರಿಕ ಉಪಕರಣಗಳನ್ನು ಹೊತ್ತು ಅಂತರಿಕ್ಷದಲ್ಲಿ ಭೂಮಿಯನ್ನು ಸುತ್ತುವ ಸ್ವಚಾಲಿತ ಸಾಧನಗಳಿಗೆ ಕೃತಕ ಭೂ ಉಪಗ್ರಹಗಳೆಂದು ಹೆಸರು. ಇವು ವೈಜ್ಞಾನಿಕ ಮುನ್ನಡೆಗೆ, ಅದರಲ್ಲೂ ಖಗೋಲಶಾಸ್ತ್ರದ ಮುನ್ನಡೆಗೆ ಅಮೂಲ್ಯ ನೆರವು ನೀಡಬಲ್ಲವು; ಅದೃಶ್ಯ ರೇಡಿಯೊ ತರಂಗಗಳ ಮೂಲಕ ದೂರದ ಪ್ರದೇಶಗಳನ್ನು ಒಂದರೊಂದೊಡನೆ ಸುಲಭವಾಗಿ ಹೆಣೆಯಬಲ್ಲವು; ನಿಖರವಾದ ಹವಾಮಾನಸೂಚನೆ ಒದಗಿಸಬಲ್ಲವು; ಭೂಸಂಪನ್ಮೂಲಗಳ ಅಪವ್ಯಯದ ಬಗ್ಗೆ ಮಾನವನಿಗೆ ಸಕಾಲದಲ್ಲಿ ಎಚ್ಚರಿಕೆ ಚುಚ್ಚಬಲ್ಲವು; ಹಗಲೂ ಇರುಳೂ ವಾಹನಗಳು ತಮ್ಮ ಸ್ಥಾನವನ್ನು ನಿಖರವಾಗಿ ಗುರುತಿಸಿಕೊಳ್ಳುವಲ್ಲಿ ನೆರವಿಗೆ ಬರುವ ಮೂಲಕ ಸಾರಿಗೆ ಕ್ಷೇತ್ರಕ್ಕೆ ಅಮೂಲ್ಯ ಸಹಾಯ ಕೊಡಬಲ್ಲವು. ಈ ಪೈಕಿ ಆರ್ಯಭಟ ಒಂದು ವೈಜ್ಞಾನಿಕ ಉಪಗ್ರಹವಾಗಿತ್ತು.

ಅಂತರಿಕ್ಷ ಭೂವಾಯುಮಂಡಲದಿಂದ ಆಚೆ ಇರುವ ಪ್ರದೇಶ. ಅಲ್ಲಿಯ ಪರಿಸರವು ಭೂಮಿಯ ಮೇಲಿನದಕ್ಕೆ ಹೋಲಿಸಿದಲ್ಲಿ ಬಹುಮಟ್ಟಿಗೆ ಪ್ರತಿಕೂಲಕರವಾಗಿದೆ. ಅಲ್ಲಿ ವಾಯು ಇಲ್ಲ. ಜೊತೆಗೇ ಭೂಜೀವಿಗಳಿಗೆ ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಮಾರಕವಾದ ಅನೇಕ ಬಗೆಯ ಸೂಕ್ಷ್ಮಕಣಗಳು ಹಾಗೂ ವಿಕಿರಣಗಳು ಯಥೇಚ್ಛವಾಗಿ ಕಂಡುಬರುತ್ತವೆ.

ಇಂಥ ವಿಶಿಷ್ಟ ಪರಿಸರದಲ್ಲಿ ವಿಶ್ವಾಸಾರ್ಹವಾಗಿ ಕೆಲಸಮಾಡಬಲ್ಲ ಉಪಗ್ರಹವೊಂದನ್ನು ನಿರ್ಮಿಸುವುದು ಬಲುಕಷ್ಟ. ಆದು ಆರ್ಯಭಟದಿಂದ ಪ್ರಾರಂಭಿಸಿದ ಭಾರತೀಯ ವಿಜ್ಞಾನಿಗಳು ಇಂದು ಈ ಕ್ಷೇತ್ರದಲ್ಲಿ ಸಾಕಷ್ಟು ಮೇಲುಗೈ ಸಾಧಿಸಿದ್ದಾರೆ.

ಆರ್ಯಭಟದ ತರುವಾಯ ಪ್ರಾರಂಭವಾದುದು 'ಭಾಸ್ಕರ' ಉಪಗ್ರಹ ಕಾರ್ಯಕ್ರಮ. ಭಾಸ್ಕರಾಚಾರ್ಯರೆಂಬ ಇಬ್ಬರು ಗಣಿತ ಹಾಗೂ ಖಗೋಲಶಾಸ್ತ್ರಜ್ಞರು ಪ್ರಾಚೀನ ಭಾರತದಲ್ಲಿದ್ದರಲ್ಲವೇ?

ಭಾಸ್ಕರ ಕಾರ್ಯಕ್ರಮದಲ್ಲಿ ಎರಡು 'ದೂರಸಂವೇದಿ' ಉಪಗ್ರಹಗಳನ್ನು ೧೯೭೯

ಹಾಗೂ ೧೯೮೮ರಲ್ಲಿ ಕ್ರಮವಾಗಿ ಭೂ ಕಕ್ಷೆಗೆ ಹಾರಿಬಿಡಲಾಯಿತು. 'ದೂರಸಂವೇದಿ ಉಪಗ್ರಹ' ಎಂದರೆ ದೂರದಿಂದಲೇ ವಸ್ತು ಅಥವಾ ಘಟನೆಯೊಂದನ್ನು ಗ್ರಹಿಸುವ ಸಾಮರ್ಥ್ಯವುಳ್ಳ ಕೃತಕ ಭೂ ಉಪಗ್ರಹ. ಹೀಗಾಗಿ ಭಾಸ್ಕರ ೧ ಮತ್ತು ೨ ಹಾವಿದ್ದ ೫೫೦ ಕಿಲೋಮೀಟರ್ ಎತ್ತರದ ಕಕ್ಷೆಯಿಂದಲೇ ಭೂಮಿಯ ಮೇಲೆ ನಡೆಯುವ ಕೆಲವು ಪ್ರಾಕೃತಿಕ ವಿದ್ಯಮಾನಗಳನ್ನು ಗ್ರಹಿಸುವ ಸಾಮರ್ಥ್ಯ ಹೊಂದಿದ್ದುವು. ಇದಕ್ಕಾಗಿ ಅವುಗಳಲ್ಲಿ ಪುಟ್ಟ ದೂರದರ್ಶನ ಕ್ಯಾಮರಾಗಳನ್ನೂ ಮತ್ತೊಂದು ಬಗೆಯ ವೈಜ್ಞಾನಿಕ ಉಪಕರಣಗಳನ್ನೂ ಅಳವಡಿಸಲಾಗಿತ್ತು.

ಈ ಎರಡು ಉಪಗ್ರಹಗಳ ನೆರವಿನೊಡನೆ ಅನೇಕ ಕ್ಷೇತ್ರಗಳಲ್ಲಿ ಉಪಯುಕ್ತವಾದ ಪ್ರಯೋಗಗಳನ್ನು ನಡೆಸಲಾಯಿತು. ನಡುವೆ ಅನೇಕ ಕಷ್ಟಗಳು ಎದುರಾದರೂ ನಮ್ಮ ವಿಜ್ಞಾನಿಗಳು ಧೃತಿಗೆಡಲಿಲ್ಲ. ಏಕೆಂದರೆ ಕೃತಕ ಭೂ ಉಪಗ್ರಹದಂಥ ಉನ್ನತ ತಂತ್ರವಿದ್ಯೆ ಸಾಧನವೊಂದನ್ನು ನಿರ್ಮಿಸಿ ಉಪಯೋಗಿಸಿಕೊಳ್ಳುವ ಬಗ್ಗೆ ಅವರಿಗೆ ಆತ್ಮವಿಶ್ವಾಸ ಮೂಡಲಾರಂಭಿಸಿತ್ತು.

ಇದರ ಫಲವಾಗಿ ಭಾರತದ ಪ್ರಥಮ 'ಕಾರ್ಯವಾಹಿ' ದೂರಸಂವೇದಿ ಉಪಗ್ರಹವಾದ ಐ.ಆರ್.ಎಸ್.-೧ಎ ೧೯೮೮ರಲ್ಲಿ ಯಾನಕ್ಕೆ ಸಜ್ಜಾಯಿತು. ಅನೇಕ ವರ್ಷಗಳ ಕಾಲ ಅಂತರಿಕ್ಷದಿಂದ ಅಮೂಲ್ಯ ಚಿತ್ರರೂಪದ ಮಾಹಿತಿ ಒದಗಿಸುವ ಸಾಮರ್ಥ್ಯ ಆ ಉಪಗ್ರಹಕ್ಕಿತ್ತು. ಹೀಗಾಗಿ ಅದನ್ನು ಕಾರ್ಯವಾಹಿ ಉಪಗ್ರಹನೆಂದು ಕರೆಯಲಾಯಿತು.

ಇಂಥ ಸೂಕ್ಷ್ಮ ಎಲೆಕ್ಟ್ರಾನಿಕ್ ಕ್ಯಾಮರಾ ಯುಕ್ತ ದೂರಸಂವೇದಿ ಉಪಗ್ರಹಗಳ ನೆರವಿನಿಂದ ನಮ್ಮ ಸಂಪನ್ಮೂಲಗಳನ್ನು ನಾವು ನಿಖರವಾಗಿ ಹಾಗೂ ಸುಲಭವಾಗಿ ಮೋಜಣಿ ಮಾಡಬಹುದು. ನಮ್ಮಲ್ಲಿರುವ ಪ್ರಾಕೃತಿಕ ಹಾಗೂ ಮಾನವನಿರ್ಮಿತ ಸಂಪನ್ಮೂಲಗಳ ವಿವರವನ್ನು ನಿಖರವಾಗಿ ತಿಳಿಯುವುದು ಬಲು ಮುಖ್ಯ. ಏಕೆಂದರೆ ಆ ಮೂಲಕ ಅವನ್ನು ಎಚ್ಚರಿಕೆಯಿಂದ ಬಳಸಿಕೊಳ್ಳುವ ಮಾರ್ಗವನ್ನು ಅನುಸರಿಸಿ ಪರಿಸರಕ್ಕೆ ಹಾನಿಯಾಗದಂತೆ ನಿರಂತರ ಅಭಿವೃದ್ಧಿ ಸಾಧಿಸಬಹುದು. ಜೊತೆಗೇ ಆ ಸಂಪನ್ಮೂಲಗಳು ಮುಂದಿನ ಪೀಳಿಗೆಯವರಿಗೂ ಲಭ್ಯವಾಗುವಂತೆ ನೋಡಿಕೊಳ್ಳಬಹುದು.

ಈ ನಿಟ್ಟಿನಲ್ಲಿ ಸಾವಿರ ಕಿಲೊಗ್ರಾಮ್ ತೂಕದ 'ಐ.ಆರ್.ಎಸ್-೧ಎ' ಉಪಗ್ರಹ ಕೇವಲ ಇಪ್ಪತ್ತೆರಡು ದಿನಗಳಿಗೊಮ್ಮೆ ಇಡೀ ಭಾರತವನ್ನು ಸಂಪೂರ್ಣವಾಗಿ ಮೋಜಣಿ ಮಾಡಬಲ್ಲದಾಗಿತ್ತು. ಈಗಾಗಲೇ ಆ ಉಪಗ್ರಹ ಭಾರತವನ್ನು ನೂರಕ್ಕೂ ಹೆಚ್ಚುಬಾರಿ ಮೋಜಣಿ ಮಾಡಿದೆ.

ಐ.ಆರ್.ಎಸ್.-೧ಎ ಉಪಗ್ರಹದ ಯಶಸ್ಸಿನ ಬಳಿಕ ಉಡಾಯಿಸಲಾದ ಸುಮಾರು ಅದೇ ಬಗೆಯ ಇನ್ನೂ ನಾಲ್ಕು ದೂರಸಂವೇದಿ ಉಪಗ್ರಹಗಳೆಂದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಅವುಗಳ ಪೈಕಿ ಕೆಲವು ವಿದೇಶಗಳಿಗೂ ಮಾಹಿತಿಯನ್ನು ಒದಗಿಸುತ್ತಿವೆ.

ಇಂದು ಇತರ ದೇಶಗಳು ಹಾರಿಬಿಟ್ಟಿರುವ ಅನೇಕ ದೂರಸಂವೇದಿ ಉಪಗ್ರಹಗಳು ಅಂತರಿಕ್ಷದಲ್ಲಿ ವಿಹರಿಸುತ್ತಿವೆ. ಅವುಗಳಿಗೆ ಹೋಲಿಸಿದಲ್ಲಿ ನಮ್ಮ ಇತ್ತೀಚಿನ ಐ.ಆರ್.ಎಸ್.–೧ಸಿ ಉಪಗ್ರಹ ಅತ್ಯಂತ ಸೂಕ್ಷ್ಮವಾದದ್ದೆನ್ನಬಹುದು.

ಕೇವಲ ಹದಿನೆಂಟು ಅಡಿಗಳಷ್ಟು ಚಿಕ್ಕದಾದ ಭೂಸ್ವರೂಪಗಳನ್ನು ಅದು ತಾನಿರುವ ೮೦೦ ಕಿಲೊ ಮೀಟರ್ ಎತ್ತರದ ಕಕ್ಷೆಯಿಂದಲೇ ಗುರುತಿಸಬಲ್ಲದ್ದಾಗಿದೆ. ಜಗತ್ತಿನ ಬಹುತೇಕ ಭಾಗಗಳ ಚಿತ್ರಗಳನ್ನು ತೆಗೆದು ದಾಖಲುಮಾಡಿಕೊಳ್ಳಬಲ್ಲ ಸಾಮರ್ಥ್ಯವನ್ನೂ ಆ ಉಪಗ್ರಹಹೊಂದಿದೆ. ಈ ಚಿತ್ರಗಳು ಅನೇಕ ಕ್ಷೇತ್ರಗಳಲ್ಲಿ ಬಳಕೆಗೆ ಬರುವ ಅಮೂಲ್ಯ ಮಾಹಿತಿಯನ್ನು ತಮ್ಮೊಳಗೆ ಅಡಗಿಸಿಟ್ಟುಕೊಂಡಿರುತ್ತವೆ.

ಇಂದು ಐ.ಆರ್.ಎಸ್. ಸರಣಿಯ ದೂರಸಂವೇದಿ ಉಪಗ್ರಹಗಳು ನಮ್ಮ ಆರ್ಥಿಕ ಕ್ಷೇತ್ರದ ವಿವಿಧ ಅಂಗಗಳಿಗೆ ಅಗತ್ಯ ಮಾಹಿತಿ ಒದಗಿಸುತ್ತಿವೆ. ಇವು ಕಳುಹಿಸುವ ಮಾಹಿತಿಯ ವಿಶ್ಲೇಷಣೆಯಿಂದ ಅಂತರ್ಜಲವನ್ನು ಹುಡುಕುವುದು ಸುಲಭವಾಗಿದೆ; ನಮ್ಮ ಅರಣ್ಯ ಸಂಪತ್ತನ್ನು ತ್ವರಿತವಾಗಿ ಅಂದಾಜುಮಾಡುವುದು ಹಾಗೂ ಕಾಡ್ಕಿಚ್ಚನ್ನು ಗುರುತಿಸುವುದು ಸಾಧ್ಯವಾಗಿದೆ.

ಬೆಳೆಯೊಂದರ ಎಕರೆವಾರು ಪ್ರದೇಶ ಹಾಗೂ ಇಳುವರಿಯನ್ನು ತ್ವರಿತವಾಗಿ ಅಂದಾಜುಮಾಡಬಹುದಾಗಿದೆ; ನಗರ ಪ್ರದೇಶಗಳು ವ್ಯವಸ್ಥಿತವಾಗಿ ಬೆಳೆಯುವಂತೆ ಯೋಜಿಸುವುದು ಸಾಧ್ಯವಿದೆ. ಈ ಪ್ರಮುಖ ಉದಾಹರಣೆಗಳಲ್ಲದೇ ರಾಷ್ಟ್ರೀಯ ಅಭಿವೃದ್ಧಿಗೆ ಸಂಬಂಧಿಸಿದ ಇನ್ನೂ ಅವೆಷ್ಟೋ ಕಾರ್ಯಗಳು ಐ.ಆರ್.ಎಸ್. ಉಪಗ್ರಹಗಳ ನೆರವಿನಿಂದ ಸಾಧ್ಯವಾಗಿವೆ.

ಈ ರೀತಿ ಐ.ಆರ್.ಎಸ್. ಉಪಗ್ರಹಗಳಿಂದು ನಮ್ಮ ದೇಶಕ್ಕೆ ಮಹತ್ವಪೂರ್ಣ ಮಾಹಿತಿ ಒದಗಿಸುತ್ತಿದ್ದರೂ ಅವು ಎಲೆಮರೆಯ ಕಾಯಿಯಂತೆ ಹೆಚ್ಚು ಪ್ರಚಾರಗಳಿಸಿಲ್ಲ. ಇವುಗಳಿಗೆ ಹೋಲಿಸಿದಲ್ಲಿ ಇನ್ಸಾಟ್ ಸರಣಿಯ ರಾಷ್ಟ್ರೀಯ ಉಪಗ್ರಹಗಳು ಸಾರ್ವಜನಿಕರಿಗೆ ಸಾಕಷ್ಟು ಪರಿಚಿತವಾಗಿವೆಯೆನ್ನಬಹುದು. ನಮ್ಮ ದೂರದರ್ಶನದ ಕಾರ್ಯಕ್ರಮಗಳನ್ನು ಇವು ಭಾರತಾದ್ಯಂತ ಏಕಕಾಲದಲ್ಲಿ ಬಿತ್ತರಿಸುತ್ತಿವೆ ಎಂಬ ವಿಷಯವೇ ಇದಕ್ಕೆ ಕಾರಣ.

ಭೂಮಿಯಿಂದ ಮೂವತ್ತಾರು ಸಾವಿರ ಕಿಲೊ ಮೀಟರ್ ಎತ್ತರದ ಕಕ್ಷೆಯೊಂದರಲ್ಲಿ ಉಪಗ್ರಹವೊಂದು ಅದನ್ನು ಪರಿಭ್ರಮಿಸುತ್ತಿದೆಯೆಂದಿಟ್ಟುಕೊಳ್ಳೋಣ. ಅಂಥ ಉಪಗ್ರಹವೊಂದು ಭೂಮಿಯ ಮೇಲಿನ ಸ್ಥಳವೊಂದರ ಮೇಲೆ ಸ್ಥಿರವಾಗಿ ನಿಂತಂತೆ ವರ್ತಿಸುತ್ತದೆ. ಹೀಗಾಗಿ ಅದನ್ನು ರೇಡಿಯೊ ಪ್ರತಿಫಲಕವೊಂದರಂತೆ ಬಳಸಿಕೊಳ್ಳುವ ಮೂಲಕ ನಮ್ಮ ಸಂಪರ್ಕ ಕ್ಷೇತ್ರದ ವ್ಯಾಪ್ತಿಯನ್ನು ತ್ವರಿತವಾಗಿ ಹಾಗೂ ಸುಲಭವಾಗಿ ದೇಶಾದ್ಯಂತ ವಿಸ್ತರಿಸಬಹುದು. ಈ ವಿಷಯವನ್ನು ಡಾ|| ಸಾರಾಭಾಯಿಯವರು ಸ್ಪಷ್ಟವಾಗಿ ಗ್ರಹಿಸಿದ್ದರು.

ಈ ನಿಟ್ಟಿನಲ್ಲಿ ಕೆಲವು ಪ್ರಯೋಗಗಳು ೧೯೭೦ರ ದಶಕದಲ್ಲಿ ನಡೆದುವು. ಮುಂದೆ ೧೯೮೧ರಲ್ಲಿ ನಮ್ಮದೇ ಆದ ಸಂಪರ್ಕ ಉಪಗ್ರಹ ಆ್ಯಪಲ್ ೩೬,೦೦೦ ಕಿಲೊ ಮೀಟರ್ ಎತ್ತರದ ಆ 'ಭೂಸ್ಥಿರ ಕಕ್ಷೆ'ಯನ್ನು ತಲು

ಿತು. ಅನಂತರ ಸಂಪರ್ಕ ಉಪಗ್ರಹಗಳ ಮಹತ್ವ ಮತ್ತಷ್ಟು ಸ್ಪಷ್ಟವಾಯಿತು.

ಮುಂದಿನ ಎರಡು ವರ್ಷಗಳ ಅನಂತರ ಭಾರತದ ರಾಷ್ಟ್ರೀಯ ಉಪಗ್ರಹ ಇನ್ಸಾಟ್ -೧ಬಿ ಆ ವಿಶೇಷ ಕಕ್ಷೆ ಸೇರಿದ ಬಳಿಕ ದೂರದರ್ಶನದ ಸೌಲಭ್ಯವನ್ನು ಭಾರತದ ಗ್ರಾಮೀಣ ಪ್ರದೇಶಗಳಿಗೂ ತ್ವರಿತವಾಗಿ ವಿಸ್ತರಿಸಲಾರಂಭಿಸಿತು. ಇಂದು ಈ ಕಾರ್ಯ ಯಾವ ಮಟ್ಟ ತಲುಪಿದೆಯೆಂದರೆ ನಮ್ಮ ಒಟ್ಟು ಜನಸಂಖ್ಯೆಯ ಶೇಕಡಾ ಎಂಬತ್ತರಷ್ಟು ಭಾಗಕ್ಕೆ ಭಾರತೀಯ ದೂರದರ್ಶನದ ಕಾರ್ಯಕ್ರಮಗಳು ತಲಪುತ್ತಿವೆ. ಇದರೊಂದಿಗೇ ದೂರವಾಣಿ ಹಾಗೂ ಟೆಲಿಗ್ರಾಫ್‌ನಂಥ ಆಧುನಿಕ ಸಂಪರ್ಕ ಸಾಧನಗಳ ಸೌಲಭ್ಯವನ್ನು ನಮ್ಮ ಇನ್ಸಾಟ್ ಉಪಗ್ರಹಗಳಿಂದು ದೇಶದ ಮೂಲೆಮೂಲೆಗೂ ಕೊಂಡೊಯ್ದಿವೆ. ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಎಸ್.ಟಿ.ಡಿ./ಐ.ಎಸ್.ಡಿ. ಕೇಂದ್ರಗಳು ದೇಶಾದ್ಯಂತ ಸಹಸ್ರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡಿರುವುದು ಇದಕ್ಕೆ ಸಾಕ್ಷಿ.

ಜೊತೆಗೇ ನಿಖರವಾದ ಹವಾಮುನ್ಸೂಚನೆಯನ್ನು, ಅದರಲ್ಲೂ ಚಂಡಮಾರುತಗಳ ಬಗ್ಗೆ ಮುನ್ನೆಚ್ಚರಿಕೆ ನೀಡುವುದನ್ನು ನಮ್ಮ ಇನ್ಸಾಟ್ ಉಪಗ್ರಹಗಳು ಸಾಧ್ಯಮಾಡಿವೆ. ಆ ಮೂಲಕ ಸಾವಿರಾರು ಜೀವಗಳನ್ನು ಪರೋಕ್ಷವಾಗಿ ಉಳಿಸಿವೆ. ಇಂದು ಐದು ಇನ್ಸಾಟ್ ಉಪಗ್ರಹಗಳು ಅನೇಕ ವಿಧವಾದ ಸೇವೆಗಳನ್ನು ಭಾರತಕ್ಕೆ ಒದಗಿಸುತ್ತಿವೆ. ಆ ಪೈಕಿ ಈ ಜೂನ್ ೪ ರಂದು (೧೯೯೭) ಹಾರಿಬಿಡಲಾದ 'ಇನ್ಸಾಟ್-೨ಡಿ' ಭಾರತದಲ್ಲಿ ನಿರ್ಮಿಸಲಾದ ಸ್ವದೇಶಿ ಇನ್ಸಾಟ್ ಉಪಗ್ರಹಗಳಲ್ಲಿ ಇತ್ತೀಚಿನದಾಗಿದೆ.

ಕೃತಕ ಭೂ ಉಪಗ್ರಹಗಳು ಭೂಮಿಯನ್ನು ಪರಿಭ್ರಮಿಸುವುದು ಭೂವಾಯು ಮಂಡಲದಿಂದ ಆಚೆಗೆ ಇರುವ ಅಂತರಿಕ್ಷದಲ್ಲಷ್ಟೆ. ಹೀಗಾಗಿ ಈ ಬ್ರಹ್ಮಾಂಡದ ಬಗ್ಗೆ ಅನೇಕ ಬಗೆಯ ಮಾಹಿತಿಗಳನ್ನು ಸಂಗ್ರಹಿಸುವ ಸಾಮರ್ಥ್ಯ ಅವುಗಳಿಗಿರುತ್ತದೆ. ಇಂದು ಕಾರ್ಯನಿರ್ವಹಿಸುತ್ತಿರುವ 'ಸ್ರಾಸ್-ಸಿ-೨' ಉಪಗ್ರಹವೂ ಸೇರಿದಂತೆ ಇಂತಹ ಮೂರು ವೈಜ್ಞಾನಿಕ ಉಪಗ್ರಹಗಳನ್ನು ಭಾರತ ಕಕ್ಷೆಗೆ ಹಾರಿಬಿಟ್ಟಿದೆ.

ಕೃತಕ ಭೂ ಉಪಗ್ರಹಗಳ ಸಾಮರ್ಥ್ಯ ಅಗಾಧವಾದುದೇನೋ ಸರಿ. ಆದರೆ ಅವು ಭೂಮಿಯನ್ನು ಸುತ್ತುವಂತೆ ಮಾಡಲು ಬೃಹತ್ ರಾಕೆಟ್‌ಗಳು ಅತ್ಯಗತ್ಯ. ಇದನ್ನು ಅರಿತ ಭಾರತದ ಅಂತರಿಕ್ಷ ಕಾರ್ಯಕ್ರಮದ ನೇತಾರರು ಉಪಗ್ರಹ ಉಡಾವಣಾ ರಾಕೆಟ್‌ಗಳ ನಿರ್ಮಾಣದತ್ತಲೂ ಗಮನ ಹರಿಸಿದರು.

ಈ ನಿಟ್ಟಿನಲ್ಲಿ ಮೊದಲು 'ಎಸ್.ಎಲ್.ವಿ.-೩' ಎಂಬ ಪುಟ್ಟ ಸ್ವದೇಶಿ ಉಡಾವಣಾ ರಾಕೆಟ್ಟೊಂದು ನಿರ್ಮಾಣವಾಯಿತು. ಪುಟ್ಟ ರೋಹಿಣಿ ಉಪಗ್ರಹವೊಂದನ್ನು ಅದು ೧೯೮೦ರ ಜುಲೈ ೧೮ರಂದು ಅಂತರಿಕ್ಷಕ್ಕೆ ಹಾರಿಬಿಟ್ಟಾಗ ಭಾರತದ ಕೀರ್ತಿ ಜಗತ್ತಿನಾದ್ಯಂತ ಹರಡಿತು.

ಕೆಲಕಾಲದ ಅನಂತರ 'ಎ.ಎಸ್.ಎಲ್.ವಿ' ಎಂಬ ಮತ್ತಷ್ಟು ದೊಡ್ಡ ರಾಕೆಟ್ಟನ್ನು ನಮ್ಮ ವಿಜ್ಞಾನಿಗಳು ನಿರ್ಮಿಸಿದರು. ಇತ್ತೀಚಿನ ವರ್ಷಗಳಲ್ಲಿ ಭಾರತ 'ಪಿ. ಎಸ್. ಎಲ್. ವಿ.' ಎಂಬ ಹದಿನೈದು ಮಹಡಿಗಳಷ್ಟು ಎತ್ತರದ ದೈತ್ಯ ರಾಕಟ್ಟನ್ನು ಸತತವಾಗಿ ಎರಡು ಬಾರಿ ಯಶಸ್ವಿಯಾಗಿ ಉಡಾಯಿಸಿದೆ. ಇದೀಗ 'ಜಿ.ಎಸ್.ಎಲ್.ವಿ'

ಎಂಬ ಮತ್ತಷ್ಟು ಶಕ್ತಿಯುತವಾದ ರಾಕೆಟ್ ನಿರ್ಮಾಣದ ಹಂತದಲ್ಲಿದೆ.

ಭಾರತದ ಅಂತರಿಕ್ಷ ಕಾರ್ಯಕ್ರಮದ ಮೂಲ ಉದ್ದೇಶ ಅಂತರಿಕ್ಷ ತಂತ್ರವಿದ್ಯೆಯು ವಿಶಿಷ್ಟ ಸಾಮರ್ಥ್ಯದ ಫಲವನ್ನು ಸಾಮಾನ್ಯ ಜನರಿಗೆ ತಲಪಿಸುವುದಾಗಿದೆ. ಹೀಗಾಗಿ ರಾಷ್ಟ್ರೀಯ ಅಭಿವೃದ್ಧಿಗೆ ನೆರವಾಗುವಂಥ ಉಪಗ್ರಹ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯ ಇಲ್ಲಿ ದೊರಕಿದೆ. ಆದರೂ ರಷ್ಯಾದೇಶ ಈ ಹಿಂದೆ ನೀಡಿದ ಆಹ್ವಾನವೊಂದನ್ನು ಭಾರತ ಮನ್ನಿಸಲಾಗಿ ಭಾರತದ ಶ್ರೀ ರಾಕೇಶ್ ಶರ್ಮಾ ೧೯೮೪ರ ಏಪ್ರಿಲ್‌ನಲ್ಲಿ ಒಂದು ವಾರದ ಕಾಲ ಅಂತರಿಕ್ಷಯಾನ ಮಾಡಿಬಂದರು.

ಈ ಹಿಂದೆ ಡಾ|| ಸಾರಾಭಾಯಿಯವರು ಕಂಡ ಕನಸನ್ನು ಸಂಪೂರ್ಣವಾಗಿ ನನಸಾಗಿ ಮಾಡುವುದು ಭಾರತದ ಅಂತರಿಕ್ಷ ಕಾರ್ಯಕ್ರಮದ ಇಂದಿನ ಪ್ರಮುಖ ಗುರಿಯಾಗಿದೆ. ಜೊತೆಗೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉಪಗ್ರಹ ಹಾಗೂ ರಾಕೆಟ್‌ಗಳ ಸೇವೆಯನ್ನು ಹೊರಜಗತ್ತಿಗೆ ಒದಗಿಸುವುದು ಇದರ ಮತ್ತೊಂದು ಗುರಿಯಾಗಿದೆ.



ಕ್ಷಾತ್ರತೆಯು ಶರೀರ ಪುಷ್ಟ-ಶಕ್ತಿಗಳಲ್ಲಿಲ್ಲ. ಮನೋನಿರ್ಧಾರ ಧೈರ್ಯಗಳಲ್ಲದೆ, ನಿರ್ಭಯವಾದ ಮನಸ್ಸಿನಲ್ಲಿದೆ. ಸಹನತೆ, ದಯೆ, ಔದಾರ್ಯ, ಪ್ರೇಮ, ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು. ಕೋಪ ಗುಂಡುಗಳ ಶಕ್ತಿ ಇಲ್ಲದಿದ್ದರೂ ಈ ಶಕ್ತಿಗಳಿಂದ ವೈರಿಗಳನ್ನು ಗೆಲ್ಲಬಹುದು.

—ಗಾಂಧೀಜಿ

ವಿಭಜನೆ

ಡಿ. ಎನ್. ಶ್ರೀನಾಥ್
ಕಸ್ತೂರ್‌ಬಾ ಬಾಲಕಿಯರ ಪ.ಪೂ. ಕಾಲೇಜು
ಪಿ. ಬಿ. ನಂ. ೧೫
ಶಿವಮೊಗ್ಗ-೫೭೭೨೦೧

ರಂಗಮ್‌ಪಲ್ಯಮ್‌ನ ಅಂಚೆ ಕಚೇರಿ ಅದರ ಆಕಾರದಂತೆಯೇ ಚಿಕ್ಕದಾಗಿತ್ತು. ಓರ್ವ ಪೋಸ್ಟ್‌ಮಾಸ್ಟರ್, ಓರ್ವ ಪೋಸ್ಟ್‌ಮೆನ್, ಒಬ್ಬ ಮುದ್ರೆ ಒತ್ತುವವ ಹಾಗೂ ಕೊನೆಯದಾಗಿ ಮತ್ತೊಬ್ಬ ಚೀಲಗಳನ್ನು ದಾರದಿಂದ ಕಟ್ಟಿಹಾಕುವವ ಇದಿಷ್ಟು ಆ ಅಂಚೆ ಕಚೇರಿಯ ಕುಟುಂಬ.

ಈಗ್ಗೆ ಎರಡು ತಿಂಗಳ ಹಿಂದೆಯಷ್ಟೆ ಕರುಮ್‌ಪ್ಪಈರಾಮನೂ ಬೇರೆಲ್ಲೋ ಹೀಗೇ ಓರ್ವ ಸಹಾಯಕನಾಗಿದ್ದು, ಒಂದೆರಡು ವರ್ಷಗಳು ಮಾತ್ರವಲ್ಲದೆ ಒಟ್ಟು ಹನ್ನೆರಡು ವರ್ಷಗಳ ಕಾಲ ಅವಿರತವಾಗಿ ಶ್ರಮವಹಿಸಿ, ಅರ್ಧ ಹೊಟ್ಟೆ ತುಂಬಿಸಿಕೊಂಡು, ಪರೀಕ್ಷೆಯಲ್ಲಿ ಕೂತು, ಉತ್ತೀರ್ಣನಾಗಿ, ನಂತರ ಉನ್ನತಿಗೇರಿ ಇಲ್ಲಿಗೆ ನೇಮಕಗೊಂಡು ಬಂದಿದ್ದ. ಈಗ ಅವನಿಗೆ ಒಳ್ಳೆಯ ಸಂಬಳ ಬರುತ್ತಿದೆ, ಯಾವ ಚಿಂತೆಯೂ ಅವನಿಗಿಲ್ಲ.

ಈಗ ಊಟ ಮಾಡುವುದೆಲ್ಲಿ ಎಂದು ಅನೇಕ ದಿನ ಅವನು ಯೋಚಿಸಿ ಕಡೆಗೆ ಅಪ್ಪೂ ನಾಯಕರನ ಊಟದ ಹೋಟೆಲ್‌ನಲ್ಲಿ ಊಟ ಮಾಡಲು ನಿರ್ಧರಿಸಿದ; ಬೇರೆ ಮಾರ್ಗವೂ ಇರಲಿಲ್ಲ.

ರಂಗಮ್‌ಪಲ್ಯಮ್‌ನ ಸರ್ಕಲ್‌ನಲ್ಲಿ ನಾಲ್ಕೈದು ಅಂಗಡಿಗಳಿದ್ದುವು. ಅಲ್ಲಿರುವ ಊಟದ ಹೋಟೆಲ್‌ಗಳಲ್ಲಿ ನಾಯಕರನ ಊಟದ ಹೋಟೆಲ್ ಮಾತ್ರ ಸಹಿಸಲು ಸಾಧ್ಯವಾದಂಥ ಹೋಟೆಲ್ ಆಗಿತ್ತು; ಅಲ್ಲಿ ಊಟಕ್ಕಾಗಿ ಪ್ರತ್ಯೇಕ ಸ್ಥಳವಿತ್ತು. ಬೇರೆ ಹೋಟೆಲ್‌ಗಳಲ್ಲಿ ಈ ಅನುಕೂಲವಿರಲಿಲ್ಲ.

ನಾಯಕರ ಸದಾ ಒಂದಲ್ಲ ಒಂದು ಪುಸ್ತಕವನ್ನು ಓದುತ್ತಿದ್ದ. ಅವನ ಖಾಯಂ ಗಿರಾಕಿಗಳು ಒಂಭತ್ತು ಜನ; ಈಗ ಕರುಮ್‌ಪ್ಪಈರಾಮನೂ ಸೇರಿಕೊಂಡು ಆ ಸಂಖ್ಯೆ ಹತ್ತಾಗಿತ್ತು.

ಅದೊಂದು ದಿನ ಕರುಮ್‌ಪ್ಪಈರಾಮನ ಬಳಿ ವಿತರಿಸಲು ಸಾಕಷ್ಟು ಅಂಚೆ ಪತ್ರಗಳಿದ್ದವು. ಕೆಲಸವನ್ನೆಲ್ಲಾ ಮುಗಿಸಿ, ದಣಿದ ಅವನು ಹಸಿವೆಯಿಂದ ಎಂದಿನಂತೆ ಊಟಕ್ಕಾಗಿ ನಾಯಕರನ ಹೋಟೆಲ್‌ಗೆ ಹೋದ. ಉಳಿದ ಗಿರಾಕಿಗಳು ಈ ಮೊದಲೇ ಬಂದಿದ್ದರು; ಅವರೆಲ್ಲಾ ಊಟ ಮಾಡುತ್ತಿದ್ದರು. ಮೊದಲನೆಯದಾಗಿ ಕರುಮ್‌ಪ್ಪಈರಾಮ ಹಳ್ಳಿಯ ಪೋಸ್ಟ್‌ಮ್ಯಾನ್ ಆಗಿದ್ದ; ಎರಡನೆಯದಾಗಿ ಅವನು ಉಳಿದೆಲ್ಲಾ ಗಿರಾಕಿಗಳಿಗಿಂತ ಅತಿ ಹೆಚ್ಚು ಹಣವನ್ನು

ಮೂಲ : ಮಾಲಿ ಅರವಹಿ ಅವರ ತಮಿಳು ಕಥೆ.

ಹೋಟೆಲ್‌ಗೆ ವ್ಯಯಿಸುತ್ತಿದ್ದ—ಹೀಗಾಗಿ ನಾಯಕರ ಅವನ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದ. ನಾಯಕರ ಅವನನ್ನು ನೋಡುತ್ತಲೇ ಅವನಿಗೆ ಎಲೆ ಹಾಕಿ, 'ಬನ್ನಿ, ಪೋಸ್ಟ್‌ಮ್ಯಾನ್ ಸಾಹೇಬ್ರೇ, ಬನ್ನಿ!' ಎಂದು ಸ್ವಾಗತಿಸುತ್ತಿದ್ದ. ಆದರೆ ಅಂದು ನಾಯಕರ ಕರುಮ್‌ಪ್ಪಈರಾಮುನನ್ನು ನೋಡಿದಾಗ್ಯೂ, ತಾನು ಅವನನ್ನು ನೋಡಲೇ ಇಲ್ಲವೆಂಬಂತೆ ನಟಿಸಿದ. ಸರಿ, ಕರುಮ್‌ಪ್ಪಈರಾಮು ಒಳಗೆ ಹೋಗಿ ಕೂತು, ಎಲೆ ಯಾಚಿಸಿದಾಗ ನಾಯಕರ, "ಸ್ವಲ್ಪ ತಾಳಿ, ಅನ್ನ ಬೇಯ್ತಿದೆ" ಎಂದ. ಕಳೆದ ಆರು ತಿಂಗಳಿನಲ್ಲಿ ಒಮ್ಮೆಯೂ ಇಂಥ ಭಾವನೆಯನ್ನು ಅವನು ತೋರಿರಲಿಲ್ಲ. 'ಇವನಿಗೇನಾಗಿದೆ! ಇಷ್ಟು ಶುಷ್ಕವಾಗಿ ವ್ಯವಹರಿಸುತ್ತಿದ್ದಾನಲ್ಲ....' ಎಂದು ಕರುಮ್‌ಪ್ಪಈರಾಮು ಕಳವಳಗೊಂಡ.

ಜನ ಊಟ ಮಾಡಿ ಹೋಟೆಲ್‌ನಿಂದ ಹೊರಟು ಹೋದರು. ಅವರೆಲ್ಲ ಹೊರಟು ಹೋದ ಮೇಲೆ ನಾಯಕರ ತನ್ನ ಮಾಣಿಗೆ ಹೇಳಿದ, "ಮಾಣಿ, ಒಂದು ಎಲೆಯನ್ನು ಪೋಸ್ಟ್‌ಮ್ಯಾನರಿಗೂ ಹಾಕು...."

ತನ್ನ ಕೊಳಕು ಅಂಗಿಯ ತೋಳಿನಿಂದ ತನ್ನ ಮೂಗನ್ನು ತುರಿಸಿಕೊಳ್ಳುತ್ತಾ ಮಾಣಿ ಎಲೆ ಹಾಕಿ, ಊಟ ಬಡಿಸಲಾರಂಭಿಸಿದ. ಕರುಮ್‌ಪ್ಪಈರಾಮುನಿಗೆ ಇದೆಲ್ಲಾ ಅಪ್ರಿಯವೆನಿಸಿತು. ಈ ಹಿಂದೆ ನಾಯಕರ ಅವನಿಗೆ ಪ್ರೀತಿಯಿಂದ ಬಡಿಸುತ್ತಾ, ಮಾತ ನಾಡಿಸುತ್ತಾ, ವಿನೋದದ ಹರಟೆಗಳನ್ನು ಹರಟುತ್ತಾ, ಸ್ನೇಹದಿಂದ ಕಾಣುತ್ತಿದ್ದ.

ಆದರೆ ಇಂದು ನಾಯಕರ ದೂರದ ಮೂಲೆಯಲ್ಲಿ ಕೂತು ಓರೆಗಣ್ಣಿನಿಂದ, ಬಡಿಸುವ ಮಾಣಿಯನ್ನು ಗಮನಿಸುತ್ತಿದ್ದ. ಎಂದಿನಂತೆ ಇಂದೂ ಅವನ ಕೈಯಲ್ಲಿ ಪುಸ್ತಕ ವೊಂದಿತ್ತು.

ಕರುಮ್‌ಪ್ಪಈರಾಮು ಚಂಚಲಗೊಂಡಿದ್ದ, ಹೇಗೋ ಊಟವನ್ನು ಮುಗಿಸಿದ; ಕಾರಣ ಅವನು ದಣಿದಿದ್ದ, ಹಸಿವೆಯೂ ಬಾಧಿಸುತ್ತಿತ್ತು. ಕಡೆಯದಾಗಿ ಕರುಮ್‌ಪ್ಪಈರಾಮು ನೀರು ಕುಡಿಯಬೇಕೆಂದಿದ್ದ, ಆಗಲೇ ನಾಯಕರ ಅವನ ಬಗಲಲ್ಲಿ ಬಂದು ನಿಂತು ಗಟ್ಟಿಯಾಗಿ ಹೇಳಿದ, "ಪೋಸ್ಟ್‌ಮ್ಯಾನ್ ಸಾಹೇಬ್ರೇ! ನೀವು ಊಟ ಮಾಡಲು ನಾಳೆಯಿಂದ ನಮ್ಮ ಹೋಟೆಲ್‌ಗೆ ಬರಬೇಕಾದ ಅಗತ್ಯವಿಲ್ಲ...."

ಕರುಮ್‌ಪ್ಪಈರಾಮು ಆಶ್ಚರ್ಯಗೊಂಡ. ತಲೆಗೆ ಉಳಿಯಿಂದ ಯಾರೋ ಹೊಡೆದಂತಾಯಿತು.

"ಯಾಕೆ ನಾಯಕರ....ಏನಾಯ್ತು?"

ನಾಯಕರ ಅದೇ ಮಾತನ್ನು ಹೇಳಿದ.

ಕರುಮ್‌ಪ್ಪಈರಾಮುನಿಗೆ ಇಷ್ಟೊಂದು ದೊಡ್ಡ ಆಘಾತವನ್ನು ಸಹಿಸಿಕೊಳ್ಳಲಾಗಲಿಲ್ಲ.

"ಯಾಕಪ್ಪಾ, ಇದ್ದಕ್ಕಿದ್ದಂತೆ ಹೀಗೇಕೆ ಮಾತಾಡ್ತಿದ್ದೀಯ? ನನ್ನಿಂದ ಏನಾದ್ರೂ ಅಪರಾಧವಾಯ್ತ? ನಾನು ನಿನಗೆ ದುಡ್ಡು ಕೊಡುವುದಿಲ್ವಾ?"

"ಹಾಗಂತ ನಾನು ಯಾವಾಗ ಹೇಳಿದೆ.... ಆದ್ರೆ ನೀವು ಇಷ್ಟು ದಿನಗಳಿಂದ ನನಗೆ ಮೋಸ ಮಾಡ್ತಿದ್ದೀರ....ನಿಮ್ಮ ವೈ ಬಣ್ಣ ನೋಡಿ ನಾನು ಏನೋ ಅಂತ ತಿಳಿದುಕೊಂಡಿದ್ದೆ, ಅದಕ್ಕೆ ಸುಮ್ಮನಿದ್ದೆ....ಇವತ್ತು ನಿಮ್ಮ ಕಚೇರಿಯ ಗುಮಾಸ್ತ ವಾಸ್ತವ ವಿಚಾರ

ವನ್ನು ಹೇಳದೇ ಇದ್ದಿದ್ರೆ ನನಗೇನು ಗೊತ್ತಾಗುತ್ತಿತ್ತು....!"

'ನಾನು ಇವನಿಗೆ ಮೋಸ ಮಾಡಿದೆನೇ?' ಎಂದು ಮನಸ್ಸಿನಲ್ಲೇ ಹೇಳಿಕೊಂಡು ಕರುಮ್‌ಪ್ಪ ಈರಾಮ ಅವಾಕ್ಕಾದ.

"ನಾಯಕರ, ಏನಾಯ್ತು ಹೇಳು. ನನಗೊಂದೂ ಅರ್ಥವಾಗುತ್ತಿಲ್ಲ. ಸ್ವಲ್ಪ ಬಿಡಿಸಿ ಹೇಳಬಾರದೇ?"

"ಈಗ ಹೇಳೋದಕ್ಕೇನಿದೆ....ನೀವು ಇದುವರೆಗೆ ನಿಮ್ಮ ಜಾತಿ-ಕುಲ ಯಾವುದು ಅಂತ ಹೇಳಲೇ ಇಲ್ಲ!"

ಈಗ ಕರುಮ್‌ಪ್ಪ ಈರಾಮ ನೆಮ್ಮದಿಯಿಂದ ಉಸಿರಾಡಿದ....ಅವನೆದೆಯ ಮೇಲೆ ಭಾರವಾಗಿ ಕೂತಿದ್ದ ದೊಡ್ಡ ಕಲ್ಲೊಂದು ತನ್ನಷ್ಟಕ್ಕೆ ತಾನೇ ಸರಿದು ಕೆಳಗೆ ಬಿದ್ದಂತಾಯಿತು.. ಓಹೋ, ಇಷ್ಟೇ ನಾ....ಕಚೇರಿಯವನು ನಾನು ದಲಿತ ವರ್ಗಕ್ಕೆ ಸೇರಿದವನಿರಬೇಕೆಂದು ಇವನಿಗೆ ಕಿವಿ ಚುಚ್ಚಿರಬಹುದು, ಅದಕ್ಕೇ ಹೀಗೆಲ್ಲಾ ಮಾಡುತ್ತಿದ್ದಾನೆ. ನಾಯಕರ....ನಾನು ಇವನಿಗೆ ನಿಜಾಂಶ ಹೇಳಿದರೆ ತಣ್ಣಗಾಗಬಹುದು....

"ಇಷ್ಟು ದಿನ ನೀನೂ ಈ ಬಗ್ಗೆ ನನ್ನ ಪ್ರಶ್ನಿಸಲಿಲ್ಲ, ಅದಕ್ಕೇ ನಾನೂ ಹೇಳಲಿಲ್ಲ.... ಈಗ ನೀನೇ ಈ ವಿಷಯ ಎತ್ತಿರುವೆ, ಹೇಳಿಬಿಡ್ತೀನಿ."

"ಬೇಡ, ಈಗ ನೀವೇನೂ ಹೇಳೋದು ಬೇಡ, ಖಂಡಿತವಾಗಿಯೂ ನೀವು ಮೇಲು ಜಾತಿಯವರು...."

"ಹಾಗಿದ್ರೆ, ಯಾಕೆ ಯೋಚ್ನೆ ಮಾಡ್ತೀಯ... ನಾಳೆಯಿಂದ ಊಟಕ್ಕೆ ಬರಬೇಡಿ ಅಂತ ಯಾಕೆ ಹೇಳ್ತಿದ್ದೀಯಾ?"

"ಯಾಕೆಂದ್ರೆ ನೀವು ಮೇಲು ಜಾತಿಯವರು!"

"ಇದರಿಂದೇನಾಯ್ತು, ನಾಯಕರ.... ನನಗೆ ಸ್ಪಷ್ಟವಾಗಿ ಹೇಳಬಾರದೆ?" ಕರುಮ್‌ಪ್ಪ ಈರಾಮನ ಧ್ವನಿಯಲ್ಲಿ ಆಕ್ರೋಶವಿತ್ತು. ಆದರೆ ನಾಯಕರ ಆ ಬಗ್ಗೆ ಗಮನ ಕೊಡದೆ ಶಾಂತಚಿತ್ತದಿಂದ ಹೇಳಿದ, "ನನ್ನ ಹೋಟೆಲ್‌ನಲ್ಲಿ ಹರಿಜನರಿಗೆ ಮಾತ್ರ ಊಟ ಹಾಕಲಾಗುವುದು. ಇಲ್ಲಿ ಬರುವವರೆಲ್ಲರೂ ಹರಿಜನರೇ, ಯಾಕೆಂದ್ರೆ ಅವರು ಈ ಹಳ್ಳಿಯಲ್ಲಿ ಇನ್ಯಾವ ಹೋಟೆಲ್‌ಗೂ ಹೋಗಲಾರರು. ಅವರ ಕಷ್ಟ ನೋಡಿ ನಾನಿಲ್ಲಿ ಅವರಿಗಾಗಿಯೇ ಈ ಹೋಟೆಲ್ ತೆರೆದೆ. ಹೀಗಾಗಿ ನನ್ನ ಈ ಹೋಟೆಲ್‌ನಲ್ಲಿ ಅನ್ಯಜಾತಿಯವರಿಗೆ ಪ್ರವೇಶವಿಲ್ಲ, ಅವರು ಯಾರೇ ಆಗಿರಲಿ....ಇದು ನನ್ನಿಷ್ಟ, ತಿಳೀತಾ! ನೀವು ನಾಳೆಯಿಂದ ಬೇರೆ ಹೋಟೆಲ್ ಹುಡುಕಿಕೊಳ್ಳಿ."

ಕರುಮ್‌ಪ್ಪ ಈರಾಮನಿಗೆ ಗರ ಬಡಿದಂತಾಯಿತು. ಏನು ಹೇಳುವುದು, ಏನು ಬಿಡುವುದು....ಅಪ್ಪೂ ನಾಯಕರ ಮತ್ತೆ ತನ್ನ ಪುಸ್ತಕ ಹಿಡಿದು ಓದುವುದರಲ್ಲಿ ಮಗ್ನನಾದ....

ವಾಸ್ತವವಾಗಿ ಕಾಗೆ ಎತ್ತಿನ ಕಷ್ಟವನ್ನೆಂದೂ ಅರ್ಥಮಾಡಿಕೊಳ್ಳಲಾರದು. ಆದರೆ ಅದರ ಕುತ್ತಿಗೆಗೇ ಗಾಯವಾಗಿ, ಇನ್ನೊಂದು ಪಕ್ಷಿ ತನ್ನ ಕೊಕ್ಕಿನಿಂದ ಅದರ ಗಾಯವನ್ನು ಕುಟುಕಿದಾಗಲೇ....!

ಜಾಣ ರೋಗಾಣುಗಳು–೨

ಕಜ್ಜಿ ಅಥವಾ ಹುರುಕು

ಡಾ|| ಸ. ಜ. ನಾಗಲೋಟಿಮಠ
೨೫, ಶಾಂತಾ, ಬಸವ ಕಾಲನಿ
ಬೆಳಗಾವಿ–೧೦

ಕಜ್ಜಿ ಒಂದು ಸಾಮಾನ್ಯ ತೊಂದರೆ. ಉತ್ತರ ಕರ್ನಾಟಕದಲ್ಲಿ ಕಜ್ಜಿಯನ್ನು ಹುರುಕು ಎಂದು ಕರೆಯುತ್ತಾರೆ. ಕಜ್ಜಿಯ ಕಾರಣವೆಂದರೆ ಒಂದು ಜಾತಿಯ ಉಣ್ಣೆ. ಈ ಉಣ್ಣೆ ಮಾನವನ ದೇಹದಲ್ಲಿ ಸೇರಿಕೊಂಡರೆ ಕಜ್ಜಿಯ ತೊಂದರೆ ಪ್ರಾರಂಭವಾದಂತೆ. ಈ ತೊಂದರೆಯ ವಿಶಿಷ್ಟ ಲಕ್ಷಣಗಳೆಂದರೆ ಮೈಯಲ್ಲಿ ಕಾಣುವ ಅಸಹನೀಯವಾದ ತುರಿಕೆ. ಎರಡನೆಯದಾಗಿ ತ್ವಚೆಯಲ್ಲಿ ತೋರುವ ಸಾದಾ ಬೊಕ್ಕೆ ಹಾಗೂ ನೀರು ಬೊಕ್ಕೆಗಳು. ಕಜ್ಜಿಯು ಸಾಮಾನ್ಯವಾಗಿ ಕೈ-ಬೆರಳುಗಳ ಸಂದುಗಳನ್ನು ಹಾಗೂ ಮುಂಗೈಯನ್ನು ಜಾಸ್ತಿ ಹಿಡಿಯುವುದು. ಈ ಉಣ್ಣೆ ವಾಸಿಸುವ ಸ್ಥಳವೆಂದರೆ ತ್ವಚೆಯಲ್ಲಿಯ ಹೊರ ಪದರುಗಳು. ಕಜ್ಜಿಯ ತುರಿಕೆ ರಾತ್ರಿ ವಿಪರೀತ. ಕಜ್ಜಿ ಆದವರ ಕೈಗಳನ್ನು ಪರೀಕ್ಷಿಸಿದರೆ ಕೈಗಳ ತ್ವಚೆ ಬಿರುಸಾದದ್ದು ಹಾಗೂ ದಪ್ಪವಾದದ್ದು ಕಂಡು ಬರುತ್ತದೆ. ಈ ಸಂಗತಿಗಳೆಲ್ಲ ಕೇವಲ ಆಕಸ್ಮಿಕವೋ ಅಥವಾ ಉಣ್ಣೆಯು ಯೋಜಿಸಿದ, ಬುದ್ಧಿಮತ್ತೆಯಿಂದ ಸಾಧಿಸಿದ ಯೋಜನೆಗಳೋ? ಇದನ್ನು ತಿಳಿಯುವುದು ಒಂದು ಸ್ವಾರಸ್ಯಕರವಾದ ಸಂಗತಿ. ಕಣ್ಣು, ಕಿವಿ, ಮೂಗುಗಳಿಲ್ಲದ ಈ ಉಣ್ಣೆಯ ಜಾಣತನ ಹಾಗೂ ಬುದ್ಧಿಮತ್ತೆಯನ್ನು ಪ್ರಶಂಸಿಸಲೇಬೇಕು.

ಪ್ರಾರಂಭದಲ್ಲಿ ಕಜ್ಜಿಯ ಸಾಮಾನ್ಯ ಪರಿಚಯವನ್ನು ಮಾಡಿಕೊಂಡು ನಂತರ ಅದರ ಬುದ್ಧಿಮತ್ತೆಯ ಬಗ್ಗೆ ವಿಚಾರಿಸೋಣ.

ಸಾಮಾನ್ಯವಾಗಿ ಕಜ್ಜಿ ಶುಚಿಯಿಲ್ಲದ ಜನರಲ್ಲಿ ತಲೆ ಎತ್ತುತ್ತದೆ. ಮಕ್ಕಳ ಮೇಲೆ ಅದರ ಒಲುಮೆ ಜಾಸ್ತಿ; ಹಳ್ಳಿಗಳಲ್ಲಿ ಇದರ ಮುಖ್ಯ ವಾಸ. ಹಾಗೆಂದು ಅದು ಶುಚಿಯಾಗಿದ್ದವರ, ಶಹರಿನಲ್ಲಿ ವಾಸಿಸುವವರ, ಮುಂದುವರೆದ ದೇಶಗಳ ಜನರನ್ನು ಸಂಪರ್ಕಿಸದೇ ಬಿಟ್ಟಿಲ್ಲ. ಹಲವಾರು ಸಲ ಅದು ಯುದ್ಧ ರಂಗಕ್ಕೂ ಕಾಲಿಟ್ಟು ಸೈನಿಕರನ್ನು ರಾತ್ರಿ ಹೊತ್ತಿನಲ್ಲಿ ಕಂಗೆಡಿಸಿತ್ತು. ದೇಹದ ನಿರೋಧಕ ಶಕ್ತಿ ಕುಂದಿದವರ ಮೇಲೆ ಕಜ್ಜಿಯ ಪ್ರೇಮ ಅಪಾರ.

ಕಜ್ಜಿಗೆ ಕಾರಣವೆಂದರೆ ಒಂದು ಜಾತಿಯ ಉಣ್ಣೆ. ನೋಡಲು ಈ ಉಣ್ಣೆ ಬಹಳ ಚಿಕ್ಕದು. ಕಣ್ಣಿಗೆ ಬೀಳದಷ್ಟು ಸೂಕ್ಷ್ಮ. ಇದನ್ನು ಸರಿಯಾಗಿ ನೋಡಬೇಕಾದರೆ ಸೂಕ್ಷ್ಮದರ್ಶಕದ ಅವಶ್ಯಕತೆ ಇದೆ. ಗಂಡು ಉಣ್ಣೆ ಆಕಾರದಲ್ಲಿ ಹೆಣ್ಣಿನ ಅರ್ಧವೆಂದರೂ ನಡೆದೀತು. ಹೆಣ್ಣಿನ ಗಾತ್ರ ಸುಮಾರು

೦.೪×೦.೩ ಮಿ. ಮಿ.ನಷ್ಟು ಆಗಬಹುದು ಉಣ್ಣಿಯ ಬೆನ್ನು ಡುಬರಿಯಂತೆ ಉಬ್ಬಿದ್ದು ಹೊಟ್ಟೆಯು ಬದಿಯು ಚಪ್ಪಟೆಯಾಗಿರುತ್ತದೆ. ಉಣ್ಣಿಯ ದೇಹದ ಮೇಲೆ ಬಿರುಸಾದ ಕೂದಲು ಹಾಗೂ ಮೊನಚಾದ ಮುಳ್ಳುಗಳೂ ಇರುತ್ತವೆ. ಕಾಲುಗಳಲ್ಲಿ ತ್ವಚೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಹೀರಕ ಬಟ್ಟಲುಗಳಿರುತ್ತವೆ. ತತ್ತಿಗಳಲ್ಲಿ ಬೆಳೆಯುತ್ತಿರುವ ಮರಿಗಳು ಬೆಳೆದ ಮೇಲೆ ತತ್ತಿಯ ಕವಚ ಒಡೆದು ಹೊರ ಬರುತ್ತದೆ. ಹೊರ ಬಂದು ಬೆಳೆಯುತ್ತ ಪ್ರಾಯಕ್ಕೆ ತಲುಪುತ್ತವೆ. ಹೆಣ್ಣು - ಗಂಡುಗಳ ಮಿಲನವಾಗುತ್ತದೆ. ಹೆಣ್ಣು ಗರ್ಭ ಧರಿಸುವುದು. ಗಂಡು ಮಿಲನದ ನಂತರ ಮರಣ ಹೊಂದುವುದು. ಹೆಣ್ಣು ಗರ್ಭ ತುಂಬಿದ ಮೇಲೆ ತತ್ತಿಗಳನ್ನು ಇಡಲು ಪ್ರಾರಂಭಿಸುವದು. ಸುಮಾರು ಒಂದು ತಿಂಗಳ ಕಾಲ ತತ್ತಿಗಳನ್ನು ಇಟ್ಟು ತಾನಿದ್ದ ಸ್ಥಳದಲ್ಲಿಯೇ ಜೀವಂತ ಸಮಾಧಿ ಹೊಂದುವದು. ಹೀಗೆ ಉಣ್ಣಿಯ ಜೀವನ ಚಕ್ರ ತಿರುಗುವದು.

ಮಾನವರಲ್ಲಿ ಕಜ್ಜಿಯು ಒಲವಿನಿಂದ ವಾಸಿಸುವ ಸ್ಥಳಗಳೆಂದರೆ ಬೆರಳುಗಳ ಸಂದುಗಳಲ್ಲಿ, ಮುಂಗೈ ಮೇಲೆ. ಕಡಿಮೆ ಪ್ರಮಾಣದಲ್ಲಿ ಕಜ್ಜಿಯು ಬಗಲು, ಮೊಲೆ ತೊಟ್ಟುಗಳ ಸುತ್ತ ಜನನಾಂಗಗಳ ಸುತ್ತ ಇರುವುದು. ವಯಸ್ಕರಲ್ಲಿ ಕಜ್ಜಿಯು ಬೆನ್ನು ಹಾಗೂ ಹೊಟ್ಟೆಗಳನ್ನು ಹಿಡಿಯುವದು ಕಡಿಮೆ. ಕಾಲುಗಳ ಮೇಲೆಯೂ ಅದಕ್ಕೆ ಆಸಕ್ತಿ ಇಲ್ಲ ಯಾವಾಗಲಾದರೊಮ್ಮೆ ಕಜ್ಜಿಯು ನಿತಂಬಗಳ ಮೇಲೆ ಹಾಗೂ ಹೊಕ್ಕಳಲ್ಲಿ ಕುಳಿತಿರಬಹುದು.

ಕಜ್ಜಿಯ ಪ್ರಮುಖ ಲಕ್ಷಣವೆಂದರೆ ತುರಿಕೆ. ಮೈಯೆಲ್ಲ ತುರಿಕೆ. ಯಾವ ಕಾರಣಕ್ಕೋ ಏನೋ ಮುಖ ಹಾಗೂ ತಲೆಯನ್ನು ಅಷ್ಟೊಂದು ಹಿಡಿಯುವುದಿಲ್ಲ. ಕಜ್ಜಿಯ ತುರಿಕೆ ಹಗಲಿಗಿಂತ ರಾತ್ರಿ ವಿಪರೀತ. ತುರಿಸಿಕೊಳ್ಳುತ್ತಿರುವವರನ್ನು ನೋಡಿದರೆ ಅವರಿಗೆ ಹುಚ್ಚು ಎನಿಸುವಷ್ಟರ ಮಟ್ಟಿಗೆ ತುರಿಸುತ್ತಾರೆ. ತುರಿಸುವದು ನೋವಿನ ಸಂಗತಿ ಅಲ್ಲ. ತುರಿಸುವ ವ್ಯಕ್ತಿಗೆ ಯಾವುದೋ ಅವ್ಯಕ್ತ ಸುಖ ಇರುವಂತೆ ಕಂಡು ಬರುತ್ತದೆ. ತುರಿಸುವಾಗ ತುರಿಸಿಕೊಳ್ಳುವ ವ್ಯಕ್ತಿ ಸುಖದಿಂದ ಹಾಯ್‌ಗುಡುತ್ತಿರುತ್ತಾನೆ. ಯಾರನ್ನೂ ಗಣಿಸದೇ, ಎಲ್ಲೋ ಅನಂತದಲ್ಲಿ ದೃಷ್ಟಿ ಇಟ್ಟು ತುರಿಸುತ್ತಲೇ ಹೋಗುತ್ತಾನೆ. ತುರಿಕೆ ಉಗ್ರತೆಯನ್ನು ಮುಟ್ಟಿದಾಗ ತ್ವಚೆಯಲ್ಲಿ ಗಾಯವಾಗಲೂ ಬಹುದು. ರಕ್ತ ಒಸರಲೂ ಸಾಧ್ಯ. ಈ ಸುಖವನ್ನು ವ್ಯಕ್ತಿಗಳು ತಮ್ಮ ಹಾಸಿಗೆಯಲ್ಲಿ ಕುಳಿತುಕೊಂಡೇ ರಾತ್ರಿಯೆಲ್ಲ ಭೋಗಿಸುತ್ತಾರೆ. ಹಗಲಾದಾಗ ತುರಿಕೆ ಶಮನಗೊಳ್ಳುತ್ತದೆ. ವ್ಯಕ್ತಿ ತನ್ನ ದುಡಿಮೆಯನ್ನು ಮಾಡಲು ಬಿಡುತ್ತದೆ. ಮತ್ತೇ ರಾತ್ರಿಯ ವೇಳೆಯಲ್ಲಿ ಸರಸ ಸಲ್ಲಾಪ ಎಂದಿನಂತೆ ಪ್ರಾರಂಭವಾಗುತ್ತದೆ. ಬರಬರುತ್ತ ಉಣ್ಣೆಯು ವಾಸಿಸುತ್ತಿರುವ ಭಾಗಗಳ ತ್ವಚೆಯು ಬಿರುಸಾಗುತ್ತದೆ. ಅದರ ಹೊರ ಪದರು ದಪ್ಪವಾಗುತ್ತದೆ. ಇನ್ನೂ ಮುಂದೆ ಹೋದರೆ ಹೊರ ಪದರಿನ ಹಕ್ಕಳೆಗಳೇ ತಯಾರಾಗುತ್ತವೆ. ಸ್ತ್ರೀ ಪುರುಷರಲ್ಲಿ ಇಂಥ ಬದಲಾವಣೆಗಳು ಕಾಣುವುದು ಕೈ-ಬೆರಳು, ಅಂಗೈ, ಮುಂಗೈಗಳಲ್ಲಿ.

ಒಂದು ವೇಳೆ ಕಜ್ಜಿಯು ಶಿಶುಗಳನ್ನು ಹಿಡಿದರೆ ಕೀರಿತು. ಶಿಶುಗಳ ಅಂಗೈ, ಕೈಕಾಲು ಹಾಗೂ ಅಂಗಾಲುಗಳೂ ಸಹ ಈ ಬದಲಾವಣೆಯನ್ನು ತೋರಿಸುತ್ತವೆ.

ಎರಡನೇಯ ಲಕ್ಷಣವೆಂದರೆ ತ್ವಚೆಯಲ್ಲಿಯ ಬೊಕ್ಕೆಗಳು. ಸುಮಾರಾಗಿ ಇವು ಸಾದಾ ಗಟ್ಟಿಯಾದ ಬೊಕ್ಕೆಯಾಗಿರುತ್ತವೆ. ಹಲವಾರು ಸಲ ಇವುಗಳಲ್ಲಿ ನೀರು ತುಂಬಿ ಅವು ನೀರು ಬೊಕ್ಕೆಗಳಾಗುತ್ತವೆ. ಇದನ್ನು ತುರಿಕೆ ಹೆಚ್ಚಾಗಿದ್ದ ಸ್ಥಳದಲ್ಲಿ ಸುಲಭವಾಗಿ ನೋಡಬಹುದು. ನೀರು ಬೊಕ್ಕೆಗಳು ಅನೇಕ ಸಲ ಉಣ್ಣೆಯ ವಾಸಸ್ಥಾನವನ್ನು ಸೂಚಿಸುವ ಕುರುಹುಗಳಾಗಿರಲೂ ಸಾಕು.

ಮೂರನೇಯ ಲಕ್ಷಣ ಅಷ್ಟು ಸುಲಭವಾಗಿ ಗೋಚರಿಸುವುದಿಲ್ಲ. ಅದನ್ನು ನಾವು ಬಿಲ ಎಂದಾಗಲೀ, ಸುರಂಗ ಮಾರ್ಗವೆಂದಾಗಲೀ ಅಥವಾ ಕೊಳವೆ ದಾರಿ ಎಂದಾಗಲೀ ಕರೆಯಬಹುದು. ಇದರ ಬಾಗಿಲು ತೆರೆದೇ ಇರುತ್ತದೆ. ಇದನ್ನೆಲ್ಲ ಕಾಣಬೇಕಾದರೆ ಮಸೂರಗಳ ಅವಶ್ಯಕತೆ ಇದೆ. ಇಷ್ಟೆಲ್ಲ ಕೊಂದರೆ ಇದ್ದರೂ ಈ ಲಕ್ಷಣವು ಮಾತ್ರ ಕಜ್ಜಿಯನ್ನು ಖಚಿತವಾಗಿ ನಿದಾನಿಸುವುದು. ಈ ಸುರಂಗವನ್ನು ತೆರೆಯುತ್ತ ಹೋದರೆ ಸುರಂಗದ ಕುತ್ತತುದಿಯಲ್ಲಿ ತತ್ತಿಗಳು, ತತ್ತಿಗಳನ್ನು ಇಡುವ ಗರ್ಭವತಿ ತಾಯಿ ಉಣ್ಣೆ ಸಿಗುತ್ತದೆ. ಸುರಂಗದ ಮಾರ್ಗದಲ್ಲಿ ಮುರಿದು ಬಿದ್ದ ತತ್ತಿಯ ಕವಚಗಳು, ಉಣ್ಣೆಯು ವಿಸರ್ಜಿಸಿದ ಮಲ ಹಾಗೂ ಇತರ ವಿಸರ್ಜಕ ವಸ್ತುಗಳೂ ದೊರೆಯುತ್ತವೆ.

ಒಬ್ಬ ವ್ಯಕ್ತಿಯಲ್ಲಿ ಕಜ್ಜಿಯು ಕೊಂದರೆ ಕಾಣಬೇಕಾದರೆ ಆ ವ್ಯಕ್ತಿ ಕಜ್ಜಿಯಿಂದ ಬಳಲುತ್ತಿದ್ದ ರೋಗಿಯ ನಿಕಟ ಸಂಪರ್ಕದಲ್ಲಿ ಬರಬೇಕು. ನಿಕಟತೆಯು ಕ್ಷಣಿಕವಾಗಿರದೆ ಸುದೀರ್ಘವಾಗಿರಬೇಕು. ನೇರವಾಗಿ ತ್ವಚೆಯಿಂದ ತ್ವಚೆಯ ಸಂಪರ್ಕ ಬರದೇ ಹೋದರೂ ರೋಗಿಯ ಬಳಸುತ್ತಿದ್ದ ಹಾಸಿಗೆ, ಹೊಚ್ಚುಗೆ, ವಸ್ತ್ರ, ಅಂಗಿ, ಬನಿಯನ್ನು, ಸೀರೆ, ಲುಂಗಿ ಮುಂತಾದ ವಸ್ತುಗಳನ್ನಾದರೂ ಬಳಸಬೇಕು. ರೋಗಿಯೊಡನೆ ಪ್ರೇಮದಿಂದ ಕೈಯಲ್ಲಿ ಕೈಯಿಟ್ಟು ಆಡಬೇಕು. ರೋಗಿಯು ತನ್ನ ಕೈಯಿಂದ, ಬೆರಳುಗಳಿಂದ ಬಂದ ವ್ಯಕ್ತಿಯನ್ನು ಉಪಚರಿಸಬೇಕು. ತಿದ್ದಿ ತೀಡಬೇಕು. ಹೀಗೆ ಮಾಡುವುದರಿಂದ ರೋಗಿಯ ದೇಹದ ಮೇಲಿರುವ ಕಜ್ಜಿಯ ಉಣ್ಣೆಗಳು ಬಳುವಳಿಯ ರೂಪದಲ್ಲಿ ಸ್ಥಳಾಂತರಗೊಳ್ಳುತ್ತವೆ. ಹೊಸ ವ್ಯಕ್ತಿಯನ್ನು ಅಪ್ಪಿಕೊಳ್ಳುತ್ತವೆ. ಸ್ಥಳಾಂತರವು ದೇಹದ ಯಾವುದೇ ಭಾಗದಲ್ಲಿ ನಡೆಯಬಹುದು. ರೋಗ ಬರಬೇಕಾದರೆ ಹೆಣ್ಣು ಹಾಗೂ ಗಂಡು ಉಣ್ಣೆಗಳೆರಡೂ ಸ್ಥಳಾಂತರವಾಗಬೇಕು. ಇಲ್ಲವೇ ಗರ್ಭಿಣಿಯಾದ ಹೆಣ್ಣು ಸ್ಥಳಾಂತರವಾಗಬೇಕು. ಪ್ರಾಯದ ಗಂಡು ಹೆಣ್ಣುಗಳು ಸ್ಥಳಾಂತರಗೊಂಡರೆ ಅವು ಜೊತೆ ಜೊತೆಯಾಗಿ ಸಾಗುವವು. ಸಮೀಪದ ರೋಮದ ಬುಡದಲ್ಲಿ ಸೇರುವವು. ಇಲ್ಲವೆ ತ್ವಚೆಯ ಹೊರ ಪದರಿನಲ್ಲಿ ಸಣ್ಣ ಸಣ್ಣ ಬಿಲಗಳನ್ನು ಮಾಡುವವು. ಈ ಬಿಲಗಳು ಚಿಕ್ಕ ಪುಟ್ಟ ಗವಿಗಳಂತೆ ಇರುತ್ತವೆ. ಈ ಗವಿಗಳಲ್ಲಿ ಗಂಡು ಹೆಣ್ಣುಗಳು ಸೇರಿ ತಮ್ಮ ಸರಸ

ಸಲ್ಲಾಪದಲ್ಲಿ ಮುಳುಗಿ ಮಿಲನವಾಗುವವು. ಈಗ ಗಂಡಿನ ಕಾರ್ಯ ಮುಗಿದಂತೆಯೇ. ಅದು ಅಲ್ಲಿಯೇ ಮರಣ ಹೊಂದುತ್ತದೆ. ಗರ್ಭಧರಿಸಿದ ಹೆಣ್ಣು ತನ್ನ ಮೈ ಪೊರೆಯನ್ನು ಅಲ್ಲಿಯೇ ಕಳಚಿ ಆ ಗವಿಗಳಿಂದ ಹೊರ ಬರುವದು. ಈ ಗರ್ಭವತಿಯು ತನ್ನ ಯುಕ್ತಿ ಹಾಗೂ ಬುದ್ಧಿಯಿಂದ ಬೆರಳು ಹಾಗೂ ಮುಂಗೈಗಳ ಕಡೆಗೆ ಚಲಿಸುವದು. ಅಲ್ಲಿಗೆ ತಲುಪಿ ಸರಿಯಾದ ಸ್ಥಳವನ್ನು ಆರಿಸಿ ತ್ವಚೆಯ ಮೇಲ್ಪದರಿನಲ್ಲಿ ಕೊಳವೆ ಮಾರ್ಗವನ್ನು ಕೊರೆಯತೊಡಗುವದು. ಈ ಕೊಳವೆ ಮಾರ್ಗದಲ್ಲಿ ತನ್ನ ದೇಹವನ್ನು ಸೇರಿಸಿಕೊಂಡು ಮುಂದುವರಿಯುವದು. ಉಣ್ಣೆಯು ತನ್ನ ಮುಂಭಾಗದಿಂದ ಕೊಳವೆ ಮಾರ್ಗ ಕೊರೆಯುವದು. ಹಿಂದಿನಿಂದ ತತ್ತಿಗಳನ್ನು ಇಡುತ್ತ ಹೋಗುವುದು. ಕೊಳವೆ ಮಾರ್ಗ ಎಷ್ಟು ಕಿರಿದಾಗಿ ಇರುತ್ತದೆ ಎಂದರೆ ಉಣ್ಣೆಗೆ ತನ್ನ ದಿಕ್ಕನ್ನು ಬದಲಿಸಲು ಸಾಧ್ಯವೇ ಇರದು. ಅದಕ್ಕೆ ಮಗ್ಗುಲಿಗೆ ಹೊರಳಿ ಕೊಳವೆ ಮಾರ್ಗದಿಂದ ಹೊರಗೆ ಹೋಗಲೂ ಬರದು. ತತ್ತಿ ಇಡುತ್ತ ಮುಂದುವರೆಯಲೇಬೇಕು. ಸುಮಾರು ೧೨ ರಿಂದ ೨೫ ತತ್ತಿಗಳನ್ನು ಇಟ್ಟು ಸುರಂಗ ದಾರಿಯ ತುದಿಯಲ್ಲಿ ಉಣ್ಣೆಯು ಮರಣ ಹೊಂದುವದು. ಇದು ಒಂದು ರೀತಿಯಿಂದ ಮಾನವ ದೇಹದಲ್ಲಿ ನಡೆಯುವ ಸಜೀವ ಸಮಾಧಿ ಕ್ರಿಯೆ.

ಇನ್ನು ತತ್ತಿಗಳ ಪಾಡು ಏನು? ಅವುಗಳು ೩-೪ ದಿನಗಳಲ್ಲಿ ಒಡೆಯುತ್ತವೆ. ಅವುಗಳಿಂದ ಮರಿಗಳು ಹೊರ ಬರುತ್ತವೆ. ಅಲ್ಲಿರುವದು ಒಂದೇ ದಾರಿ. ಕಾರಣ ಅವು ಚಲಿಸುತ್ತ ಚಲಿಸುತ್ತ ಸುರಂಗ ದಾರಿಯಲ್ಲಿ ನಡೆದು ಸುರಂಗ ದಾರಿಯ ದ್ವಾರದ ಮೂಲಕ ಹೊರಗೆ ಬರುವವು. ಸಾಧ್ಯವಾದರೆ ಇವು ಬೇರೆ ವ್ಯಕ್ತಿಯನ್ನು ಅರಸುತ್ತ ಹೋಗಬಹುದು. ಇಲ್ಲದೇ ಹೋದರೆ ಅದೇ ವ್ಯಕ್ತಿಯ ದೇಹದ ಮೇಲೆ ಅಡ್ಡಾಡಿ ತಮಗೆ ಸರಿ ಅನಿಸುವಲ್ಲಿ ಬಿಲಗಳನ್ನು ತೆಗೆದು ಅಲ್ಲಿ ಸೇರುವವು. ಈ ಬಿಲಗಳಲ್ಲಿ ವಾಸಿಸುತ್ತ ತಮ್ಮ ದೇಹದ ಪೊರೆಯನ್ನು ಒಂದೆರಡು ಸಲ ಕಳಚಿ ರೂಪಾಂತರ ಹೊಂದುತ್ತ ಪ್ರಾಯವನ್ನು ತಲುಪುವವು. ಒಂದೇ ಬಿಲದಲ್ಲಿ ಗಂಡು-ಹೆಣ್ಣು ಉಣ್ಣೆಗಳು ಇರುವದರಿಂದ ಆಕರ್ಷಿಸಲ್ಪಟ್ಟು ಮಿಲನ ಹೊಂದುವವು. ಇಲ್ಲದೇ ಹೋದರೆ ಬೇರೆ ವ್ಯಕ್ತಿಯನ್ನು ಹುಡುಕುತ್ತ ಮೊದಲಿನ ರೋಗಿಯನ್ನು ಬಿಟ್ಟು ಹೊರಗೆ ಹೋಗಬಹುದು. ಮಿಲನದಿಂದ ಗರ್ಭಿಣಿಯಾದ ಹೆಣ್ಣು ಮೊದಲಿನ ಬಿಲದಿಂದ ಹೊರ ಬಂದು ತನ್ನ ತತ್ತಿಗಳನ್ನು ಇಡಲು ಹೊಸ ಸುರಂಗ ಮಾರ್ಗವನ್ನು ಕೊರೆಯಲು ಪ್ರಾರಂಭಿಸುವದು. ಮತ್ತೆ ತನ್ನ ತಾಯಿ ಮಾಡಿದಂತೆ ಹಿಂದೆ ತತ್ತಿಗಳನ್ನು ಇಡುತ್ತ ಮುಂದೆ ದಾರಿ ಕೊರೆಯುತ್ತ ನಡೆಯುವದು. ಹೀಗೆ ಉಣ್ಣೆಯ ಜೀವನ ಚಕ್ರ ಸಾಗುವದು. ಕಜ್ಜಿಯಿಂದ ಬಳಲುತ್ತಿರುವ ವ್ಯಕ್ತಿಯ ತ್ವಚೆಯು ನಾವು ತಿಳಿದಂತೆ, ಆಶಿಸಿದಂತೆ ಶುಚಿಯಾಗಿರುವುದಿಲ್ಲ. ತ್ವಚೆಯ ಮೇಲ್ಪದರುಗಳಲ್ಲಿ ಉಣ್ಣೆಯು ಬಿಲ ಹಾಗೂ ಸುರಂಗಗಳನ್ನು ತೋಡಿರುತ್ತದೆ. ತ್ವಚೆಯ ಮೇಲೆ ಹಲವಾರು ಉಣ್ಣೆಯ ಮರಿಗಳು, ಕೆಲವು ಗರ್ಭಿಣಿ ಉಣ್ಣೆಗಳು ಹಾಗೂ ಪ್ರಾಯದಲ್ಲಿ ಕಾಲಿಡುತ್ತಲಿರುವ ಯುವಕ-ಯುವತಿ

ಉಣ್ಣೆಗಳು ವಿಹಾರ ಮಾಡುತ್ತಿರುತ್ತವೆ. ಇವೆಲ್ಲವುಗಳು ಪರದೇಶಕ್ಕೆ ಹೋಗಲು 'ವಿಸಾ' ಪಡೆಯಲು ಚಡಪಡಿಸಿದವರಂತೆ ಚಡಪಡಿಸುತ್ತಿರುತ್ತವೆ. ಅವುಗಳ ಆಶೆ ಬೇರೆ ವ್ಯಕ್ತಿಯ ದೇಹ ತಲುಪುವದು. ಆದರೆ ಚಡಪಡಿಸುತ್ತಿರುವ ಈ ಉಣ್ಣೆಗಳಿಗೆ ಹಾರಲು ಬರುವುದಿಲ್ಲ ನೆಗೆಯಲು ಸಾಧ್ಯವಿಲ್ಲ. ನೋಡಲು ಕಣ್ಣುಗಳಿಲ್ಲ. ಅವುಗಳಿಗೆ ಒಂದು ಅನುಕೂಲ ಇರುವುದು. ಅದೆಂದರೆ ಮಾನವ ದೇಹದ ವಾಸನೆಯಿಂದ ಅವು ವ್ಯಕ್ತಿಗಳನ್ನು ಗುರುತಿಸುತ್ತವೆ. ಅವುಗಳಿಗೆ ಈಗ ಬೇರೆ ವ್ಯಕ್ತಿಯ ದೇಹ ತಲುಪಬೇಕು. ತಮ್ಮಲ್ಲಿಯ ಒಂದು ತಂತ್ರವನ್ನು ಬಳಸುತ್ತವೆ. ಆ ತಂತ್ರವೆಂದರೆ ತಾವಿದ್ದ ಸ್ಥಳದಲ್ಲಿ ತುರಿಕೆಯನ್ನು ಹುಟ್ಟಿಸುವದು. ಅವುಗಳ ಚಲನವಲನದಿಂದ ಹಾಗೂ ಅವುಗಳು ಹುಟ್ಟಿಸುವ ಅಲರ್ಜಿಯಿಂದ ಚರ್ಮದಲ್ಲಿ ತುರಿಕೆ ಕಾಣುವುದು. ಆಗ ವ್ಯಕ್ತಿಯು ತನ್ನ ಕೈ ಬೆರಳು ಹಾಗೂ ಉಗುರುಗಳಿಂದ ಆ ಭಾಗವನ್ನು ತುರಿಸತೊಡಗುತ್ತಾನೆ. ಅವನು ತುರಿಸಿದಂತೆ ಉಣ್ಣೆಗಳು ತುರಿಕೆಯನ್ನು ಹೆಚ್ಚಿಸುತ್ತವೆ. ವ್ಯಕ್ತಿ ಇನ್ನೂ ಜೋರಾಗಿ ತುರಿಸುತ್ತಾನೆ. ಆ ಕ್ರಿಯೆ ಮುನ್ನಡೆಯುತ್ತದೆ. ತುರಿಸಿಕೊಳ್ಳುತ್ತಿರುವ ವ್ಯಕ್ತಿಗೆ ತುರಿಸುವ ಅಮಲು ಬಂದಂತಾಗುವುದು. ತುರಿಸುತ್ತಲೇ ಹೋಗುವದು. ವ್ಯಕ್ತಿ ತುರಿಸುವ ಅಮಲಿನಲ್ಲಿ ಇದ್ದಾಗ ಉಣ್ಣೆಯ ಗುಂಪು ವ್ಯಕ್ತಿಯ ಬೆರಳುಗಳ ಕಡೆಗೆ ಧಾವಿಸುತ್ತದೆ. ಮರಿಗಳು, ಪ್ರಾಯಕ್ಕೆ ಬಂದ ಉಣ್ಣೆಗಳು, ಗರ್ಭಿಣಿಯಾದ ಹೆಣ್ಣುಗಳು ತ್ವರಿತವಾಗಿ ಬೆರಳುಗಳನ್ನು ಹಿಡಿಯುತ್ತವೆ. ಉಗುರಿನ ಕಣ್ಣುಗಳನ್ನು ಸೇರುತ್ತವೆ. ಅಷ್ಟಾಗುವಷ್ಟರಲ್ಲಿ ಉಣ್ಣೆಗಳು ತುರಿಕೆಯನ್ನು ಸ್ವಲ್ಪ ಕಡಿಮೆಗೊಳಿಸುತ್ತವೆ. ಯಾಕೆಂದರೆ ಅವು ತಾವು ಸಾಧಿಸಬೇಕಾದುದನ್ನು ಸಾಧಿಸಿಯಾಗಿರುತ್ತದೆ.

ಮೂಲ ಸ್ಥಾನದಿಂದ ಉಣ್ಣೆಗಳ ಹಿಂದು ವ್ಯಕ್ತಿಯ ಕೈಬೆರಳುಗಳಿಗೆ ಸ್ಥಳಾಂತರಗೊಳ್ಳುವದು. ಒಂದು ರೀತಿಯಲ್ಲಿ ಇದು ಅವುಗಳಿಗೆ ಒಂದು ನಿಲ್ದಾಣದಂತೆ. ಇಲ್ಲಿಂದ ಅವು ಬೇರೆ ವ್ಯಕ್ತಿಯ ದೇಹವನ್ನು ತಲುಪಬೇಕು. ಅವರ ದಾರಿ ಕಾಯುತ್ತಲೇ ಇರುತ್ತವೆ. ರೋಗದಿಂದ ಬಳಲುವ ವ್ಯಕ್ತಿ ಬೇರೆ ವ್ಯಕ್ತಿಯ ಕೈ ಕುಲಕಬಹುದು. ಬೇರೆ ವ್ಯಕ್ತಿಯ ಮೈಮೇಲೆ, ಬಟ್ಟೆಯ ಮೇಲೆ ಕೈ ಇಡಬಹುದು. ಹಾಸಿಗೆ ಹಿಡಿಯಬಹುದು. ಇಂಥ ಸುಸಂಧಿ ಕಂಡ ತಕ್ಷಣ ಉಣ್ಣೆಗಳು ರೋಗಿಯ ಬೆರಳುಗಳನ್ನು ಬಿಟ್ಟು ಹೊಸ ವ್ಯಕ್ತಿಯ ದೇಹ, ಕೈ, ಬಟ್ಟೆ, ಹಾಸಿಗೆಗಳಿಗೆ ಅಂಟಿಕೊಂಡು ಬಿಡುತ್ತವೆ. ನಮಗೆ ಈ ಹಂತದಲ್ಲಿ ಒಂದು ಸಂಶಯ. ಈ ಉಣ್ಣೆಗಳಿಗೆ ಈ ಬೆರಳು ತಾನು ವಾಸಿಸಿದ್ದ ರೋಗಿಯವು, ಅವು ಬೇರೆಯ ವ್ಯಕ್ತಿಯ ಬೆರಳು, ದೇಹ, ಬಟ್ಟೆ, ಹಾಸಿಗೆ ಎಂಬುದು ಹೇಗೆ ತಿಳಿಯುವದು? ನಿಜ ಈ ಉಣ್ಣೆಗಳಿಗೆ ಇಂಥ ಜ್ಞಾನವಿದೆ ಎಂದು ತಿಳಿದಿದೆ. ಉಣ್ಣೆಗಳಲ್ಲಿ ವಾಸನೆ ಗ್ರಹಿಸುವ ಶಕ್ತಿ ಬಹಳ ಸೂಕ್ಷ್ಮವಾಗಿದೆ. ಈ ಶಕ್ತಿಯಿಂದ ಅವು ಗ್ರಹಿಸಿ ರೋಗಿಯಿಂದ ಹೊಸ ವ್ಯಕ್ತಿಗೆ ಸ್ಥಳಾಂತರಗೊಳ್ಳುವವು.

ಹೊಸ ವ್ಯಕ್ತಿಯ ದೇಹ ಅವುಗಳಿಗೆ ಒಂದು ಹೊಸ ಲೋಕವೇ ಹೌದು, ಅಲ್ಲಿ ಅವು ಯಾವ ಗಡಿಬಿಡಿ ಮಾಡುವದಿಲ್ಲ. ಎಲ್ಲಿ ತಲುಪಿರುತ್ತವೆಯೋ ಅಲ್ಲಿಯೇ ತಳವೂರುತ್ತವೆ. ಸಮೀಪದ ಕೂದಲಿನ ಬೇರಿಗೆ

ಹೋಗುತ್ತವೆ. ಇಲ್ಲವೇ ಹೊಸದಾದ ಒಂದು ಬಿಲವನ್ನು ಚರ್ಮದ ಮೇಲ್ಪದರುಗಳಲ್ಲಿ ಕೊರೆಯುತ್ತವೆ. ಪ್ರಾಯದ ಗಂಡು ಹೆಣ್ಣುಗಳು ಈ ಬಿಲಗಳಲ್ಲಿ ಮಿಸುಳುತ್ತವೆ. ಬಿಲಗಳು ಅವುಗಳಿಗೆ ಶಯನಗೃಹವಾಗುತ್ತವೆ. ಇಲ್ಲಿ ಗಂಡು ಹೆಣ್ಣುಗಳು ಒಂದಕ್ಕೊಂದು ಆಕರ್ಷಿತವಾಗಿ ಪ್ರೀತಿಸುತ್ತವೆ. ಪ್ರೀತಿ ಮಿಲನದಲ್ಲಿ ಮುಕ್ತಾಯವಾಗುವುದು. ಮಿಲನದ ನಂತರ ಗಂಡು ಉಣ್ಣೆ ನಿರ್ವೀರ್ಯ ಆಗಿ ಮರಣ ಹೊಂದುವದು. ಮಿಲನದಿಂದ ಹೆಣ್ಣು ಗರ್ಭಧರಿಸುವದು. ಗರ್ಭಿಣಿಯಾದ ಉಣ್ಣೆ ತಾನು ವಾಸಿಸಿದ್ದ ಬಿಲವನ್ನು ಬಿಟ್ಟು ಹೊರ ಬೀಳುತ್ತದೆ. ಹೊರ ಬೀಳುವಾಗ ದೇಹದ ಹಳೆಯ ಪೊರೆಯನ್ನು ಕಳಚಿ ಹೊಸ ದೇಹದೊಡನೆ ತ್ವಚೆಯ ಮೇಲೆ ಬರುವದು. ಅನುಕೂಲ ನೋಡಿಕೊಂಡು ಅಲ್ಲಿಯೇ ಸಮೀಪದಲ್ಲಿ ತನ್ನದೇ ಆದ ಹೊಸ ಸುರಂಗವನ್ನು ತ್ವಚೆಯ ಮೇಲ್ಪದರುಗಳಲ್ಲಿ ಕೊರೆಯಲು ಪ್ರಾರಂಭಿಸುವದು. ಸುರಂಗದಲ್ಲಿ ಅದು ಮುಂದೆ ಸಾಗುತ್ತಿರುವಾಗ ದೇಹದ ಹಿಂಭಾಗದಲ್ಲಿದ್ದ ಯೋನಿ ಮಾರ್ಗದಿಂದ ತತ್ತಿಗಳನ್ನು ಇಡಲು ಪ್ರಾರಂಭಿಸುವದು. ಒಂದು ಸಲಕ್ಕೆ ಕೇವಲ ಎರಡು ತತ್ತಿಗಳನ್ನು ಇಡುವದು. ಮತ್ತೆ ಸುರಂಗ ಕೊರೆಯುತ್ತ ಮುಂದೆ ಚಲಿಸುವದು. ಸ್ವಲ್ಪ ಅಂತರ ಕ್ರಮಿಸಿದ ಮೇಲೆ ಮತ್ತೆರಡು ತತ್ತಿಗಳನ್ನು ಹಾಕುವದು. ಇಷ್ಟರಲ್ಲಿ ಮೊದಲು ಹಾಕಿದ್ದ ತತ್ತಿಗಳಲ್ಲಿಯ ಮರಿಗಳು ಬೆಳೆದು ತತ್ತಿಗಳನ್ನು ಒಡೆದು ಹೊರ ಬರುವವು. ಹೊರ ಬಂದ ಮರಿಗಳಿಗೆ ಒಂದೇ ಒಂದು ದಾರಿ ಅದೇ ಸುರಂಗ ಮಾರ್ಗ. ಸಮೀಪದಲ್ಲಿದ್ದರೆ ತಾವೇ ಹೊರ ಬರುತ್ತವೆ. ಸ್ವಲ್ಪ ದೂರವಾಗಿದ್ದರೆ ಈ ಮರಿಗಳು ತಮಗೆ ದೈವದತ್ತವಾಗಿ ಬಂದ ತಂತ್ರ ತುರಿಕೆಯನ್ನು ಪ್ರಾರಂಭಿಸುವವು. ಆಗ ವ್ಯಕ್ತಿ ತುರಿಸತೊಡಗುವನು. ಉಗುರುಗಳಿಂದಾಗುವ ಗಾಯದಿಂದ ಸುರಂಗ ಮಾರ್ಗವು ತೆರೆದುಕೊಳ್ಳುವ ಸಂಭವವಿದೆ. ಈ ಕಿಡಕಿಗಳಿಂದ ಮರಿಗಳು ಹೊರ ಬೀಳಲು ಅನುಕೂಲ. ಈ ಮರಿಗಳು ತಮ್ಮ ಜೀವನವನ್ನು ಪ್ರಾರಂಭಿಸುತ್ತವೆ.

ಒಂದು ವೇಳೆ ಎಳೆಯ ಮರಿಗಳು ರೋಗಿಯ ದೇಹದಿಂದ ಹೊಸ ವ್ಯಕ್ತಿಯ ಮೈಮೇಲೆ ಬಂದರೂ ಅವೂ ಸಹ ಅದೇ ದೇಹದಲ್ಲಿ ಹುಟ್ಟಿದ ಮರಿಗಳಂತೆ ಬೆಳೆಯಬೇಕಾಗುವುದು. ಮೊದಲು ಬಿಲಗಳನ್ನು ತೋಡುವುದು. ಅವುಗಳಲ್ಲಿ ಗುಂಪಾಗಿ ವಾಸಿಸುವುದು. ಪ್ರಾಯ ಬರುವವರೆಗೆ ಬೆಳೆಯುವುದು. ಪ್ರಾಯಕ್ಕೆ ಬಂದ ಮೇಲೆ ಹೆಣ್ಣು ಗಂಡುಗಳ ಆಕರ್ಷಣೆ, ಮಿಲನ. ಹೆಣ್ಣು ಗರ್ಭಧರಿಸುವುದು ಇತ್ಯಾದಿ.

ದೇಹದ ಒಂದು ಭಾಗದಲ್ಲಿ ಉಣ್ಣೆಗಳ ಸಂತತಿ ವೃದ್ಧಿಗೊಂಡಾದ ಮೇಲೆ ಅವುಗಳು ಎರಡನೆಯ ಚಿಂತೆಯನ್ನು ಮಾಡುತ್ತವೆ. ಅದೆಂದರೆ ಉಣ್ಣೆಗಳಿಗೆ ಹೆಚ್ಚು ಸೂಕ್ತವಾದ ವಾಸಸ್ಥಳ ಎಂದರೆ ಕೈಬೆರಳು, ಮುಂಗೈಗಳು. ಕಾರಣ ಉಣ್ಣೆಗಳಲ್ಲಿ ಕೆಲವು ದೇಹದ ಆ ಭಾಗಗಳಲ್ಲಿ ತುರಿಕೆ ತರುತ್ತವೆ. ತುರಿಸುವಾಗ ಬೆರಳುಗಳನ್ನು ಹಿಡಿಯುತ್ತವೆ. ಬೆರಳುಗಳ ಸಂದುಗಳಲ್ಲಿ ವಾಸಿಸಲು ಹೋಗುತ್ತವೆ. ಕಜ್ಜಿಯ ಪ್ರೀತಿಯ ವಾಸಸ್ಥಾನವೆಂದರೆ ಕೈ ಹಾಗೂ ಬೆರಳುಗಳ ಸಂದುಗಳು.

ಹೀಗೆ ದೇಹದಲ್ಲಿ ಕಜ್ಜಿಯ ಉಣ್ಣೆಗಳ ಸಂಖ್ಯೆ ಹೆಚ್ಚುತ್ತದೆ. ಮರಿಗಳು, ಯುವ ಉಣ್ಣೆಗಳು ಹಾಗೂ ಗರ್ಭಿಣಿ ಉಣ್ಣೆಗಳು

ಚರ್ಮದಲ್ಲಿ ಚಲಿಸಲಾರಂಭಿಸುತ್ತವೆ. ಆದರೆ ಅವುಗಳಿಗೆ ಮನೆ ಕಟ್ಟಿಕೊಳ್ಳಲು ಅಂದರೆ ಸುರಂಗ ತೋಡಲು ಅಥವಾ ಬಿಲಗಳನ್ನು ತೆಗೆಯಲು ಸಾಮಾನ್ಯವಾದ ಮೃದು ಚರ್ಮದಲ್ಲಿ ಹೊರ ಪದರಗಳು ಬಹಳ ತೆಳುವಾಗಿರುತ್ತವೆ. ತೆಳುವಾದ ಹೊರ ಪದರಿನಲ್ಲಿ ಮನೆ ಕಟ್ಟಲು ಕಷ್ಟ. ತ್ವಚೆಯ ಹೊರ ಪದರು ದಪ್ಪವಾಗಿದ್ದರೆ ಸುರಂಗ ಕೊರೆಯಲು ಸುಲಭ. ಹೊರ ಪದರು ಹಕ್ಕಳೆಗಳಂತೆ ನಿಂತರೆ ಉಣ್ಣೆಗಳು ಗುಂಪು ಗುಂಪಾಗಿ ಹಕ್ಕಳೆಗಳ ಬುಡದಲ್ಲಿ ಜೀವಿಸಲು ಸಾಧ್ಯ. ಇದನ್ನು ಉಣ್ಣೆ ಸಾಧಿಸಲು ಯೋಜಿಸುತ್ತದೆ.

ಇಂಥ ನಿರ್ಣಯವನ್ನು ತೆಗೆದುಕೊಂಡಾದ ಮೇಲೆ ಎಲ್ಲ ಉಣ್ಣೆಗಳು ಕೂಡಿ ತಮ್ಮ ಕಾರ್ಯಕ್ರಮವನ್ನು ಪ್ರಾರಂಭಿಸುತ್ತವೆ. ಅವು ಚರ್ಮದಲ್ಲಿ ತುರಿಕೆ ಹುಟ್ಟಿಸುತ್ತವೆ. ತುರಿಕೆ ಹುಟ್ಟಲು ಅವುಗಳ ಸಾಮೂಹಿಕ ಚಲನವಲನ ಬೇಕು. ದೇಹದ ಮೇಲಿನ ಮುಳ್ಳುಗಳು ಹಾಗೂ ರೋಮಗಳು ತ್ವಚೆಯಲ್ಲಿಯ ನರಕೇಂದ್ರಗಳನ್ನು ಪ್ರಚೋದಿಸುತ್ತವೆ. ಎರಡನೇಯದಾಗಿ ಉಣ್ಣೆಗಳು ತಮ್ಮ ದೇಹದಿಂದ ಹಲವಾರು ವಿಷಕಾರಿ ಪದಾರ್ಥಗಳನ್ನು ಸ್ರವಿಸತೊಡಗುತ್ತವೆ. ಈ ಪದಾರ್ಥಗಳು ತ್ವಚೆಯಲ್ಲಿ ಅಲರ್ಜಿ ಹುಟ್ಟಿಸುವುವು. ಅಲರ್ಜಿ ತುರಿಕೆ ಹೆಚ್ಚಿಸುವುದು. ಇದರಲ್ಲಿ ವ್ಯಕ್ತಿಯು ತನ್ನ ತ್ವಚೆಯನ್ನು ತುರಿಸತೊಡಗುವನು. ತುರಿಸಿದಂತೆ ತುರಿಕೆ ಹೆಚ್ಚಾಗುವುದು. ತುರಿಕೆ ಹೆಚ್ಚಾದಂತೆ ವ್ಯಕ್ತಿಯು ಇನ್ನೂ ಜೋರಿನಿಂದ ತುರಿಸತೊಡಗುವನು. ಅವನಿಗೆ ತುರಿಕೆಯು ನಿಶೆಯಂತೆ ಬರುವುದು. ಆ ನಿಶೆಯಲ್ಲಿ ತ್ವಚೆಯು ಗಾಯಗೊಂಡರೂ ಸಹ ಅವನು ಗಣಿಸುವುದಿಲ್ಲ. ಇಂಥ ತುರಿಕೆ ತ್ವಚೆಗೆ ದೊಡ್ಡ ಪ್ರಚೋದನೆ. ಪ್ರಚೋದನೆಯಿಂದ ತ್ವಚೆಯು ದಪ್ಪಗಾಗಲು ಪ್ರಾರಂಭಿಸುತ್ತದೆ. ತ್ವಚೆಯ ಹೊರಪದರಗಳ ಸಂಖ್ಯೆ ಹೆಚ್ಚಾಗುವುದು. ಹೊರ ಪದರು ನಿರ್ಜೀವ ಜೀವಕಣಗಳಿಂದಾಗಿರುತ್ತದೆ. ಅದು ಬರಬರುತ್ತ ಬಿರುಸಾಗುವುದು, ಕಪ್ಪಾಗುವುದು, ಕೊನೆಗೆ ಹಕ್ಕಳೆಗಟ್ಟುವುದು. ಇನ್ನೂ ವಿಕೋಪಕ್ಕೆ ಹೋದರೆ ಹುತ್ತಗಳಂತೆ ಬೆಳೆಯುವುದು.

ಉಣ್ಣೆಗಳಿಗೆ ಒಂದು ಹೊಸ ಸುಗ್ಗಿ. ಅವು ತಮ್ಮ ಸಂತತಿಯನ್ನು ದೊಡ್ಡ ಸಂಖ್ಯೆಯಲ್ಲಿ ಬೆಳೆಸುತ್ತವೆ. ಹಕ್ಕಳೆಗಳ ಬುಡದಲ್ಲಿ ಹುತ್ತುಗಳೊಳಗೆ ನೂರಾರು ಉಣ್ಣೆಗಳು ಗುಂಪು ಗುಂಪಾಗಿ ಜೀವಿಸತೊಡಗುತ್ತವೆ. ರೋಗಿಗೆ ಇದಾವುದರ ಅರಿವೆಯೇ ಇರುವುದಿಲ್ಲ. ಅವನು ತುರಿಕೆಯ ಅಮಲಿನಲ್ಲಿಯೇ ಮುಳುಗಿರುತ್ತಾನೆ. ತಾನು ಮಾಡುತ್ತಿರುವುದು ತನ್ನ ಅಮಲಿಗಾಗಿ ಎಂದೇ ತಿಳಿಯುತ್ತಾನೆ. ಆದರೆ ಆ ಅಮಲನ್ನು ತಂದು ಕೊಟ್ಟದ್ದು ಉಣ್ಣೆ ಎಂಬುದು ಅವನಿಗೆ ತಿಳಿಯುವುದಿಲ್ಲ.

ಹೀಗೆ ಉಣ್ಣೆಯು ದೇಹದಲ್ಲಿ ತುರಿಕೆಯನ್ನು ಹುಟ್ಟಿಸಿ ಮಾನವನನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದು. ಅವನ ಕೈ ಬೆರಳುಗಳನ್ನು ತನ್ನ ಅನುಕೂಲಕ್ಕೆಂದು ಪಿಕ್ ಅಪ್ ವ್ಯಾನಿನಂತೆ ಬಳಸುವುದು. ಮುಂಗೈ ಹಾಗೂ ಬೆರಳುಗಳಿಗೆ ತಲುಪುವಂತೆ ಮಾಡುವುದು. ತನ್ನ ಬಳಗದ ವಸತಿಯ ಅನುಕೂಲಕ್ಕೆಂದು ಚರ್ಮದ ಹೊರ ಪದರುಗಳನ್ನು ಹೆಚ್ಚಿಸುವುದು. ಚರ್ಮ ಬಿರುಸಾಗು

ವಂತೆ ಮಾಡುವುದು. ತ್ವಚೆಯಲ್ಲಿ ಹಕ್ಕಳೆಗಳು ಹುಟ್ಟುವಂತೆ ಮಾಡುವುದು. ಕೆಲವು ಸಲ ಹಕ್ಕಳೆಗಳು ಹುಟ್ಟುವಂತೆ ಮಾಡುವುದು. ಕೆಲವು ಸಲ ಹಕ್ಕಳೆಗಳು ಹುತ್ತುಗಳ ರೂಪ ಪಡೆಯುವಂತೆ ಮಾಡುವುವು.

ತ್ವಚೆಯು ನಮ್ಮದು. ಅದನ್ನು ಪೋಷಿಸುವವರು ನಾವು. ಆದರೆ ಅದರ ಮೇಲೆ ಅಧಿಕಾರ ಮಾತ್ರ ಕಜ್ಜಿಯ ಉಣ್ಣೆಯದು. ತುರಿಸುವವರು ನಾವು. ತುರಿಸುವುದರಿಂದಾಗುವ ಲಾಭಗಳು ಉಣ್ಣೆಯವು. ತುರಿಕೆ ಹುಟ್ಟಿಸಿ ತುರಿಸುವಂತೆ ಆಜ್ಞೆ ಮಾಡುವುದು ಉಣ್ಣೆ. ತುರಿಸುವ ಕೂಲಿಯನ್ನು ಮಾಡುವವರು ನಾವು. ಕೂಲಿಗಾಗಿ ಸಿಗುವ ಸಂಬಳ ಎಂದರೆ ತುರಿಕೆಯ ಅಮಲು ಮಾತ್ರ. ಇದು ಅಚ್ಚರಿಯೆನಿಸಿದರೂ ಸತ್ಯ ಸಂಗತಿ.

ಮುಂದಿನ ಲೇಖನ 'ಕಾಲರಾ'



ಪರಸ್ಪರರ ಧರ್ಮಗಳನ್ನು ಹಳಿಯುವುದು, ಹೊಣೆಯಿಲ್ಲದೆ ದೂಷಿಸುವುದು, ಅಸತ್ಯವನ್ನೇ ನುಡಿಯುವುದು, ಮುಗ್ಧ ಜನರನ್ನು ಕೊಲ್ಲುವುದು, ಮಂದಿರ ಮಸೀದಿ ಚರ್ಚುಗಳನ್ನು ನಾಶಮಾಡುವುದು ಇವೆಲ್ಲವೂ ಅಧರ್ಮದ ಪರಾಕಾಷ್ಠೆ. ನಾಸ್ತಿಕತೆಯ ಸಂಕೇತ.

ತನ್ನ ಧರ್ಮದ ನಿಜವಾದ ಅರಿವನ್ನು ಪಡೆದು ಪರರ ಧರ್ಮಗಳನ್ನು ತನ್ನದರಂತೆಯೇ ಗೌರವಿಸುವುದು ಧಾರ್ಮಿಕ ಸಂಸ್ಕೃತಿ.

—ಗಾಂಧೀಜಿ

ಎಣೆ ಇಲ್ಲದ ಚಾರ್ಲ್ಸ್ ಡಿಕನ್ಸ್

ಟಿ. ಎಸ್. ಲಲಿತ
೭೦೩, ಮೊದಲನೆ ಮಹಡಿ,
೧೭ನೇ ಮೇನ್, ಸರಸ್ವತಿಪುರ
ಮೈಸೂರು-೫೭೦೦೦೯

ಅನೇಕ ವಿಮರ್ಶಕರು, ಇಂಗ್ಲಿಷ್ ಭಾಷೆಯಲ್ಲಿ, ಚಾರ್ಲ್ಸ್ ಡಿಕನ್ಸನ ಕಾದಂಬರಿಗಳು ಷೇಕ್ಸ್‌ಪಿಯರ್‌ನ ನಾಟಕಗಳಷ್ಟೇ ಮಹತ್ವ ಹೊಂದಿದ ಕೃತಿಗಳು ಎನ್ನುತ್ತಾರೆ. ಬೇರೆಲ್ಲ ಬರಹಗಾರರಿಗಿಂತ, ಡಿಕನ್ಸ್, ತನ್ನ ಬರಹದಿಂದ ಜನರಿಗೆ ಹೆಚ್ಚು ಸಂತೋಷ ತಂದಿದ್ದಾನೆನ್ನುತ್ತಾರೆ. ಆತನ ಅತ್ಯಂತ ಯಶಸ್ವಿ ಜೀವನ ಚರಿತ್ರೆ ೧೮೩೬ರಲ್ಲಿ ಆತ ಕಂಡ ಕನಸಿನಂತೆ, ಸಂತಸ ತುಂಬಿದ ಹಾಸ್ಯಗಾರರ ಗುಂಪಿನೊಂದಿಗೆ ಶುರುವಾಯಿತು.

ಹೊಸ ಪಬ್ಲಿಷಿಂಗ್ ಕಂಪೆನಿಯೊಂದು, ಷಿಲಿಂಗಿಗೊಂದು ಬೆಲೆಯ ಬೇಟೆ ಕುರಿತ ವಿಷಯಕ್ಕೆ ಹಾಸ್ಯಭರಿತ ಸಾಹಿತ್ಯ ಒದಗಿಸಬಲ್ಲ ಬರಹಗಾರನಿಗಾಗಿ ಹುಡುಕುತ್ತಿತ್ತು. ತೀವ್ರ ಹಾಸ್ಯಪ್ರಜ್ಞೆಯ 'ಲಂಡನ್ ಕ್ರಾನಿಕಲ್' ರಿಪೋರ್ಟರ್ ಆಗಿದ್ದ ೨೪ರ ತರುಣ ಚಾರ್ಲ್ಸ್ ಡಿಕನ್ಸ್‌ನ ಹೆಸರನ್ನು ಯಾರೋ ಸೂಚಿಸಿದರು. ಡಿಕನ್ಸ್ ತಕ್ಷಣ ಒಪ್ಪಿದ. ನಗರದ ಕಡುಬಡತನದ ಸಂಸಾರಕ್ಕೆ ಸೇರಿದ್ದ ಡಿಕನ್ಸ್‌ಗೆ (೧೨ ವರ್ಷದವನಾದಾಗಲೇ ಉಗ್ರಾಣವೊಂದರಲ್ಲಿ ದುಡಿಯುತ್ತಿದ್ದ, ಅವನ ತಂದೆ ತಾನುಮಾಡಿದ್ದ ಸಾಲಕ್ಕಾಗಿ ಸೆರೆಮನೆ ಸೇರಿದ್ದ) ಬೇಟೆಯ ಬಗ್ಗೆ ಏನೂ ತಿಳಿದಿರಲಿಲ್ಲ. ಹಾಗಾಗಿ ಬೇಟೆಯ ವಿಷಯವನ್ನು ಬದಲಿಸಿ, ಲಂಡನ್‌ನಲ್ಲಿ ಸುತ್ತಾಡುತ್ತ ಬಂದಲ್ಲಿ ಒಂದು ಹಗರಣಕ್ಕೆ ಸಿಕ್ಕಿಕೊಳ್ಳುವ ಮನುಷ್ಯರ ಸಾಹಸ ಪ್ರವೃತ್ತಿಯ ಬಗೆಗಿನ ವಿಷಯ ಆರಿಸಿಕೊಂಡ.

ಬೊಜ್ಜು ಮೈಯ್ಯಿನ, ನಿವೃತ್ತ ವ್ಯಾಪಾರಿ ಸ್ಯಾಮ್ಯುಯಲ್ ಪಿಕ್‌ವಿಕ್‌ನನ್ನು ಕುರಿತು ಬರೆದ ಧಾರಾವಾಹಿಯ ಮೊದಲ ಮೂರು ಹಂತಗಳು ಯಶಸ್ಸು ಕಾಣಲಿಲ್ಲ. ಅನಂತರ ಓದು-ಬರಹ ಬಾರದ, ಉಗ್ರ, ತರುಣ ಸ್ಯಾಮ್ ವೆಲ್ಲರ್‌ನ ಪಾತ್ರ ಉಪಯೋಗಿಸಿಕೊಂಡು ಬರೆದ ಎಲ್ಲಾ ಅಂಕಗಳೂ ಯಶಸ್ಸು ಕಂಡು, ಅದರೊಂದಿಗೆ ಡಿಕನ್ಸ್‌ನ ಜೀವನ ಹೊಸ್ನಾಗಿ ಪರಿವರ್ತಿತವಾಯಿತು, ಪಿಕ್‌ವಿಕ್ ಹಾಗೂ ವೆಲ್ಲರ್ ಮೂಲಕ ಡಿಕನ್ಸ್ ಬಹುಶಃ ಸಾಹಿತ್ಯದಲ್ಲೇ ಅತ್ಯಂತ ಹಾಸ್ಯಭರಿತ ಜೋಡಿಯನ್ನು ಚಿತ್ರಿಸಿದ್ದಾನೆ.

ಆಧಾರ: 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟಗೊಂಡ ಜೇಮ್ಸ್ ನಥನ್ ಮಿಲ್ಲರ್ ಅವರ "ಇನಿಮಿಟಬಲ್ ಚಾರ್ಲ್ಸ್ ಡಿಕನ್ಸ್" ಲೇಖನ.

ವಯಸ್ಸಾದ, ಸಿಸ್ಸುಪಟ, ಪಿಕ್‌ವಿಕ್‌ಗೆ, ಒರಟೊರಟಾದ ಉಲ್ಲಾಸಕರವಾದ ಸಾವ್‌ವೆಲ್ಲರ್ ಯಾವಾಗ ರಕ್ಷಕನಾಗಿ, ನೌಕರನಾಗಿ ಬಂದನೋ ಆಗಿನಿಂದ ವಿಮರ್ಶಕರ ದೃಷ್ಟಿ ಅವರತ್ತ ಹೊರಳಿ ಮಳಿಗೆಗೆ ಪುಸ್ತಕಕೊಳ್ಳುವವರು ಮುತ್ತುತ್ತಿದ್ದರು. ಮೊದಲ ಕೆಲವು ತಿಂಗಳಲ್ಲಿ ಪ್ರತಿಯೊಂದು ಕಂತಿಗೂ ೪೦,೦೦೦ ಪ್ರತಿಗಳ ಮಾರಾಟವಾಗುತ್ತಿತ್ತು. ಪಿಕ್‌ವಿಕ್ ಬಗೆಗಿನ ಹುಚ್ಚು ಲಂಡನ್ನನ್ನು ಆವರಿಸಿತ್ತು. ಪಿಕ್‌ವಿಕ್ ಸಿಗಾರ್‌ಗಳು, ಪಿಕ್‌ವಿಕ್ ಹ್ಯಾಟ್, ಪಿಕ್‌ವಿಕ್ ಛಡಿ, ವೆಲ್ಲರ್ ಟ್ರೌಸರ್ಸ್ ಹಾಗೂ ಅವರನ್ನು ಅನುಕರಿಸುವ ಅನೇಕ ವಸ್ತುಗಳು, ಲಂಡನ್‌ನ ಮಾರುಕಟ್ಟೆ ತುಂಬಿದವು. ಬಡಜನರು ಸೇರಿ, ತಮ್ಮಲ್ಲಿದ್ದ ಕಾಸುಗಳನ್ನು ಒಟ್ಟುಗೂಡಿಸಿ ಒಂದು ಪ್ರತಿ ಖರೀದಿಸಿ, ಒಬ್ಬರ ನಂತರ ಒಬ್ಬರು ಪುಸ್ತಕವನ್ನು ಓದುತ್ತಿದ್ದರು. "ಸಾಹಿತ್ಯದ ಯಾವುದೇ ಒಂದು ಕೃತಿ ಈ ಹಿಂದೆ ಅಥವಾ ನಂತರ, ಜನರಲ್ಲಿ ಇಂಥ ಆಸಕ್ತಿ ಕೆರಳಿಸಿದುದನ್ನು ನಾನು ಕಾಣೆ" ಎಂದು ಎಡ್ಗರ್ ಜಾನ್‌ಸನ್ ತನ್ನ ಬೃಹತ್ತಾದ ಜೀವನ ಚರಿತ್ರೆಯಲ್ಲಿ ಬರೆದಿದ್ದಾನೆ. ಕೆಲವೇ ತಿಂಗಳುಗಳ ಅವಧಿಯಲ್ಲಿ, ಅನಾಮಿಕ ವರದಿಗಾರನೊಬ್ಬ ಇಂಗ್ಲೆಂಡಿನ ಅತ್ಯಂತ ಜನಪ್ರಿಯ ಬರಹಗಾರನಾಗಿ ಪರಿವರ್ತಿತನಾಗಿದ್ದ!

ಪೈಪಿನ ಮೂಲಕ ಊದಿ, ಸಾಲು ಸಾಲಾಗಿ ಸೋಪಿನ ಗುಳ್ಳೆಗಳನ್ನು ಬರಿಸುವಷ್ಟು ಸುಲಭವಾಗಿ ತನ್ನ ತಲೆಯಲ್ಲಿ ತುಂಬಿದ ಪಾತ್ರಗಳನ್ನು ಪರಿಸ್ಥಿತಿಯನ್ನೂ ಚಿತ್ರಿಸುತ್ತಿತ್ತು ಡಿಕನ್ಸ್‌ನ ಅಸಾಧಾರಣ ಕಲ್ಪನಾಶಕ್ತಿ. ಬರೆಯುವ ಮೊದಲು, ಆ ಪಾತ್ರಗಳು ಏನು ಹೇಳುತ್ತಿದ್ದವೆಂದು ನನ್ನ ಕಿವಿಯಲ್ಲಿ ಕೇಳುತ್ತಿದ್ದಂತಿತ್ತು ಎಂದಿದ್ದಾನೆ ಡಿಕನ್ಸ್. ಪಿಕ್‌ವಿಕ್ ಪೇಪರ್ಸ್‌ನಲ್ಲಿ ಸ್ಯಾಮ್ ವೆಲ್ಲರ್‌ನ ಸಂಭಾಷಣೆ ನಗೆಯು ಕಡಲುಕ್ಕಿಸಿದರೆ, ಡಿಕನ್ಸ್‌ನ ಕೃತಿಗಳಲ್ಲಳವಡಿಸುತ್ತಿದ್ದ ಮುನ್ನೂರಕ್ಕೂ ಹೆಚ್ಚು ಅಪೂರ್ವ ಸಹಾಯಕ ನಟರು ಕೃತಿಯನ್ನು ಅಮರಗೊಳಿಸಿದರು. ಇತರರನ್ನು ಅನುಕರಣೆ ಮಾಡುವ ಜಪ್ಪೆರ್, ಹಿಂಗಲಾರದ ಹಸಿವಿನೊಂದಿಗೆ ಕೆಲಸ ಮಾಡುತ್ತಲೇ ನಿದ್ದೆ ಮಾಡುವ ಹುಡುಗ, ಸ್ಯಾಮ್‌ವೆಲ್ಲರ್ ಅಪ್ಪನ ಅನ್ವೇಷಣಾತ್ಮಕ ಸಂಭಾಷಣೆ ಎಲ್ಲವೂ ಅದಕ್ಕೆ ಪೂರಕವಾಗಿದ್ದವು.

ಈ ಅಪೂರ್ವ ಉತ್ಸಾಹದ ಹಿಂದಿನ ಈ ಮನುಷ್ಯ ಯಾವ ರೀತಿಯವನು? ತೀರ ಯಥಾರ್ಥವಾದಿ ಎನ್ನುವಾಗ ಖಯಾಲಿಯ ಮನುಷ್ಯನೆನಿಸಿದರೆ, ತೀರಾ ಖಯಾಲಿಯ ಮನುಷ್ಯನೆಂದಾಗ, ತೀರಾ ಯಥಾರ್ಥವಾದಿ ಎನಿಸುತ್ತಿದ್ದ. ತನ್ನದೊಂದು ಕಾದಂಬರಿಯಿಂದ ನೇರವಾಗಿ ತೆಗೆದುಕೊಂಡ ಮೂಲ ಪಾತ್ರದಂತೆ, ತಾನು ಚಿತ್ರಿಸುವ ಪಾತ್ರಗಳಲ್ಲಿ ತನ್ನನ್ನೇ ತಾನು ಕಂಡುಕೊಳ್ಳುತ್ತಿದ್ದ ಡಿಕನ್ಸ್ ವ್ಯಕ್ತಿತ್ವ ವಿಶಿಷ್ಟವಾದುದು.

ಭೋಜನ ಕೂಟವೊಂದರಲ್ಲಿ ತನ್ನ ಪಕ್ಕ ಕುಳಿತ, ಸುಪ್ರಸಿದ್ಧ ಅಮೆರಿಕನ್ ವೈದ್ಯನೊಬ್ಬನ ತರುಣ ಪತ್ನಿ ತನ್ನ ಗಂಡನನ್ನು ಪ್ರೀತಿಯಿಂದ ಸಂಬೋಧನೆ ಮಾಡಿದ "ಡಾರ್ಲಿಂಗ್" ಎಂಬ ಇದುವರೆಗೂ ಕೇಳದ ಪದವನ್ನು ಕೇಳಿದ ಡಿಕನ್ಸ್‌ಗೆ ನಗು

ತಡೆಯಲಾಗದೆ, ಕುರ್ಚಿಯಿಂದ ಕೆಳಗೆ ಬಿದ್ದನಂತೆ.

ಇಂಥ ಹಾಸ್ಯ ಪ್ರಜ್ಞೆಯ ಹಿಂದೆ, ಡೈನಮೋದಂತಹ ಅಸಾಧಾರಣ ಪ್ರತಿಭಾ ಶಕ್ತಿ ಅಡಗಿತ್ತು. ವಿಶ್ವದ ಎರಡು ಪ್ರಸಿದ್ಧ ಕಾದಂಬರಿಗಳಾಗಿ. 'ವಾರ್ ಎಂಡ್ ಪೀಸ್' ನೊಂದಿಗೆ ಡಿಕನ್ಸ್‌ನ 'ಪಿಕ್‌ವಿಕ್ ಪೇಪರ್ಸ್' ಅನ್ನು ಪ್ರಸಿದ್ಧ ಕೃತಿ ಎಂದು ಹೆಸರಿಸಿತ್ತು 'ಬಿ.ಬಿ.ಸಿ. ಬ್ರೈನ್ ಟ್ರಸ್ಟ್'. ಮೇರು ಕೃತಿಯಾದ 'ಪಿಕ್‌ವಿಕ್ ಪೇಪರ್ಸ್' ರಚಿಸುತ್ತಿದ್ದಾಗಲೇ, ಡಿಕನ್ಸ್ ಸಾಹಿತ್ಯ ಪತ್ರಿಕೆಯೊಂದರ ಪೂರ್ಣಾವಧಿ ಸಂಪಾದಕನಾಗಿ, ಅಪೇರಾ ಒಂದಕ್ಕೆ ಗೀತರಚನಾಕಾರನಾಗಿ ಹಾಗೂ ತನ್ನ ಕಾದಂಬರಿಗೆ ಬೇಡಿಕೆ ಹೆಚ್ಚಾದಾಗ, ಎರಡನೆ ಕಾದಂಬರಿ 'ಆಲಿವರ್ ಟ್ವಿಸ್ಟ್'ನ್ನು ಬರೆಯುವ ವಿವಿಧ ಕಾರ್ಯಗಳಲ್ಲಿ ಒಮ್ಮೆಲೇ ತೊಡಗುತ್ತಿದ್ದ.

ಉಳಿದ ಜೀವಮಾನ ಪೂರ್ತಿ ೩-೪ ಹಿರಿಯ ಯೋಜನೆಗಳಲ್ಲಿ ಒಟ್ಟೊಟ್ಟಿಗೇ ಕಾರ್ಯ ನಿರ್ವಹಿಸುತ್ತಿದ್ದ. ಆಲಿವರ್ ಟ್ವಿಸ್ಟ್ ಮುಗಿಸುವ ಮೊದಲೇ ನಿಕೋಲಸ್ ನಿಕ್ಲೇಬೈಯನ್ನು ಕೈಗೆತ್ತಿಕೊಂಡು ಅದನ್ನು ಮುಗಿಸುವ ಮುನ್ನ ದಿ ಓಲ್ಡ್ ಕ್ಯೂರಿಯಾಸಿಟಿ ಶಾಪ್ ಬರೆಯಲು ತಯಾರಿ ನಡೆಸಿದ್ದ. ಉದ್ದಕ್ಕೂ ಅನೇಕ ಸಾಪ್ತಾಹಿಕಗಳ ಸಂಪಾದನೆ ಹಾಗೂ ಲೇಖನ–ನಾಟಕಗಳನ್ನು ಬರೆಯುತ್ತ ಅಗಾಧ ಪ್ರಮಾಣದಲ್ಲಿ ಪತ್ರ ವ್ಯವಹಾರ ನಡೆಸುತ್ತ, ಜೊತೆಗೇ ನಾಟಕಗಳಲ್ಲೂ ಅಭಿನಯಿಸುತ್ತಿದ್ದ.

ಡಿಕನ್ಸ್, ರಂಗದ ಮೇಲೆ, ತನ್ನ ನಾಟಕಗಳನ್ನು ಪ್ರಸ್ತುತಪಡಿಸುತ್ತಿದ್ದ ರೀತಿ, ಆ ದಿನಗಳಲ್ಲಿ ಅತ್ಯಂತ ಮೆಚ್ಚುಗೆ ಗಳಿಸಿತ್ತು. ಅತ್ಯುತ್ತಮ ನಟನಾಗಿ ಈ ಪ್ರಸ್ತುತಿಯಲ್ಲಿ ಎಷ್ಟು ಸ್ಪಷ್ಟತೆ ತರುತ್ತಿದ್ದನೆಂದರೆ, ಕೆಲವು ಮುಖ್ಯ ನಟನೆಗಳಿಗಾಗಿ ಟೀಕೆಗೊಳಗಾಗುತ್ತಿದ್ದ. ಉದಾಹರಣೆಗೆ, 'ಆಲಿವರ್ ಟ್ವಿಸ್ಟ್' ನಲ್ಲಿ ನ್ಯಾನ್ಸಿಯ ಕೊಲೆಯ ದೃಶ್ಯದಲ್ಲಿ, ಚೀರುವ ಡಿಕನ್ಸ್‌ನನ್ನು ಕಂಡು ಅನೇಕ ಮಹಿಳೆಯರು ಮೂರ್ಛೆ ಹೋಗುವಷ್ಟು ಸಹಜ ಅಭಿನಯ ಅವನದು.

ನಂಬಲಾಗದ ಅವನ ಇಡೀ ಜೀವನ ಗತಿಯೇ ಒಂದು ಉತ್ತುಂಗಶೃಂಗವಾಗಿತ್ತು. ೧೮೩೬ ರಲ್ಲಿ ಸ್ಯಾಮ್ ವೆಲ್ಲರ್‌ನ ಆಗಮನದೊಂದಿಗೆ 'ದಿ ಮಿಸ್ಟ್ರಿ ಆಫ್ ಎಡ್ವಿನ್ ಡ್ರೂಡ್' ಬರೆಯುತ್ತ, ಸತ್ತ ಡಿಕನ್ಸ್‌ನ ಜೀವನ, ಮೇಲೇರಿ ಕುಳಿತು ಪ್ರಕಾಶಮಾನವಾದ ಬೆಳಕಿನಲೆಗಳನ್ನು ಒಂದರ ನಂತರ ಮತ್ತೊಂದನ್ನು ಹೊರ ಹಾಕುವ ದೀಪವಂತಿತ್ತು. ಆಲಿವರ್ ಟ್ವಿಸ್ಟ್ ಮುಗಿದಕೂಡಲೇ, ಅದರ ನಾಟಕರೂಪದ ಮೂರು ಪ್ರದರ್ಶನಗಳು, ಲಂಡನ್ನಿನಲ್ಲಿ ಒಟ್ಟಿಗೆ ನಡೆದವು.

'ದಿ ಓಲ್ಡ್ ಕ್ಯೂರಿಯಾಸಿಟಿ ಶಾಪ್'ನ ೧ ಲಕ್ಷ ಪ್ರತಿಗಳು, ಮಾರಾಟವಾದವು. ಆ ಪ್ರತಿಗಳನ್ನು ಹೊತ್ತ ಹಡಗು ನ್ಯೂಯಾರ್ಕ್ ತಲುಪಿದಾಗ, ಅದರ ಸಿಬ್ಬಂದಿವರ್ಗವನ್ನು ಹಾರ್ದಿಕವಾಗಿ ಸ್ವಾಗತಿಸಲಾಯಿತು.

೩೪ ವರ್ಷಗಳ ಅವಧಿಯಲ್ಲಿ, ಡಿಕನ್ಸ್ ೧೫ ಪುಸ್ತಕಗಳಲ್ಲದೆ ನೂರಾರು ಕಥೆ, ಲೇಖನಗಳನ್ನು ಬರೆದ. ಪುಸ್ತಕಗಳು ಒಂದೊಂದೂ ಅತ್ಯುತ್ತಮ ರೀತಿಯಲ್ಲಿ ಮಾರಾಟವಾದವು. ಕೇವಲ ಹಾಸ್ಯ ಪುಸ್ತಕಗಳಲ್ಲದೆ, ದುರಾಸೆ ಹಾಗೂ ಕೀಳು ಪ್ರವೃತ್ತಿಗಳ ವಿರುದ್ಧ ಬರೆದ

ಕ್ರೋಧಪೂರ್ಣ ಸಾಮಾಜಿಕ ಕಾದಂಬರಿಗಳಾದ 'ಬ್ಲೀಕ್ ಹೌಸ್' ಮತ್ತು 'ಅವರ್ ಮ್ಯೂಚ್ಯುಯಲ್ ಫ್ರೆಂಡ್' ಕಾದಂಬರಿಯನ್ನು ಜನ ಧಾವಿಸಿ ಹೋಗಿ ಕೊಂಡರು.

ಫೆಗಿನ್, ಮಿಕಾಬರ್, ಸ್ಕ್ರೂಜ್, ಟ್ವೈನಿಟಿವರ್, ಲಿಟಲ್‌ನೆಲ್ ಮುಂತಾದ ಡಿಕನ್ಸನ ಪಾತ್ರಗಳು ಮನೆಮಾತಾದವು. ಸಾವಿರಾರು ಸಣ್ಣ ಸಣ್ಣ ಪಾತ್ರವರ್ಗದವರು ಮುಖ್ಯ ಪಾತ್ರವರ್ಗದವರ ಜೊತೆ ಪರಸ್ಪರ ಮಿಳಿತವಾಗುವ ಕ್ರಿಯೆ ಅವನ ಕಾದಂಬರಿಗಳಿಗೆ ಪ್ರಚಂಡವಾದ ಶಕ್ತಿ ಮತ್ತು ಆಳವನ್ನಿತ್ತವು. ಭವ್ಯತೆ ಹಾಗೂ ಸೂಕ್ಷ್ಮತೆಯಲ್ಲಿ ಡಿಕನ್ಸನ ಕಾದಂಬರಿ, ಒಂದು ಗಾಥಿಕ್ ಕೆಥೆಡ್ರಲ್‌ನಂತೆ. ದೂರದಿಂದ ನೋಡಿದಾಗ ಅದರ ಆಕಾರ ಸರಳವಾಗಿ ಕಂಡರೂ, ಬಳಿ ಸಾರಿದಾಗ ಅದು ಅತಿ ಸೂಕ್ಷ್ಮವಾದ ಕುಸುರಿ ಕೆಲಸದ ಹಂದರವಾಗಿರುತ್ತದೆ. ಆ ಕ್ರಿಯೆಯ ಹಿನ್ನೆಲೆಯ ಮೇಧಾವಿತನವನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ತನ್ನ ಮೇಧಾವಿತನದ ಬಗ್ಗೆ ಡಿಕನ್ಸ್‌ಗೆ ನಂಬಿಕೆ ಇತ್ತು. ತನ್ನ ಪ್ರಕಾಶಕರೊಂದಿಗೆ ವ್ಯವಹರಿಸುವಾಗ, ಪುಸ್ತಕದ ಬಗೆಗಿನ ಸಂಪಾದನೆಯಲ್ಲಿ ಆ ಕೃತಿಯನ್ನು ರಚಿಸಿದ ಮೇಧಾವಿಗೆ ಅದರ ಸಿಂಹಪಾಲು ಸಿಗಬೇಕೆಂದು ಒತ್ತಾಯ ಪಡಿಸುತ್ತಿದ್ದ. ಇದರಿಂದಾತ ಶ್ರೀಮಂತನಾದ. ಅವನು ಸತ್ತಾಗ ಅವನ ಹೆಸರಿನಲ್ಲಿ ೯೩,೦೦೦ ಪೌಂಡು ಬೆಲೆಯ ತೋಟವಿತ್ತು. ಆ ಶ್ರೀಮಂತಿಕೆ ಅವನನ್ನು ಸ್ವಾಭಿಮಾನದ ಗೆರೆಯನ್ನು ಮೀರಿ, ದುರಹಂಕಾರದತ್ತ ನಡೆಯುವಂತೆ ಮಾಡಲಿಲ್ಲ.

ಶ್ರೀಮಂತನಾಗಿ ಅಂತಾರಾಷ್ಟ್ರೀಯ ಪ್ರಮುಖವ್ಯಕ್ತಿ ಎನಿಸಿ, ಅನೇಕ ನೌಕರರು ತೋಟ ಇತ್ಯಾದಿ ಆಸ್ತಿ ಹೊಂದಿದರೂ, ತನ್ನ ಬಡತನದ ಬವಣೆಯ ಜೀವನ ಮಾತ್ರ ಅವನ ಮನಸಿನಾಳದಿಂದ ಮರೆಯಾಗಲಿಲ್ಲ. ಜೀವನದ ಕೊನೆಯವರೆಗೂ ಅಧಿಕಾರಶಾಹಿಯ ವಿರುದ್ಧ ಹೋರಾಡುವುದನ್ನು ನಿಲ್ಲಿಸಲಿಲ್ಲ. ಬಡವರು ನ್ಯಾಯಾಲಯದಲ್ಲಿ, ಕೊಳೆಗೇರಿಯಲ್ಲಿ, ಕಾರಾಗೃಹಗಳಲ್ಲಿ ಹಾಗೂ ವಿಕ್ಟೋರಿಯನ್ ಕಾಲದ ಇಂಗ್ಲೆಂಡಿನಲ್ಲಿ ಪಡುವ ಕೋಟಲೆಗಳ ವಿರುದ್ಧ ಹೋರಾಡಿದ.

ಡಿಕನ್ಸ್‌ನ ಜೀವನ ಹಾಗೂ ಬರವಣಿಗೆಗಳ ಮೂಲಕ ಹಾದುಹೋಗುವ ಏಕೈಕ ಖಾಸಗಿ ಗುಣವೆಂದರೆ, ನಿಜಕ್ಕೂ ಆ ವ್ಯಕ್ತಿಯ ಮೂಲಭೂತ ಸಭ್ಯತೆ ಅರಿಯದ ಬರಹಗಾರರು ತಮ್ಮ ಕೃತಿಗಳನ್ನು ಅವನಿಗೆ ವಿಮರ್ಶಿಸಲು ಕಳಿಸಿದಾಗ, ಅದನ್ನು ಕೂಲಂಕಷವಾಗಿ ಓದಿ, ವಿಮರ್ಶಿಸುತ್ತಿದ್ದ. ಪ್ರತಿಭಾಶಾಲಿಗಳಾದ ಬರಹಗಾರರನ್ನು ಗುರುತಿಸಿದಾಗ, ಅವರಿಗೆ ಸಾಕಷ್ಟು ಪ್ರೋತ್ಸಾಹ ಕೊಡಲು ಅವರ ಕೃತಿಗಳನ್ನು ಮುಂದೆ ತರಲು ಶ್ರಮಿಸುತ್ತಿದ್ದ. ಒಮ್ಮೆ ಹಳೆಯ ಸೇವಕನೊಬ್ಬ ತನ್ನ ಮನೆಯಲ್ಲೇ ಕಳ್ಳತನ ಮಾಡುತ್ತಿದ್ದುದು ಗೊತ್ತಾದಾಗ, ಅವನಿಗೆ ಶಿಕ್ಷೆಯಾದರೆ ಮತ್ತೊಮ್ಮೆ ಎಲ್ಲಿಯೂ ಕೆಲಸ ಸಿಗಲಾರದೆಂದು ತಿಳಿದಿದ್ದ ಡಿಕನ್ಸ್ ಅವನನ್ನು ಕ್ಷಮಿಸಿದ್ದಲ್ಲದೆ, ಅವನನ್ನೊಂದು ಸಣ್ಣ ವ್ಯಾಪಾರಕ್ಕೆ ಹಚ್ಚಿದ.

ಅಷ್ಟೊಂದು ಮಾನವೀಯತೆಯನ್ನು ಮೈಗೂಡಿಸಿಕೊಂಡಿದ್ದ ಡಿಕನ್ಸ್ ಅಷ್ಟೇ

ಕಠಿಣವಾಗಿಯೂ, ಮೂರ್ಖನಂತೆಯೂ ವರ್ತಿಸಬಲ್ಲವನಾಗಿದ್ದ. ತನ್ನ ವಿಮರ್ಶಕರು ಪ್ರಕಾಶಕರನ್ನು ಬಹಿರಂಗವಾಗಿಯೇ ತೆಗಳಲು ಹಿಂಜರಿಯುತ್ತಿರಲಿಲ್ಲ. ಮದುವೆಯಾದ ೨೨ ವರ್ಷಗಳನಂತರ, ತನ್ನ ೪೬ ನೆ ವಯಸ್ಸಿನಲ್ಲಿ, ೧೯ ವರ್ಷದ ನಟಿ ಎಲೆನ್ ಟೆರ್ನನ್‌ಳಿಂದ ಆಕರ್ಷಿತನಾಗಿ, ಹತ್ತು ಮಕ್ಕಳ ತಾಯಿಯಾಗಿದ್ದ ತನ್ನ ಹೆಂಡತಿ ಕೇಟಳಿಂದ ದೂರವಾದ. ಕೇಟಳಿಂದ ದೂರಾಗಿದ್ದು, ಅವಳ ತಂಗಿಯ ಮೇಲಿನ ಆಕರ್ಷಣೆಯಿಂದ ಎಂಬ ಗುಲ್ಲುಹಬ್ಬಿತು. (ಟೆರ್ನನ್ ಮತ್ತು ಡಿಕನ್ಸ್ ಪ್ರೇಮ ಪ್ರಕರಣ ೧೯೩೦ ನಂತರವೇ ಬೆಳಕಿಗೆ ಬಂದುದು.) ತನ್ನ ಬಗ್ಗೆ ಮಾತಾಡಿದವರೆಲ್ಲರನ್ನೂ ಡಿಕನ್ಸ್ ಹಿಯಾಳಿಸಿ ಬರೆದಾಗ ಉರಿವ ಬೆಂಕಿಗೆ ತುಪ್ಪ ಹುಯ್ದಂತೆ ಅನೇಕ ಹಳೆಯ ಸ್ನೇಹಿತರೊಂದಿಗೆ ಮನಸ್ತಾಪಕ್ಕೆ ಎಡೆಕೊಟ್ಟಿತು ಈ ಪ್ರಕರಣ.

ಡಿಕನ್ಸ್‌ನ ಕಷ್ಟದ ದಿನಗಳು ಪ್ರಾರಂಭವಾದವು. ಅವನ ಅತಿ ದೊಡ್ಡ ಜಗಳ ಶುರುವಾದ್ದು ಅಮೇರಿಕಾದೊಂದಿಗೆ. ೧೮೪೨ ರಲ್ಲಿ ಡಿಕನ್ಸ್ ಅಮೇರಿಕಾಕ್ಕೆ ಉಪನ್ಯಾಸ ಪ್ರವಾಸ ಕೈಕೊಂಡಾಗ ಅಲ್ಲಿ ಕಂಡ ಪರಿಸ್ಥಿತಿ ಅವನನ್ನು ಎದೆಗೆಡಿಸಿತು. ಅವನು ಹೋದಲ್ಲೆಲ್ಲಾ ಹಿಂಬಾಲಿಸುವ ಗುಂಪು, ಅವನ ನೆನಪಿಗಾಗಿ ಇಟ್ಟುಕೊಳ್ಳಲು ತೊಟ್ಟ ಅವನ ಕೋಟನ್ನೇ ಚಿಂದಿಮಾಡಿತು. ಅವನ ಮೇಜಿನ ಸುತ್ತ ನಿಂತು ಅವನು ಊಟ ಮಾಡುವುದನ್ನೇ ನೋಡುತ್ತ, ಗಂಡ ಹೆಂಡತಿಯರು ತಂಗಿದ್ದ ರೂಮಿನೊಳಗೆ ಇಣುಕುತ್ತ ಅವನನ್ನು ಕಂಗೆಡಿಸಿದರು. ತನ್ನ ಪುಸ್ತಕಗಳಿಗೆ ಗೌರವಧನ ಕೊಡದೆ ಪ್ರಕಟಪಡಿಸಿದ ಅಮೇರಿಕಾವನ್ನು ಖಂಡಿಸಿದಾಗ, ಪತ್ರಕರ್ತರು ಅವನ ಹೇಳಿಕೆಯನ್ನು ತಿರುಗುಮುರುಗಾಗಿಸಿ, ಹಣ ಸುಲಿಗೆ ಮಾಡುವವನೆಂದು, ಅವನ ಮೇಲೆ ಅಪಾದನೆ ಹೊರಿಸಿದರು.

ಇಂಗ್ಲೆಂಡಿಗೆ ಹಿಂತಿರುಗಿ, ಸಾಲುಸಾಲಾಗಿ, ಅನೇಕ ಲೇಖನಗಳನ್ನು ತನ್ನ ಅಮೇರಿಕಾ ಪ್ರವಾಸದ ಬಗ್ಗೆ ಬರೆದು, ಅಮೇರಿಕಾವನ್ನು ತೀಕ್ಷ್ಣವಾಗಿ ಖಂಡಿಸಿದ್ದಲ್ಲದೆ 'ಮಾರ್ಟಿನ್ ಚಜ್ಲೆವಿಟ್'' ಎಂಬ ಕಾದಂಬರಿಯನ್ನೇ ಬರೆದು ಅದರ ಮೂಲಕ ಅಮೇರಿಕಾವನ್ನು ತೀವ್ರವಾಗಿ ಜರೆದ.

ಈ ಜಗಳ ಎಷ್ಟು ತೀವ್ರವಾಗಿತ್ತೆಂದರೆ, ಕಾಲು ಶತಮಾನದ ನಂತರ ಅಮೆರಿಕನ್ನರು ಡಿಕನ್ಸ್‌ನನ್ನು ಮತ್ತೊಮ್ಮೆ ಉಪನ್ಯಾಸ ಪ್ರವಾಸಕ್ಕಾಗಿ ಆಹ್ವಾನಿಸಿದಾಗ ತನ್ನನ್ನು ಶತ್ರುವಂತೆಯೋ, ಮಿತ್ರನಂತೆಯೋ ಹೇಗೆ ಬರಮಾಡಿಕೊಳ್ಳುತ್ತಾರೆಂದು ತಿಳಿದು ಬರಲು, ತನ್ನೊಬ್ಬ ಸ್ನೇಹಿತನನ್ನು ಮೊದಲು ಅಮೆರಿಕಾಕ್ಕೆ ಕಳಿಸಿದ ಡಿಕನ್ಸ್. ಡಿಕನ್ಸ್‌ನ ವಿಷಯದಲ್ಲಿ ಅಮೇರಿಕವೀಗ ಮೆದುವಾಗಿತ್ತು. ಡಿಕನ್ಸ್‌ನ ಪ್ರವಾಸ ಅದ್ಭುತ ಯಶಸ್ಸಿನ ಮೆರವಣಿಗೆಯಂತಿತ್ತು. ಡಿಕನ್ಸ್ ೨೦,೦೦೦ ಪೌಂಡುಗಳಷ್ಟು ಶ್ರೀಮಂತನಾಗಿ, ಐದು ತಿಂಗಳ ತನ್ನ ಅಮೇರಿಕಾ ಪ್ರವಾಸ ಮುಗಿಸಿ, ಮನೆಗೆ ಮರಳಿದ.

ಮಿತಿಮೀರಿದ ಕೆಲಸದಿಂದ ಡಿಕನ್ಸ್ ೧೮೭೦ ರಲ್ಲಿ ನಿಧನವಾದಾಗ ಅವನಿಗಿನ್ನು ಕೇವಲ ೫೮ ವರ್ಷ. ವೀಕ್ಷಕರ ಅಭಿಪ್ರಾಯದಂತೆ, ಡಿಕನ್ಸ್ ತಿಳಿದೂ ತಿಳಿದೂ ತನ್ನ ಸಾವಿಗೆ ತಾನೇ ಕಾರಣನಾದ. ಸುಖವಿಲ್ಲದ

ಸಂಸಾರ ಒಂದೆಡೆಯಾದರೆ ಸಮಾಜದ ಅಸಮಾನತೆಯ ಬಗ್ಗೆ ಬೆಳೆಯುತ್ತಿದ್ದ ಅವನ ತಿರಸ್ಕಾರವೆರಡೂ ಅವನ ನಿಧಾನ ಆತ್ಮಹತ್ಯೆಗೆ ಕಾರಣವಾಯ್ತು. ಕಾರಣ ವೇನೇ ಇರಲಿ, ಬ್ರಿಟಿಷರಿಗಂತೂ ಅದು ತುಂಬಲಾರದ ನಷ್ಟ. ಸರಳ ಅಂತ್ಯಕ್ರಿಯೆ ಯಾಗಬೇಕೆಂದು ವ್ಯಕ್ತಪಡಿಸಿದ ಅವನ ಅಂತಿಮ ಇಚ್ಛೆಗೆ ವಿರೋಧವಾಗಿ, ಅವನ ಶವವನ್ನು ವೆಸ್ಟ್ ಮಿನಿಸ್ಟರ್ ಅಬೆಯಲ್ಲಿಟ್ಟು, ಮೂರು ದಿನಗಳ ಕಾಲ ಅವನ ಅಂತಿಮ ದರ್ಶನಕ್ಕಾಗಿ ಶವಪೆಟ್ಟಿಗೆಯನ್ನು ತೆರೆದ ಸಮಾಧಿಯಲ್ಲಿಟ್ಟಾಗ, ಸಾವಿರಾರು ಜನ ಅವನ ಅಂತಿಮ ದರ್ಶನ ಪಡೆದಾಗ ಅವರಿಗೆ ತಿಳಿದಿತ್ತು, "ಇಂಥ ಬರಹಗಾರ ಹಿಂದೆ ಹುಟ್ಟಿಲ್ಲ, ಮುಂದೆ ಹುಟ್ಟುವುದಿಲ್ಲ" ಎಂದು!



"ನಮ್ಮ ನಮ್ಮ ಆಶೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ನಾವು ಮಗ್ನರಾದರೆ ದೇಶ ಹೇಗೆ ಮುಂದುವರಿದೀತು. ದೇಶದ ಅವನತಿಗೆ ನಾವೇ ಹೊಣೆಗಾರರು ಎಂಬುದನ್ನು ಯಾರೂ ಮರೆಯಬಾರದು."

"ದೇಶ ಪ್ರೇಮ ಹುಚ್ಚು ಹೊನಲಾಗಿ ಪ್ರವಹಿಸಬೇಕು! ಅದು ನಮ್ಮ ನರನಾಡಿಯನ್ನು ಕಾವೇರಿಸಬೇಕು! ದೇಹವನ್ನು ತ್ಯಜಿಸುವಂಥ ಸಂಕಲ್ಪಕ್ಕೆ ಅದು ಕಾರಣವಾಗಬೇಕು. ಈ ಸಮರ್ಪಣ ಬುದ್ಧಿಯಿಂದ ನಾವು ದೇಶ ಸೇವೆಗೆ ಸಿದ್ಧರಾದರೆ ಪ್ರಪಂಚದ ಯಾವ ಸಾಮ್ರಾಜ್ಯವೂ ನಮ್ಮನ್ನು ತುಳಿಯಲಾರದು."

—ಗೋಪಾಲಕೃಷ್ಣ ಗೋಖಲೆ

ಕೊರತೆಯ ಕಾಯಿಲೆಗಳು

ಡಾ|| ಕರವೀರಪ್ರಭು ಕ್ಯಾಲಕೊಂಡ
೨೦೪, ಶಸ್ತ್ರಚಿಕಿತ್ಸಾ ವಿಭಾಗ, ಕೆ.ಎಂ.ಸಿ ಆಸ್ಪತ್ರೆ
ಹುಬ್ಬಳ್ಳಿ-೫೮೦೦೨೨

ದೇಹದ ಬೆಳವಣಿಗೆಗೆ, ಉತ್ತಮ ಆರೋಗ್ಯಕ್ಕೆ ಬೇಕಾಗುವ ಅವಶ್ಯಕ ವಸ್ತುಗಳಲ್ಲಿ ಆಹಾರವೂ ಒಂದು. ಆದರೆ ವಿವಿಧ ಸಮಾಜಗಳು ತಮ್ಮ ಬಡತನ, ಅಜ್ಞಾನ ಮತ್ತು ಮೂಢನಂಬಿಕೆಯಿಂದಾಗಿ ತಮ್ಮ ಮಕ್ಕಳಿಗೆ ಸೂಕ್ತ ಆಹಾರವನ್ನು ನೀಡದೇ ಅವರಿಗೆ ದೈಹಿಕವಾದ ಅನೇಕ ತೊಂದರೆಗಳನ್ನು ತಂದಿವೆ. ಹಿಂದುಳಿದ ಅನೇಕ ದೇಶಗಳಲ್ಲಿ ವಿದ್ಯಾವಂತರು, ಸುಶಿಕ್ಷಿತರು ಎನ್ನುವವರಿಗೇ ಸಮತೋಲನವಾದ ಆಹಾರ ಮತ್ತು ಅದರ ಅವಶ್ಯಕತೆಯ ಬಗ್ಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಆಹಾರದಲ್ಲಿಯ ಪೌಷ್ಟಿಕಾಂಶ ನಾಶವಾಗದಂತೆ ಸಿದ್ಧಪಡಿಸುವುದು, ಕಾಯ್ದಿಡುವುದು, ರೋಗ ತರುವ ಕ್ರಿಮಿಗಳಿಂದ ಸಂರಕ್ಷಿಸುವುದು ಮತ್ತು ಅದನ್ನು ಸೂಕ್ತ ರೀತಿಯಲ್ಲಿ, ಪ್ರಮಾಣದಲ್ಲಿ ಸಮಯಕ್ಕನುಸಾರವಾಗಿ ತಿನಿಸುವುದು ಅನೇಕರಿಗೆ ಗೊತ್ತಿಯದು.

ಉತ್ತಮ ಆಹಾರವೆಂದರೆ ದುಬಾರಿ ವೆಚ್ಚದ ಆಹಾರವೆಂಬ ಭಾವನೆ ಜನರಿಗೆ ಇದೆ. ಆದರೆ ಉತ್ತಮ ಆಹಾರ – ಸಮತೋಲನವಾದ ಆಹಾರ: ದೇಹಕ್ಕೆ ಬೇಕಾಗಿರುವ ಕೊಬ್ಬು, ಪಿಷ್ಟಪದಾರ್ಥ, ಜೀವಸತ್ವಗಳು, ಲವಣಾಂಶಗಳು ಇರುವ ಆಹಾರ. ಕೆಲವು ಪದಾರ್ಥಗಳಲ್ಲಿ ಕಡಿಮೆ ಅಥವಾ ಏನೂ ಇಲ್ಲದೇ ಇರಬಹುದು. ಆದ್ದರಿಂದ ಇವು ಎಲ್ಲಿವೆ! ಎಷ್ಟಿವೆ, ಯಾವ ರೂಪದಲ್ಲಿವೆ ಎಂಬುದನ್ನು ತಿಳಿದು ಅಂತಹ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ದೇಹಕ್ಕೆ ಬೇಕಾದ ಆವಶ್ಯಕ ವಸ್ತುಗಳನ್ನು ಪಡೆಯಬಹುದು. ಆದರೆ ಇದಾವುದನ್ನೂ ತಿಳಿಯದೆ ತಮ್ಮದೇ ಆದ ಮೂಢನಂಬಿಕೆ ಕೃತಕ ಘನತೆ ಮುಂತಾದವುಗಳಿಂದ ಪಾಲಕರು ತಪ್ಪು ಆಹಾರಗಳನ್ನು ತಿನ್ನುತ್ತಾರೆ ಮತ್ತು ಮಕ್ಕಳಿಗೂ ತಿನಿಸುತ್ತಾರೆ. ಇದರಿಂದಾಗಿ ಅದೆಷ್ಟೋ ಸಂದರ್ಭದಲ್ಲಿ ಯೋಗ್ಯವಾಗಿ ಒದಗಿಸದೇ ಇದ್ದ ಆಹಾರ ಜೀವಕ್ಕೆ ತೊಂದರೆಯನ್ನು ತರಬಹುದು ಅಥವಾ ಅಂಗವಿಕಲತೆಯನ್ನು ಬಳುವಳಿಯಾಗಿ ನೀಡಬಹುದು. ಕೊರತೆಯ ಕಾಯಿಲೆಗಳು ಸಾಕಷ್ಟಿದ್ದು ಮಕ್ಕಳಿಗೆ ಮಾರಕವಾದವುಗಳು. ನ್ಯೂನ ಪೋಷಣೆ ಮತ್ತು 'ಎ' ಜೀವಸತ್ವದ ಕೊರತೆಯಿಂದ ತಲೆದೋರಬಹುದಾದ ರೋಗಗಳು :

ಲಕ್ಷ್ಮಮ್ಮ ದಿನಗೂಲಿಯಿಂದಲೆ ಜೀವನ ಸಾಗಿಸುವ ಹಳ್ಳಿಗಾಡಿನ ಹೆಂಗಸು, ತನ್ನ ಹತ್ತು ವರ್ಷಗಳ ದಾಂಪತ್ಯಜೀವನದಲ್ಲಿ ಆಕೆ ಪಡೆದುದು ಹೆಣ್ಣುಗೂಸೊಂದನ್ನು ಮಾತ್ರ. ಕಂದನನ್ನು ಅತಿ ಮುದ್ದಿನಿಂದ ಸಾಕಿ ಸಲಹತೊಡಗಿದ ಆಕೆ ಮಗುವಿನ ಶ್ರೇಯೋಭಿವೃದ್ಧಿಗಾಗಿ ಏನನ್ನು ತ್ಯಜಿಸಲೂ ಸಿದ್ಧಳಾಗಿದ್ದಳು. ಎರಡನೇ ಹುಟ್ಟುಹಬ್ಬದ ದಿನ ಸಮೀಪಿಸುತ್ತಿದೆಯೆಂದಾಗ ತನ್ನ ಕಂದನ ಕೈಕಾಲು ಮುಖವೆಲ್ಲ ಉಬ್ಬಿಕೊಳ್ಳಲಾರಂಭಿಸಿದವು. ಲಕ್ಷ್ಮಮ್ಮನಿಗೆ ಆಶ್ಚರ್ಯ ಜೊತೆಗೆ ಸಂತೋಷ ಬೇರೆ. ತನ್ನ ಎದೆ ಹಾಲು ಮಾತ್ರವನ್ನೇ ಇತ್ತು ಅತಿ ಮುದ್ದಿನಿಂದ ಮಗುವನ್ನು ಸಾಕಿದುದರಿಂದ ಎಷ್ಟು ಬೇಗನೇ ಉಬ್ಬಿಕೊಂಡು ಬೆಳೆಯುತ್ತಿದೆಯಲ್ಲಾ! ಹುಟ್ಟಿದ ಹಬ್ಬದ ದಿನ ಮೈತುಂಬಿ ಬೆಳೆದ ಮಗುವನ್ನು ಕಂಡು ಬಡ ನೆಂಟರಿಷ್ಟರು ಅದೆಷ್ಟು ಹಿಗ್ಗಲಿಕ್ಕಿಲ್ಲ? ಎಂಬೀ ಸಂತಸ ಅವಳಲ್ಲಿ. ತನ್ನ ಒಡೆಯರ ಮನೆಯ ಮಗು ಅಪಾರ ಶಕ್ತಿಯುತವಾದ ಔಷಧೋಪಚಾರಗಳಿಂದ ಸಲಹಲ್ಪಟ್ಟಾಗ್ಯೂ ಇಷ್ಟೊಂದು ಉಬ್ಬಿಕೊಂಡಿಲ್ಲವಲ್ಲಾ! ಎಂಬುದು ಅವಳಲ್ಲಿ ಉಂಟಾದ ಆಶ್ಚರ್ಯ. ದಿನ ಕಳೆದಂತೆ ಅವಳ ಸಂತೋಷ ಇಳಿಯತೊಡಗಿತು. ಮಗು ಅನಿಯಂತ್ರಿತ ಭೇದಿಯಿಂದ ನರಳಲಾರಂಭಿಸಿತು, ಎದೆಹಾಲನ್ನೂ ಸರಿಯಾಗಿ ಸವಿಯದಾಯಿತು. ದೇಹ ತುಂಬಿಕೊಳ್ಳುತ್ತಲೇ ಇದ್ದುದರಿಂದ ಮಗು 'ಡುಮ್ಮಿ' ಎನಿಸಿಕೊಳ್ಳತೊಡಗಿತು. ಸಂಶಯ ಪಿಶಾಚಿ ಹಿಡಿದ ಆಕೆ ವೈದ್ಯರ ಬಳಿ ಬಂದಾಗ ತಿಳಿದ ವಿಚಾರವಿದು:—ಮಗುವಿಗೆ ಕ್ವಾಷಿಯಾರ್ಕರ್ ರೋಗ (ಊತರೋಗ) ಬಂದಿದೆ ಎಂದು.

ಊತರೋಗ:

ಮಕ್ಕಳ ಆಸ್ಪತ್ರೆಗೆ ಸೇರಿಕೊಳ್ಳುವ ಶೇ|| ೨೦ರಷ್ಟು ಊತರೋಗಿಗಳಾಗಿರುತ್ತಾರೆ. ಹುಟ್ಟಿದ ನಾಲ್ಕು ತಿಂಗಳುಗಳಿಂದ ೫ ವರ್ಷಗಳೊಳಗೆ ಈ ಕಾಯಿಲೆಗೆ ಮಗು ಬಲಿ ಬೀಳಬಹುದು. ನಮ್ಮ ದೇಶದಲ್ಲಿ ಸರ್ವೇಸಾಮಾನ್ಯವಾಗಿ ೩ ರಿಂದ ೫ ವರ್ಷಗಳ ಒಳಗೆ ಈ ಕಾಯಿಲೆ ಕಂಡು ಬರುತ್ತದೆ.

ಸಾಮಾನ್ಯರ ಅಭಿಪ್ರಾಯದಲ್ಲಿ ಕಾಯಿಲೆ ಬಿದ್ದಾಗ ದೇಹ ವಿಪರೀತ ಸೊರಗಿಕೊಂಡಿದ್ದು ಶಕ್ತಿಹೀನತೆಯಿಂದಾಗಿ ನರಳುವ ಚಿತ್ರ ಕಣ್ಣ ಮುಂದೆ ಬರುತ್ತದಲ್ಲವೇ? ಆದರೆ ಊತರೋಗ ಮಕ್ಕಳ ಮಾರಕ ರೋಗವಾದಾಗ್ಯೂ ಇಲ್ಲಿ ದೇಹ ಕೃಶವಾಗುತ್ತ ಹೋಗುವುದಿಲ್ಲ. ಮಗುವಿನ ಕೈಕಾಲು, ಮುಖ, ಹೊಟ್ಟೆ ಇವೆಲ್ಲಾ ಊದಿಕೊಂಡು ಪ್ರಥಮ ನೋಟಕ್ಕೆ ದಪ್ಪನಾಗಿಯೇ ಕಾಣಿಸುತ್ತದೆ. ಮನೆಯಲ್ಲಿರುವ ಅಜ್ಜ ಈ ಮಗುವನ್ನು ನೋಡಿ, "ಅದೆಷ್ಟು ಮುದ್ದಾಗಿ, ದುಂಡಗಾಗಿ ಬೆಳೆದಿದೆ" ಎಂದು ಹರ್ಷಪಟ್ಟರೂ, ವೈದ್ಯರ ಬಳಿ ಬಂದಾಗಲೇ ಇದು ರೋಗದ ಚಿಹ್ನೆಯೆಂಬುದು ತಿಳಿದು ಬಂದು ಕಂಗಾಲಾಗುವುದು.

ಈ ರೋಗ ಒಂದೇ ಸಮನೆ ಕಂಡು ಬರುವಂತದ್ದಲ್ಲ, ಬಹಳ ವಾರಗಳ ಅಥವಾ ತಿಂಗಳುಗಳ ನಂತರ ಕ್ರಮೇಣ ಅಂಗಾಂಗಗಳಲ್ಲಿ ನೀರು ತುಂಬಿಕೊಳ್ಳುತ್ತಾ ಹೋಗಿ ಮಗುವು ದಪ್ಪವಾಗಿ ಕಂಡುಬರುವುದು. ಕ್ವಾಷಿಯಾರ್ಕರ್ (ಊತರೋಗ)

ರೋಗದ ಮೂರು ಮುಖ್ಯ ಲಕ್ಷಣಗಳಾವುವೆಂದರೆ: ೧. ಈ ರೀತಿ ಮೈ ಕೈ ಕಾಲು ಮುಖವೆಲ್ಲಾ ಊದಿಕೊಳ್ಳುವುದು. ೨. ಮಾನಸಿಕ ಅಸ್ವಸ್ಥತೆ—ಚಟುವಟಿಕೆ ಹೀನವಾದ ಮಗು ಸುತ್ತಣ ಪ್ರಪಂಚದಲ್ಲಿ ಆಸಕ್ತಿ ತೋರಿಸದೆ 'ವೈರಾಗ್ಯ ಭಾವ' ಪ್ರದರ್ಶಿಸುವುದು. ೩. ದೈಹಿಕ ಬೆಳವಣಿಗೆ ಕುಂಠಿತಗೊಳ್ಳುವುದು.

ತಾಯಿಯ ದೂರು:

ಮೊದಮೊದಲು ಹಾಲುಣಿಸಿದ ಕೂಡಲೇ ಮಗುವು ಭೇದಿ ಮಾಡಲಾರಂಭಿಸುತ್ತದೆ. ಪ್ರಥಮ ದಿನ ೨-೩ ಬಾರಿ ನೀರು ಕಕ್ಕಸು ಹೋದರೆ ಮುಂದೆ ದಿನಕ್ಕೆ ಅನೇಕ ಬಾರಿ ಪಾಯಿಖಾನೆ ನೀರು ನೀರಾಗಿ ಹೋಗಲಾರಂಭಿಸಿ ಕ್ರಮೇಣ ಮಗುವು ಸೊರಗಿ ಹೋಗುವ ಬದಲು ಕೈ ಕಾಲು ಮುಖ ಉಬ್ಬಿಕೊಂಡು ತುಂಬಿ ಬಂದಂತೆ ತೋರುವುದು. ಇದು ಆರೋಗ್ಯದ ಲಕ್ಷಣವೆಂದು ಎಂಥ ತಾಯಿಯೂ ತಿಳಿದು ಮೋಸ ಹೋಗದೆ ಇಲ್ಲ. ಆದರೆ ಮೊದಲು ಆಟದ ಸಾಮಗ್ರಿಗಳನ್ನು ಕಂಡಾಕ್ಷಣ ನೆಗೆದು ಓಡಿ ಬರುವ ಮಗುವಿನೆದುರು ಈಗ ಏನನ್ನೇ ಇಟ್ಟರೂ ಅದರಲ್ಲಾಸಕ್ತಿ ಈ ಮಗುವಿಗೆ ಇಲ್ಲವಾಗಿದೆ. ಕಾಯಿಲೆ ತೀವ್ರವಾದಂತೆ ಬಾಹ್ಯ ಪರಿಸರದ ಗೋಜಿಗೇ ಈ ಮಗುವು ಹೋಗದು. ಜೊತೆಗೆ ಆಹಾರ ಸೇವನೆಯನ್ನೂ ನಿಲ್ಲಿಸತೊಡಗುವುದು.

ರೋಗದ ಇತರ ಲಕ್ಷಣಗಳು:

ಸಸಾರಜನಕ (ಪ್ರೋಟೀನ್) ದೇಹದ ಸ್ನಾಯುಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಕೊರತೆಯಿಂದಾಗಿಯೇ ಕ್ವಾಷಿಯಾರ್ಕರ್ ರೋಗ ಕಂಡು ಬರುವುದು. ಆದುದರಿಂದ ಮಾಂಸಖಂಡಗಳೆಲ್ಲಾ ಎಂದಿನ ಬಲವನ್ನು ಕಳೆದುಕೊಂಡು ಮಗುವಿನ ದೇಹದಾರ್ಢ್ಯತೆ ಕುಗ್ಗಿ ಹೋಗಿರುವುದು.

ಶೇ|| ೪೦ ರಷ್ಟು ಕ್ವಾಷಿಯಾರ್ಕರ್ ಮಕ್ಕಳ ಚರ್ಮದಲ್ಲಿ ವಿಧವಿಧದ ಬದಲಾವಣೆ ಕಂಡು ಬರುತ್ತದೆ. ಪೈಂಟ್ ಬಳಿದ ಜಾಗದಲ್ಲಿ ಪೈಂಟ್ ಒಣಗಿದ ಮೇಲೆ ಅದು ಚೂರು ಚೂರಾಗಿ ಎಡೆದು ಬರುವಂತಿದ್ದರೆ ಹೇಗೆ ತೋರುತ್ತದೋ ಅದೇ ರೀತಿಯಲ್ಲಿ ಮೊಣಕೈ, ಮೊಣಕಾಲುಗಳ ಗಂಟು ಪ್ರದೇಶದಲ್ಲಿ ಬುಜದ ಎಲುಬಿನ ಜಾಗದಲ್ಲಿ ಚರ್ಮ ಬಿರುಕು ಬಿಟ್ಟು ಪದರುಪದರಾಗಿ ಎದ್ದು ಬರುವಂತಿರುತ್ತದೆ. ಕೆಲವೊಮ್ಮೆ ಕೈಕಾಲುಗಳ ಚರ್ಮ ಒಣಗಿಕೊಂಡು, ಕಾಂತಿಹೀನವಾಗಿದ್ದು ಸಂಪೂರ್ಣ ಬಿರುಕು ಬಿರುಕಾಗಿ ಒಡೆದಿರುತ್ತದೆ. ಕಿವಿಯ ಹಿಂಭಾಗದಲ್ಲಿ, ಮೊಣಕೈ ಮೊಣಕಾಲು ಹಾಗೂ ಸೊಂಟದಲ್ಲಿ ತೀವ್ರ ಆಳಕ್ಕೆ ಹೋದ ಸರಿಗೆಯೂ ಇರಬಹುದು. ರೋಮಕೂಪದ ಸುತ್ತ ಸೂಕ್ಷ್ಮ ರೀತಿಯಲ್ಲಿ ರಕ್ತಸ್ರಾವವಾಗುವುದರಿಂದಾಗಿ ಅಲ್ಲಲ್ಲಿ ಚಿಕ್ಕ ಚಿಕ್ಕ ಕೆಂಪು ಚುಕ್ಕೆಗಳೂ ಚರ್ಮದಲ್ಲಿ ಕಂಡು ಬರಬಹುದು, 'ಬಿ' ಅನ್ನಾಂಗದ ಕೊರತೆಯಿಂದಾಗಿ ಬಾಯಿಯ ಸುತ್ತಲೂ ಹುಣ್ಣು ಉಂಟಾಗಿರಬಹುದು. 'ಎ' ಅನ್ನಾಂಗದ ಕೊರತೆಯಿಂದಾಗಿ ಕಣ್ಣಿನ ಕಪ್ಪು ಗುಡ್ಡೆ ಮಸುಕು ಮಸುಕಾಗಿ ಮಾರ್ಪಡುವುದೇ ಈ ದಿಶೆಯಲ್ಲಿ ಹೆಚ್ಚು

ಇರುಳುಗಣ್ಣೂ ಹಾಗಾಗಿ ಹೆಚ್ಚಿನಂಶ ಕಂಡುಬಾರದೆ ಇಲ್ಲ. ಅಂದರೆ ರಾತ್ರಿ ಹೊತ್ತು ಮಗುವಿಗೆ ದೃಷ್ಟಿ ಚೆನ್ನಾಗಿರದೆ ತುಂಬಾ ತಡಕಾಡುತ್ತಿರುವುದು. ಮೂಳೆಗಳ ಬೆಳವಣಿಗೆ ಹೇಗೂ ಕುಂಠಿತವಾಗಿರುವುದರಿಂದಾಗಿ 'ಸಿ' ಮತ್ತು 'ಡಿ' ಅನ್ನಾಂಗಗಳ ಕೊರತೆ ಮಾತ್ರ ಎಂದೆಂದಿಗೂ ಕಂಡುಬರುವುದಿಲ್ಲ.

ದೇಹದ ಪ್ರತಿರೋಧಕ ಶಕ್ತಿ ಸ್ವಾಭಾವಿಕವಾಗಿಯೇ ಕಡಿಮೆಯಾಗಿರುವುದರಿಂದಾಗಿ ಪದೇ ಪದೇ ಕೆಮ್ಮು, ಜ್ವರ, ವಾಂತಿ–ಭೇದಿ ಮುಂತಾದವೂ ಈ ಮಕ್ಕಳಲ್ಲಿ ಸ್ವಾಭಾವಿಕವೇ. ನ್ಯೂಮೋನಿಯಾ, ಕ್ಷಯ ರೋಗವೇ ಮೊದಲಾದ ಕಾಯಿಲೆಗಳೂ ಕಂಡು ಬರಬಹುದು, ಕ್ವಾಷಿಯಾರ್ಕರ್ ಮಕ್ಕಳಲ್ಲಿ ತೀವ್ರ ತರದ ರಕ್ತಹೀನತೆಯಂತೂ ಬಹಳ ಅಪರೂಪ.

ಕ್ವಾಷಿಯಾರ್ಕರ್ ಎಂಬ ಶಬ್ದಕ್ಕೆ 'ಕೆಂಪು ಕೂದಲಿನ ಮಗು' ಎಂಬ ಅರ್ಥವಿದೆ. ತಲೆ ಕೂದಲಿನ ಕಪ್ಪು ಬಣ್ಣದ ಬದಲು ಕೆಂಪು ಅಥವಾ ಬೂದು ಬಣ್ಣ ಕಂಡು ಬರುತ್ತದೆ. ಕೂದಲಿನ ಆರೋಗ್ಯಕ್ಕೆ ಅವಶ್ಯವಾದ ಸಸಾರಜನಕದ ಕೊರತೆಯೇ ಈ ವ್ಯತ್ಯಾಸಕ್ಕೆ ಕಾರಣ. ತಲೆಯಲ್ಲಿ ಮುಂಚೆ ಸೊಂಪಾಗಿ ಕೂದಲು ಬೆಳೆದಿದ್ದರೆ ಕ್ವಾಷಿಯಾರ್ಕರ್‌ನಿಂದಾಗಿ ಅವೆಲ್ಲಾ ಬಿದ್ದು ಹೋಗಿ ಅಳಿದುಳಿದ ಕೆಲವೇ ಕೆಲವು ಕೂದಲುಗಳೂ ಉದುರುವುದರಿಂದ ಈ ರೋಗಿಗಳ ತಲೆ ಬೋಳಾಗಿಯೇ ಕಂಡು ಬರುತ್ತದೆ.

ಈ ಮಕ್ಕಳ ದೇಹ ಉಬ್ಬಿಕೊಂಡಿದ್ದರೂ ಇರಬೇಕಾದುದಕ್ಕಿಂತ ಅರ್ಧದಷ್ಟೇ ಅವುಗಳ ತೂಕವಿರುತ್ತದೆ. ದೇಹದ ಎತ್ತರವೂ ಸಾಮಾನ್ಯವಾಗಿರಬೇಕಾದಷ್ಟಿರದೆ ಗಿಡ್ಡವಾಗಿರುತ್ತದೆ. ಹೊಟ್ಟೆಯ ಪರೀಕ್ಷೆ ಮಾಡಿದಾಗ ಪಿತ್ತಕೋಶ ದೊಡ್ಡದಾಗಿರುವುದು ಕಂಡುಬರುತ್ತದೆ. ಕೊಬ್ಬಿನ ಕಣಗಳು ಶೇಖರಗೊಂಡು ದೊಡ್ಡದಾದ ಪಿತ್ತಕೋಶದ ಚಟುವಟಿಕೆಯಲ್ಲಿ ಬದಲಾವಣೆಯುಂಟಾಗಿಯೇ ಈ ಈ ಮಕ್ಕಳಲ್ಲಿ ಭೇದಿ ಪ್ರಾರಂಭವಾಗುವುದು.

ಕ್ವಾಷಿಯಾರ್ಕರ್ ಮಗುವಿನ ದೇಹದ ಊತಕ್ಕೆ ಜೀವಕಣಗಳ ನಡುವೆ ನೀರು ಸೇರಿರುವುದೇ ಕಾರಣ. ಈ ನೀರು ಸಂಗ್ರಹವಾಗಲು ಸ್ಪಷ್ಟಕಾರಣವೇನೆಂದು ತಿಳಿದು ಬಂದಿಲ್ಲವಾದರೂ ಪಿತ್ತಕೋಶದ ಚಟುವಟಿಕೆ ಅಸ್ತವ್ಯಸ್ತವಾಗುವುದರಿಂದ, ಸಾಮಾನ್ಯವಾಗಿ ಪಿತ್ತಕೋಶದಲ್ಲಿ ನಾಶ ಮಾಡಲ್ಪಡಬೇಕಾದ ವಿಸರ್ಜನೆಯ ಮೂತ್ರದ ಪ್ರಮಾಣದಲ್ಲಿ ಕಡಿತ ಉಂಟು ಮಾಡಬಲ್ಲ ಹಾರ್ಮೋನ್ ನಾಶಗೊಳ್ಳದೆ ಅದರಂಶ ರಕ್ತದಲ್ಲಿ ಅತಿಯಾಗಿರುವುದೂ ಒಂದು ಕಾರಣ.

ಕ್ವಾಷಿಯಾರ್ಕರ್ ಮಗುವನ್ನು ಕಾಳಿದಾಸನಂತಹ ಕವಿಗಳು ಹಿಂದೆ ಕಂಡಿದ್ದರೆ ಅದೆಷ್ಟು ಸುಂದರವಾಗಿ ವರ್ಣಿಸುತ್ತಿದ್ದರೋ! ಉಬ್ಬಿದ ಕೆನ್ನೆಗಳುಳ್ಳ, ಎವೆಗಳು ಮುಚ್ಚಲ್ಪಟ್ಟ ಕಣ್ಣುಗಳುಳ್ಳ ಈ ಕಂದ ಚಂದ್ರವದನನಾಗಿ ಕಂಡು ಬರುವುದಂತೂ ನಿಜವಲ್ಲವೇ?

ಕ್ವಾಷಿಯಾರ್ಕರ್ ಎಂಬ ಪದಕ್ಕೆ 'ಮೊಲೆ ತೊರೆಸಿದ ಮಗು' ಎಂಬ ಅರ್ಥವು ಇದೆ. ಹೊಸ ಮಗು ಹುಟ್ಟಿದ ಮೇಲೆ ಮೊದಲ ಮಗುವಿನ ಆರೈಕೆ ಸ್ವಲ್ಪ ಕಡಿಮೆಯಾಗಿ ಸಾಕಷ್ಟು ಆಹಾರ ಅದಕ್ಕೆ ದೊರಕದೆ ಅದು ಕ್ವಾಷಿಯಾರ್ಕರ್‌ಗೆ ಬಲಿಬೀಳಬಹುದು. ಇಲ್ಲವೇ ಕೊಳಚೆ ನಿವಾಸಿಗಳ, ದಿನಗೂಲಿಗಳ ಭಿಕ್ಷುಕರ ಮಕ್ಕಳಲ್ಲಿ ಆರ್ಥಿಕ ಸಮಸ್ಯೆಯೇ ದೊಡ್ಡದಾಗಿ ತನ್ಮೂಲಕ ದೈನಂದಿನ ಸಸಾರಜನಕದ ಪೂರೈಕೆಯಲ್ಲಿ ತೊಡಕುಂಟಾಗಬಹುದು.

ಮೊಲೆಯುಣಿಸುವಷ್ಟು ಕಾಲ ನಮ್ಮಲ್ಲಿ ಅನೇಕ ತಾಯಂದಿರು ಬೇರೇನೂ ಮಗುವಿಗೆ ಕೊಡುವುದಿಲ್ಲ. ಈ ರೀತಿ ಅಜ್ಞಾನ ಮತ್ತು ಮೂಢನಂಬಿಕೆಗಳಿಗೆ ತುತ್ತಾದ ತಾಯಂದಿರು ಮಕ್ಕಳಿಗೆ ಪೌಷ್ಟಿಕ ಆಹಾರಾಂಶಗಳ ಪೂರೈಕೆ ಮಾಡುವಲ್ಲಿ ವಿಫಲರಾಗುವುದರಿಂದಲೂ ಕ್ವಾಷಿಯಾರ್ಕರ್ ಬರಲು ಸಾಧ್ಯ.

ಮೂರು ವರ್ಷ ಮೀರಿದ ಕ್ವಾಷಿಯಾರ್ಕರ್ ಮಕ್ಕಳಲ್ಲಿ ಶ್ವಾಸಕೋಶದ ಕ್ಷಯವೂ ಕಂಡು ಬಂದಿದೆ. ಮೊದಲೇ ಜೀರ್ಣಗೊಂಡ ದೇಹ, ಮೇಲಾಗಿ ರೋಗಕ್ಕೊಳಗಾದಾಗ ಪರಿಣಾಮ ಭೀಕರವಾಗದೆ ಮತ್ತೇನು? ಆಮಶಂಕೆ, ದಢಾರ ಮುಂತಾದ ಕಾಯಿಲೆಗಳೂ ಕ್ವಾಷಿಯಾರ್ಕರ್ ಜೊತೆಗೆ ಕಂಡು ಬರಬಹುದು.

ಚಿಕಿತ್ಸೆ :

ಪೌಷ್ಟಿಕ ಆಹಾರ ಸೇವನೆಯೇ ಮುಖ್ಯವಾದುದು. ಒಂದು ಕೆ.ಜಿ. ತೂಕಕ್ಕೆ ಸುಮಾರು ೫ ಗ್ರಾಂ ಸಸಾರಜನಕ ಪ್ರತಿ ದಿನ ಈ ಮಕ್ಕಳಿಗೆ ಬೇಕಾಗುತ್ತದೆ. ಅಂದರೆ ಒಟ್ಟಿಗೆ ೫೦-೬೦ ಗ್ರಾಂಗಳಷ್ಟಾದರೂ ಸಸಾರಜನಕದ ದೈನಂದಿನ ಪೂರೈಕೆಯಾಗಲೇಬೇಕು. ತೊಗರಿ, ಕಡಲೆಕಾಯಿ ಬೀಜ ಮುಂತಾದ ದ್ವಿದಳ ಧಾನ್ಯಗಳು, ಕಾಯಿಸಿ ಕೆನೆತೆಗೆದ ಹಾಲು, ಸೊಪ್ಪು ತರಕಾರಿಗಳು, ಮಾಂಸ, ಮೊಟ್ಟೆ ಇವು ಸಸಾರಜನಕಯುಕ್ತ ಆಹಾರಾಂಶಗಳು.

ಈ ಮಗುವಿನ ದೈನಂದಿನ ಚಟುವಟಿಕೆಗೆ ಕಡಿಮೆಯೆಂದರೆ ಒಂದು ಕೆ.ಜಿ.ಗೆ ೧೨೦ ಕೆಲೊರಿಗಳಂತೆ ಪ್ರತಿ ದಿನ ಒದಗಿಸಬೇಕಾಗುತ್ತದೆ. ಬ್ರೆಡ್, ಅನ್ನ, ಮೊಸರು, ಬೆಣ್ಣೆ, ವನಸ್ಪತಿ ಎಣ್ಣೆ ಇವುಗಳ ಉಪಯೋಗದಿಂದ ಅವಶ್ಯವಾದ ಬೇಡಿಕೆಯನ್ನು ಸುಲಭದಲ್ಲಿ ಪೂರೈಸಬಹುದು.

ಪ್ರಾರಂಭದಲ್ಲಿ ಕೆನೆತೆಗೆದ ಹಾಲಿನೊಂದಿಗೆ ಸಕ್ಕರೆ ಬೆರೆಸಿ ಕುಡಿಯಲು ಕೊಟ್ಟು ಮಗುವಿಗೆ ಆಹಾರ ಸೇವನೆಯ ಕಡೆ ಆಸಕ್ತಿ ಹುಟ್ಟುವಂತೆ ಮಾಡಬೇಕಾಗುತ್ತದೆ. ದಿನಕ್ಕೆ ಹೆಚ್ಚೆಂದರೆ ೮-೧೦ ಔನ್ಸು ಹಾಲು ಬೇಕಾದೀತು.

ಉತ್ತಮ ಆಹಾರ ಸೇವನೆಯಾಗುತ್ತಿದ್ದಾಗ್ಯೂ ಭೇದಿ ನಿಲ್ಲದಿದ್ದಲ್ಲಿ ಅದರ ನಿಯಂತ್ರಣಕ್ಕೆ ಸೂಕ್ತ ಔಷಧಿಯಂತೂ ಬೇಕೇಬೇಕು; ಒಂದು ವಾರದ ಈ ತೆರನ ಆರೈಕೆಯಿಂದಲೇ ಮೈಕೈ ಮುಖದ ಊತ ಕಣ್ಮರೆಯಾಗುತ್ತದೆ.

ಮಲದ ಪರೀಕ್ಷೆಯಿಂದ ಭೇದಿಯುಂಟಾಗುವಲ್ಲಿ ಆಮಶಂಕೆಯೇನಾದರೂ ಕಾರಣವಾಗಿದೆಯೇ ಎಂಬುದೂ, ಜಂತು

ಹುಳುಗಳ ದೋಷವೇನಾದರೂ ಇದೆಯೇ ಎಂಬುದೂ ತಿಳಿದು ಬಂದು ಆ ದಿಸೆಯಲ್ಲಿ ಚಿಕಿತ್ಸೆ ನಡೆಸುವುದು ಸುಲಭವಾಗುತ್ತದೆ. ಕಣ್ಣುಗಳ ಪರೀಕ್ಷೆಯಿಂದ 'ಎ' ಅನ್ನಾಂಗದ ಕೊರತೆಯೇನಾದರೂ ಇದ್ದಲ್ಲಿ ತಿಳಿದು ಬಂದರೆ ಅದರ ನಿವಾರಣೆಗೂ ಚಿಕಿತ್ಸೆ ಪ್ರಾರಂಭಿಸಬಹುದು. ರಕ್ತಹೀನತೆ ತೀವ್ರವಾಗಿದ್ದರೆ ದೇಹಕ್ಕೊಪ್ಪುವ ರಕ್ತವನ್ನೇ ಸೂಕ್ತ ಪ್ರಮಾಣದಲ್ಲಿ ಒದಗಿಸಬೇಕಾಗುತ್ತದೆ.

ಮಾರಕರೋಗವಾದ ಕ್ವಾಷಿಯಾರ್ಕರ್ ನಿವಾರಣೆಯಲ್ಲಿ ನಮ್ಮ ಜನತೆ ಈ ವಿಚಾರ ತಿಳಿದುಕೊಂಡು ಸಹಕರಿಸಬೇಕು :—

೧) ಕಡಿಮೆ ಪಕ್ಷ ೬ ತಿಂಗಳುಗಳ ಕಾಲವಾದರೂ ತಾಯಂದಿರು ಮಕ್ಕಳಿಗೆ ಮೊಲೆಯುಣಿಸಬೇಕು.

೨) ಎದೆ ಹಾಲು ಕಡಿಮೆಯಾಗುತ್ತ ಬಂದಾಗ ಹಣ್ಣಿನ ರಸ, ಸೊಪ್ಪು ತರಕಾರಿಗಳನ್ನು ಕೊಡಬೇಕು. ಮಗುವಿಗೆ ಒಂದು ಒಂದೂವರೆ ವರ್ಷವಾಗುವಾಗ ಅದು ಎಲ್ಲಾ ವಿಧದ ಆಹಾರವನ್ನೂ ಸ್ವೀಕರಿಸಬಲ್ಲುದಾಗಿರಬೇಕು.

೩) ಎದೆ ಹಾಲು ಕಡಿಮೆಯಾದಂತೆ ಹಾಲು ಹುಡಿಯ ಉಪಯೋಗವೂ ಹೆಚ್ಚಬೇಕು.

೪) ಮಾಂಸಾಹಾರ ಸ್ವೀಕೃತವೆಂದಾದರೆ ಮೀನು, ಮೊಟ್ಟೆಯ ಉಪಯೋಗ: ಇಲ್ಲವಾದಲ್ಲಿ ದ್ವಿದಳ ಧಾನ್ಯಗಳ ಅತಿಯಾದ ಉಪಯೋಗದಿಂದ ದೇಹದ ಸಸಾರಜನಕಾಂಶದ ಪೂರೈಕೆ ಮಾಡಬೇಕು.

೫) ಸುಲಭದಲ್ಲಿ ಸಸಾರಜನಕ ಒದಗಿಸುವ ಬಹುವಿಧದ ಸತ್ವಯುಕ್ತ ಆಹಾರದ ಉಪಯೋಗ ಹೆಚ್ಚಿಸಬೇಕು. ಇದರ ದೈನಂದಿನ ಉಪಯೋಗ ಕಡಿಮೆಯೆಂದರೆ ೫೦ ಗ್ರಾಂ ಆದರೂ ಇರಬೇಕು.

೬) ಭೇದಿಯುಂಟಾದಾಗ ಹಾಲು-ಅನ್ನ ಕೊಡದೇ ಕೇವಲ ಅರಾರೂಟು ಗಂಜಿಯ ಸೇವನೆಯನ್ನು ಮಾತ್ರ ತಾಯಂದಿರು ತಮ್ಮ ಮಕ್ಕಳಿಗೆ ಮಾಡಿಸಬೇಕು. ಭೇದಿಗೆ ನಿಜವಾದ ಕಾರಣ ತಿಳಿದುಕೊಂಡು ಸೂಕ್ತ ಚಿಕಿತ್ಸೆ ಕೊಡಿಸುವಲ್ಲಿ ಪಾಲಕರು ವೈದ್ಯರ ಮೊರೆ ಹೋಗಲು ಸರ್ವಥಾ ಹಿಂಜರಿಯಬಾರದು.

ಸವಕಳಿ ರೋಗ :

ಸರಸಿಯ ಕತೆ ಸ್ವಲ್ಪ ವ್ಯತಿರಿಕ್ತವಾದುದು. ಆಕೆಯ ಬಾಳಿಗೆ ಆಸರೆಯಾಗಿರುವುದು ಒಬ್ಬಳೇ ಒಬ್ಬ ಮಗಳು. ಭಿಕ್ಷಾಟನೆ ಮಾಡುವ ಆಕೆ ತನ್ನ ಹೊಟ್ಟೆ ಹಸಿದುಕೊಂಡಿದ್ದಾಗ್ಯೂ ಮೂರು ವರ್ಷದ ಬಾಲೆಯ ಹೊಟ್ಟೆಗೆ ಕಡಿಮೆ ಮಾಡಿದ್ದಿಲ್ಲ. ಮಗುವಿಗೆ ತಿನ್ನುವ ಚಪಲ ಅಷ್ಟಿಷ್ಟಲ್ಲ. ಬೇಕಾದಷ್ಟು ಆಹಾರ ಪೂರೈಕೆ ಮಾಡುವ ಸೌಭಾಗ್ಯ ಈ ತಾಯಿಗಿರಲಿಲ್ಲ. ಎದೆಯ ಹಾಲು ಕೂಡ ಬತ್ತಿ ಹೋಗಿತ್ತು. ಹೀಗಾಗಿ, ಮಗುವು ದಿನೇ ದಿನೇ ಕೃಶವಾಗುತ್ತಾ

ಹೋಗಿ ಅಸ್ಥಿಪಂಜರದ ಮೇಲೆ ತೊಗಲಿನ ಹೊದಿಕೆ ಮಾತ್ರವೇ ಉಳಿಯುವಂಥ ದುಃಸ್ಥಿತಿ ಪ್ರಾಪ್ತವಾಯಿತು. ಆಗ ವಿಧಿಯಿಲ್ಲದೇ ಸರಿಸಿ ವೈದ್ಯರ ಮೊರೆ ಹೋಗಲೇ ಬೇಕಾಯಿತು. ಬಾಲಕಿ ನರಳುತ್ತಿದ್ದುದು ಮಕ್ಕಳ ಇನ್ನೊಂದು ಮಾರಕರೋಗವಾದ ಮೆರಾಸ್ಮಸ್‌ನಿಂದ.

ಸಾಮಾನ್ಯವಾಗಿರಬೇಕಾದ ಸರಾಸರಿ ತೂಕಕ್ಕಿಂತ ಶೇ|| ೪೦ರಷ್ಟು ಕಡಿಮೆ ತೂಗುತ್ತಿದ್ದ ಹೆಚ್ಚಾಗಿ ಎಲುಬು–ಚರ್ಮದಿಂದಲೇ ಕೂಡಿರುವ ಯಾವುದೇ ಮಗು ಮೆರಾಸ್ಮಸ್‌ನಿಂದ ನರಳುವುದು ಖಾತ್ರಿಯಾದಂತೆಯೇ. ಮಗುವಿಗೆ ಬೇಕಾದಷ್ಟು ಎದೆಹಾಲು ಅಥವಾ ಹಸುವಿನ ಹಾಲು ಅಥವಾ ಆಹಾರದ ಪೂರೈಕೆ ಆಗದಿರುವುದೇ ಈ ರೋಗಕ್ಕೆ ಕಾರಣ.

ಆಹಾರದ ಪೂರೈಕೆ ಸಮರ್ಪಕವಾಗಿದ್ದರೂ, ಅದು ಜೀರ್ಣಗೊಳ್ಳದಿದ್ದಾಗ ಶರೀರದ ಬೆಳವಣಿಗೆಗೆ ಅದು ಉಪಯೋಗಿಸಲ್ಪಡದು. ಪದೇ ಪದೇ ವಾಂತಿಯಾಗುತ್ತಿದ್ದಾಗ್ಯೂ ಈ ರೀತಿ ಉಂಟಾಗಲು ಸಾಧ್ಯ.

ಕ್ಷಯರೋಗ ಮುಂತಾದ ಮಾರಕ ರೋಗದಿಂದಲೂ ಬಾಯಿರುಚಿ ಕೆಟ್ಟು ಹೋಗಿ ಆಹಾರ ಸೇವನೆ ಕಡಿಮೆಯಾಗಿ ದೇಹವು ಸೊರಗಿ ಹೋಗಲು ಸಾಧ್ಯ.

ಭೇದಿ ಪ್ರಾರಂಭವಾಗಿ, ಅನಿಯಂತ್ರಿತವಾದರಂತೂ ಸೇವಿಸಿದ ಆಹಾರವೆಲ್ಲ ರಕ್ತಗತವಾಗಲಾರದೆ ಸಂಪೂರ್ಣ ವಿಸರ್ಜಿಸಲ್ಪಟ್ಟು ಆಹಾರ ಪೂರೈಕೆಯಲ್ಲಿ ಕೊರತೆಯುಂಟಾಗುವುದು.

ಕ್ವಾಷಿಯಾರ್ಕರ್‌ನಲ್ಲಿ ದೇಹಕ್ಕೆ ಬೇಕಾದ ಸಸಾರಜನಕದ ಪೂರೈಕೆಯಾಗದೆ ದೈನಂದಿನ ಕೆಲೊರಿಯಂಶ ದೊರಕಿರುತ್ತದೆ. ಆದರೆ ಮೆರಾಸ್ಮಸ್‌ನಲ್ಲಿ ಸಸಾರಜನಕವೂ, ಕೆಲೊರಿಯಂಶವೂ ಬೇಕಾದಷ್ಟು ಪ್ರಮಾಣದಲ್ಲಿ ದೊರಕುವುದಿಲ್ಲ.

ಸುಕ್ಕುಗಟ್ಟಿದ ಚರ್ಮ ಹೊಂದಿ, ತನ್ನ ಬೆರಳನ್ನೇ ಬಾಯಲ್ಲಿಟ್ಟುಕೊಂಡು ಚೀಪುತ್ತಾ ಎಲುಬಿನ ಗೂಡನ್ನು ಪ್ರದರ್ಶಿಸುವ ಬಾಲವೃದ್ಧಿಯಂತಿರುವ ಈ ಮಗುವಿಗೆ ವೈದ್ಯರು ಪರೀಕ್ಷೆ ಮಾಡುವ ಸಮಯದಲ್ಲಿ ಅಳಲಿಕ್ಕೂ ಶಕ್ತಿ ಇರದು, ಒಂದೊಮ್ಮೆ ಅತ್ತರೂ ಬಹಳಷ್ಟು ಮೆತ್ತಗಿನ ದನಿಯಲ್ಲೇ. ತಲೆಗೂದಲಿನಲ್ಲಿ ಏನೊಂದು ಬದಲಾವಣೆ ಮೆರಾಸ್ಮಸ್‌ನಲ್ಲಿ ಕಂಡುಬಾರದು, ಕ್ವಾಷಿಯಾರ್ಕರ್ ಮಗು ಉಬ್ಬಿಕೊಂಡಿದ್ದರೆ ಈ ಮಗು ಸೊರಗಿಕೊಂಡಿರುತ್ತದೆ.

ಕ್ವಾಷಿಯಾರ್ಕರ್‌ನೊಂದಿಗೆ ಮೆರಾಸ್ಮಸ್ ಜೊತೆಗೂಡಿರುವುದಿದೆ. ಆಗ ತಲೆಗೂದಲು ಬೂದು ಬಣ್ಣಕ್ಕೆ ತಿರುಗಿ, ಚರ್ಮ ಬಿರುಕುಗೊಂಡು ಮಾಂಸಖಂಡಗಳೆಲ್ಲ ಸೊರಗಿಹೋಗಿ ಮುಖ ಕೈಕಾಲುಗಳು ಸ್ವಲ್ಪ ಊದಿಕೊಂಡಿರುವುದು ಕಂಡು ಬರುತ್ತದೆ.

ಚಿಕಿತ್ಸೆ ಸುಲಭ:

ಕ್ಷಯರೋಗವೇ ಮುಂತಾದ ಕಾಯಿಲೆಗಳಿರುವ ಬಗ್ಗೆ ಅನೇಕ ವಿಧದ ಪರೀಕ್ಷೆ ನಡೆಸುವುದು ಮೊದಲ ಹೆಜ್ಜೆ, ಮೆರಾಸ್ಮಸ್ ರೋಗಕ್ಕೆ ದೈನಂದಿನ ಅಗತ್ಯಕ್ಕೆ ಬೇಕಾದ ಶಕ್ತಿ ಪೂರೈಕೆಯಾಗದುದೇ ಮುಖ್ಯ ಕಾರಣವೆಂದಾದಾಗ ಒಂದು ಕೆ. ಜಿ. ತೂಕಕ್ಕೆ

೨೦೦ ಕೆಲೋರಿಗಳಂತೆ ಒದಗಿಸುವ ಆಹಾರದ ಪೂರೈಕೆ ಮಾಡಿದಲ್ಲಿ ಅದ್ಭುತ ಪ್ರಗತಿ ಅತಿ ಶೀಘ್ರದಲ್ಲಿ ಕಂಡು ಬರುತ್ತದೆ.

ಇಲ್ಲಿಯೂ ಹಾಲಿನ ಅತಿಯಾದ ಉಪಯೋಗವೇ ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಹಾಲಿನೊಂದಿಗೆ ರಾಗಿ ಅಥವಾ ಅನ್ನದ ಗಂಜಿಯನ್ನು ಬೆರೆಸಿ ಕೊಟ್ಟರಂತೂ ಹೆಚ್ಚಿನ ಕೆಲೋರಿಯ ಪೂರೈಕೆ ಆದಂತೆಯೆ, ದಿನಕ್ಕೆ ಆರೇಳು ಬಾರಿ ಈ ರೀತಿ ಕೊಟ್ಟರೆ ಎಲುಬು-ತೊಗಲಿನ ಮಗು ಕ್ರಮೇಣ ಕೊಬ್ಬುಯುಕ್ತವಾಗಿ ಅಂದ-ಆಯ ಪಡೆದ ಶರೀರ ಧಾರಿಯಾಗುವ ಮಾತಂತೂ ಸುಳ್ಳಾಗದು.

'ಎ' ಜೀವಸತ್ವ

ಪಂಚೇಂದ್ರಿಯಗಳಲ್ಲಿ ಕಣ್ಣು ಅಗ್ರಮಾನ್ಯ 'ಕಣ್ಣು ದೇಹದ ನಾಯಕ' ಎಂಬ ಗಾದೆ ನೈಜೀರಿಯಾದಲ್ಲಿ ಪ್ರಚಲಿತದಲ್ಲಿದ್ದರೆ, ಎಲ್ಲಕ್ಕಿಂತ ಕಣ್ಣು ಶ್ರೀಮಂತ 'ಕಣ್ಣು ದೊರೆ' ಎಂಬ ಎಸ್ತೋನಿಯನ್ ಗಾದೆಗಳು ಕಣ್ಣು ದೇಹದ ಪ್ರಮುಖ ಅಂಗ ಎಂಬುದನ್ನೆ ಸ್ಪಷ್ಟ ಪಡಿಸುತ್ತವೆ. ವ್ಯಕ್ತಿ ಪಡೆಯುವ ಜ್ಞಾನದಲ್ಲಿ ಪ್ರತಿ ಶತ ೮೦ರಷ್ಟನ್ನು ಕಣ್ಣುಗಳ ಸಹಾಯದಿಂದ ಪಡೆಯುತ್ತಾನೆ. ದೃಷ್ಟಿ ಎಂಬ ಶಬ್ದ ಜನನವಾದುದು ಸೌಂದರ್ಯಕ್ಕಿಂತಲೂ ಮೊದಲು, ವ್ಯಕ್ತಿಯ ಸುತ್ತುಮುತ್ತಲಿನ ಸೌಂದರ್ಯಕ್ಕೆ ಮೂಲಕಾರಣ ಕಣ್ಣು ಎಂದರೆ ತಪ್ಪಾಗಲಿಕ್ಕಿಲ್ಲ. ಪ್ರಪಂಚದ ಯಾವುದೇ ಸೌಂದರ್ಯವನ್ನು ನೋಡಿ ಆನಂದ ಪಡಲು ನಿಮ್ಮ ಕಣ್ಣಿಗೆ ದೃಷ್ಟಿಯೇ ಇರದಿದ್ದರೆ, ದೃಷ್ಟಿ ಇದ್ದವನ ಸೌಂದರ್ಯ ಪ್ರಪಂಚದ ದೃಷ್ಟಿ ಕಳೆದುಕೊಂಡವನಿಗೆ ಶೂನ್ಯ, ಕಲ್ಪನಾತೀತವಾದುದು. ವ್ಯಕ್ತಿ ದೇಹದ ಯಾವುದೇ ಅಂಗವನ್ನು ಕಳೆದುಕೊಂಡರೆ ಅವನು ಕಳೆದುಕೊಂಡ ಅಂಗದ ಕಾರ್ಯವಿಲ್ಲದೇ ಜೀವನ ನಡೆಸಬಹುದು ಅಥವಾ ಇನ್ನೊಬ್ಬರ ದೃಷ್ಟಿಯಲ್ಲಿ ತನ್ನ ಸೌಂದರ್ಯವನ್ನು ಕಳೆದುಕೊಳ್ಳಬಹುದು. ಆದರೆ ತನ್ನ ದೃಷ್ಟಿಯನ್ನು ಅಥವಾ ಕಣ್ಣುಗಳನ್ನು ಕಳೆದುಕೊಂಡರೆ ಪ್ರಪಂಚದ ಸೌಂದರ್ಯದಿಂದ ತೃಪ್ತಿಪಡಲು ಅವನಿಂದ ಸಾಧ್ಯವಿಲ್ಲ. ಅವನು ಪ್ರಪಂಚಕ್ಕೆ ಕುರುಡನಾಗುತ್ತಾನೆ.

ವಿಶ್ವದಲ್ಲಿ ಈಗಾಗಲೇ ೧೦ ರಿಂದ ೧೫ ಮಿಲಿಯನ್ ಕುರುಡರಿದ್ದಾರೆ. ಈ ಶತಮಾನದ ಅಂತ್ಯದ ಸುಮಾರಿಗೆ ಈ ಸಂಖ್ಯೆ ಎರಡು ಪಟ್ಟಾಗುವ ಸಂಭವವಿದೆ. ಭಾರತದಲ್ಲಿ ಹದಿಮೂರರಲ್ಲಿ ಒಬ್ಬ ವ್ಯಕ್ತಿ ಕಣ್ಣಿನ ಬೇನೆಯಿಂದ ಬಳಲುತ್ತಿದ್ದಾನೆ. ಈ ಬಳಲುವ ರೋಗಿಗಳಲ್ಲಿ, ಏಳು ಮಂದಿಯಲ್ಲಿ ಒಬ್ಬ ಸಂಪೂರ್ಣ ಕುರುಡನಾಗಿದ್ದಾನೆ. ಭಾರತದಲ್ಲಿ ಎರಡು ಮಿಲಿಯನ್ ಮಕ್ಕಳು ಅಂಧತ್ವದಲ್ಲಿ ಬಂಧಿತರಾಗಿದ್ದಾರೆ. ಮನಸ್ಸು ಮಾಡಿದ್ದರೆ ಇದನ್ನು ನಿಯಂತ್ರಿಸಬಹುದಾಗಿತ್ತು. ಈ ಅಂಕಿಸಂಖ್ಯೆಗಳು ಅಂಧತ್ವದ ಭಯಾನಕ ದೃಶ್ಯವನ್ನು ಸಾರಿ ಹೇಳುತ್ತವೆ, ಅಲ್ಲದೇ ಅವುಗಳ ಪ್ರತಿಬಂಧಕ್ಕೆ ಮಾನವೀಯತೆಯನ್ನು ಬಡಿದೆಬ್ಬಿಸುತ್ತವೆ. ಮಾನವೀಯತೆಯ ದೃಷ್ಟಿಯಿಂದ ಈ ಅಂಧತ್ವದ ಬೆಲೆ ಕಟ್ಟುವುದು ಸಾಧ್ಯವೇ ಇಲ್ಲ. ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಆಗುವ ಇದರ ಪ್ರಭಾವ ಪೆಟ್ಟು ಕೂಡಾ

ಕಲ್ಪನಾತೀತವಾದುದು. ಅಷ್ಟು ವ್ಯಕ್ತಿಗಳ ಕಳೆದುಹೋದ ಮಾನವ ಶಕ್ತಿಯಿಂದ ದೇಶಕ್ಕಾಗುವ ಹಾನಿ ಒಂದೆಡೆ, ಆ ವ್ಯಕ್ತಿಗಳ ವೈಯಕ್ತಿಕ ಹಕ್ಕುಗಳನ್ನು ಒದಗಿಸುವುದು ಇನ್ನೊಂದೆಡೆ ಇವೆರಡನ್ನೂ ಮಾಡುವುದಕ್ಕಿಂತ ಅಂಧತ್ವ ಪ್ರತಿಬಂಧಿಸುವುದು ಸುಲಭಸಾಧ್ಯ. ಈ ದಿಶೆಯಲ್ಲಿಯೇ ರಾಷ್ಟ್ರೀಯ ಅಂಧತ್ವ ನಿವಾರಣಾ ಯೋಜನೆ ರೂಪಿತಗೊಂಡಿರುವುದು ಸ್ವಾಗತಾರ್ಹ.

ಮಗು ತನ್ನ ಒಂದರಿಂದ ಎರಡು ವರ್ಷ ವಯಸ್ಸಿನಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುವ ಸಾಧ್ಯತೆಗಳು ಬಹಳ ಇರುತ್ತವೆ. ತಾಯಿಯಲ್ಲಿ ಹಾಲಿನ ಅಂಶ ಕಡಿಮೆ ಆಗುತ್ತಿರಬಹುದು ಅಥವಾ ಅವಳು ಮತ್ತೆ ಗರ್ಭಿಣಿಯಾಗಿರಬಹುದು. ನೌಕರಿ ನಿರ್ವಹಿಸುತ್ತಿರುವ ತಾಯಿಗೆ ಮಗುವಿನತ್ತ ಲಕ್ಷ್ಯಕೊಡಲು ವೇಳೆಯ ಅಭಾವ ಇರಬಹುದು. ಇನ್ನು ಕೆಲವರು ತಮ್ಮ ಸೌಂದರ್ಯ ಕಳೆಗುಂದೀತು ಎಂಬ ಭಯದಿಂದ ಮಗುವಿಗೆ ಹಾಲುಣ್ಣಿಸದೇ ಇರಬಹುದು. ಕೆಲವರಲ್ಲಿ ಹಾಲುಣ್ಣಿಸುವ ಹಂಬಲ ತುಂಬಿದ್ದರೂ ಹಾಲು ಬತ್ತಿರಲೂ ಬಹುದು. ಇಂತಹ ಪರಿಸ್ಥಿತಿಯಲ್ಲಿ ಸಸಾರಜನಕ ಪದಾರ್ಥಗಳ ಲವಣಗಳ ಹಾಗೂ ಜೀವಸತ್ವಗಳ ಕೊರತೆಯು ತಿರುಗುಣಿ ಮಾಡುವಿನಲ್ಲಿ ಮಗು ಕಿರಿಕಿರಿ ಕೊಡಬಹುದು. ಜೀವಸತ್ವಗಳ ಕೊರತೆ ಅದರಲ್ಲೂ "ಎ" ಜೀವಸತ್ವದ ಕೊರತೆ ಕುರುಡುತನವನ್ನು ನೀಡುವಷ್ಟು ಮಾರಕವಾಗಿದೆ. "ಎ" ಜೀವಸತ್ವದ ಅಭಾವವನ್ನು ಅಲಕ್ಷ್ಯಮಾಡಿದಲ್ಲಿ ವೈದ್ಯರನ್ನು ಕಾಣುವ ಮೊದಲೇ ನಿಮ್ಮ ಮಗು ಅಂಧವಾಗಬಹುದು. ಅಷ್ಟು ವೇಗವಾಗಿ ಪಸರಿಸುವ ರೋಗವಿದು. ಅದಕ್ಕೆ "ಕಣ್ಣು ಮಾರಿ" ಎಂದು ಕರೆಯುತ್ತಾರೆ.

"ಎ" ಜೀವಸತ್ವದ ಕೊರತೆಯು ಆಹಾರ ಸೇವನೆ, ಕಡಿಮೆ ಆಹಾರ ಸೇವನೆ, ಕರುಳಿನಲ್ಲಿ ಹೀರುವಿಕೆಯ ದೋಷಗಳು, ಹೆಚ್ಚಿನ ಪ್ರಮಾಣದಲ್ಲಿ ವಿಸರ್ಜಿಸಲ್ಪಡುವುದು. ಹೆಚ್ಚಿನ (ಬೇಡಿಕೆಗಳು) ಅವಶ್ಯಕತೆಗಳು, ಕಡಿಮೆ ಪ್ರಯೋಜನ ಪಡೆಯುವ ಪ್ರಸಂಗಗಳು "ಎ" ಜೀವಸತ್ವದ ಕೊರತೆ ತಲೆದೋರುವಂತೆ ಮಾಡುತ್ತದೆ. ಕೊರತೆಗೆ ಮೇಲಿನ ಕಾರಣಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿರಬಹುದು.

"ಎ" ಜೀವಸತ್ವದ ಕೊರತೆಯಿಂದ ಮಕ್ಕಳಲ್ಲಿಯು ರೋಗ ಪ್ರತಿರೋಧಕಶಕ್ತಿ ಕುಗ್ಗುತ್ತದೆ. ಇದರಿಂದಾಗಿ ಸೋಂಕು ರೋಗಗಳನ್ನು ಸಾಗಿಸುವ ಸದಸ್ಯನಾಗಿ ರೂಪಿತಗೊಳ್ಳುವನು. ನ್ಯೂನ ಪೋಷಣೆಯ ಮಕ್ಕಳಲ್ಲಿ ಕಣ್ಣುಮಾರಿಯ ಹಾವಳಿ ಪ್ರತಿಶತ ೭೦ರಷ್ಟು ಇರುತ್ತದೆ. ಸೋಂಕು ರೋಗಗಳ ಬಾಹುಬಂಧನದಲ್ಲಿ ತತ್ತರಿಸುವಾಗ "ಎ" ಜೀವಸತ್ವದ ಬೇಡಿಕೆ ಹೆಚ್ಚಾಗಿ, ಅದು ಅಕಸ್ಮಾತ್ ಪೂರೈಕೆ ಆಗದಿದ್ದಲ್ಲಿ ಗೊತ್ತಿಲ್ಲದಂತೆ "ಎ" ಜೀವಸತ್ವ ಕೊರತೆಯ ಲಕ್ಷಣಗಳು ಹೆಚ್ಚಾಗುತ್ತವೆ.

"ಎ" ಜೀವಸತ್ವದ ಮೂಲಗಳು :

ಪ್ರಾಣಿಜನ್ಯ ಕೊಬ್ಬು, ಹಸಿರು ತೊಪ್ಪಲು ಪಲ್ಲೆ, ಗಜ್ಜರಿ, ಪಪ್ಪಾಯಿ, ಮಾಗಿದ ಮಾವು, ಟೊಮ್ಯಾಟೊಗಳಲ್ಲಿ ಹೇರಳವಾಗಿ ಸಿಗುತ್ತದೆ.

ಮೂಲಗಳು	'ಎ' ಜೀವಸತ್ವದ ಪ್ರಮಾಣ ಪ್ರತಿ ೧೦೦ ಗ್ರಾಂಗಳಲ್ಲಿ
೧. ಪ್ರಾಣಿಜನ್ಯ ಕೊಬ್ಬು :	
ಶಾರ್ಕ್‌ಲಿವರ್ ಎಣ್ಣೆ	೧೫೦,೦೦೦
ಕಾಡ್‌ಲಿವರ್ ಎಣ್ಣೆ	೮೫,೦೦೦
ಬೆಣ್ಣೆ ಮತ್ತು ತುಪ್ಪ	೩೩,೦೦೦
ತತ್ತಿಯ ಹಳದಿ ಭಾಗ	೩,೨೧೦
ವನಸ್ಪತಿ (ಪರಿಷ್ಕರಿಸಿದ)	೨,೫೦೦
ಯಕೃತ್ (ಕುರಿ)	೨,೩೦೦
೨. ಹಾಲು ಮತ್ತು ಹಾಲಿನ ಪದಾರ್ಥಗಳು :	
ಆಕಳ ಹಾಲು	೧೫೦
ತಾಯಿಯ ಹಾಲು	೧೭೦
ಕೆನೆ	೨೭೩
ಬೆಣ್ಣೆ	೨,೫೦೦
ತುಪ್ಪ	೨,೦೦೦
೩. ಹಸಿರು ತೊಪ್ಪಲು ಪಲ್ಲೆ ಹಾಗೂ ಹಣ್ಣು ಹಂಪಲು	
ಅಮರಾಂತ (ಬಸಳೆ ಪಲ್ಲೆ)	೫,೯೪೦
ಕ್ಯಾಬೀಜ್	೨,೦೦೦
ಹಸೀಮೆಣಸಿನಕಾಯಿ	೪೫೪
೪. ಗಜ್ಜರಿ	೨೦೦೦–೪೩೦೦
ಪಪ್ಪಾಯಿ	೨,೦೨೦
ಬಾಳೆ (ಕೆಂಪು)	೩೫೦
ಚಿಕ್ಕು ಹಣ್ಣು	೨೦೦–೫೦೦
ಮಾವಿನ ಹಣ್ಣು	೪,೮೦೦
ಟೊಮ್ಯಾಟೋ	೩೨೦

ದಿನನಿತ್ಯದ ಅವಶ್ಯಕತೆಗಳು :

ರಾಷ್ಟ್ರೀಯ ಸಂಶೋಧನಾ ಮಹಾ ಮಂಡಳಿ ನಿಗದಿ ಪಡಿಸಿದ ದಿನನಿತ್ಯದ ಅವಶ್ಯಕತೆಗಳು ಹೀಗಿವೆ :

	"ಎ" ಜೀವಸತ್ವ ಅಂತಾರಾಷ್ಟ್ರೀಯ ಘಟಕಗಳು : ದಿವಸ
೧. ಸ್ತ್ರೀ, ಪುರುಷರಿಗೆ	೫,೦೦೦
೨. ಗರ್ಭಿಣಿಯರಿಗೆ	೬,೦೦೦
೩. ಹಾಲುಣಿಸುವ ತಾಯಂದಿರಿಗೆ	೮,೦೦೦
೪. ಹಸುಗೂಸುಗಳಿಗೆ	೧,೦೦೦
೫. ಶಾಲಾಪೂರ್ವ ಮಕ್ಕಳು	೨,೦೦೦
೬. ಶಾಲಾ ಮಕ್ಕಳು	೫,೫೦೦

ಕೊರತೆಯ ಲಕ್ಷಣಗಳು :

ಕಣ್ಣಿನ ರೆಪ್ಪೆಯು ಸಾಮಾನ್ಯವಾಗಿ ತೇವಾಂಶದಿಂದ ಕೂಡಿರುತ್ತದೆ. ಕಣ್ಣಿನ ರೆಪ್ಪೆಯ ಮಿಟುಕಾಟದಿಂದ ತೆಳುವಾದ ಪೊರೆಯಂತೆ ಅದರ ಮೇಲೆ ಹರಿದಿರುವ ದ್ರಾವಣದಿಂದ ಆವೃತವಾದಂತೆ ಇರುತ್ತದೆ. ಇದು ಕಣ್ಣನ್ನು ನಿರ್ಮಲವಾಗಿಡಲು ಮತ್ತು ಸೋಂಕಿನಿಂದ ರಕ್ಷಿಸಲು ಅವಶ್ಯಕ. ಆಹಾರದಲ್ಲಿ "ಎ" ಜೀವಸತ್ವದ ಕೊರತೆ ಇದ್ದಾಗ, ಕೊರತೆಯ ಲಕ್ಷಣಗಳು ಕಾಣಿಸುತ್ತವೆ.

೧. ಕಣ್ಣಿನ ಆರ್ದ್ರ ಚರ್ಮವು ಮಿತಿ ಮೀರಿ ಒಣಗುತ್ತದೆ.

೨. ಕಣ್ಣನ್ನು ಸ್ವಲ್ಪ ಕಾಲ ತೆರೆದು ಕೊಂಡಿದ್ದು, ಕಣ್ಣಿನ ಆರ್ದ್ರ ಚರ್ಮವು ಕೂಡಲೇ ಸುಕ್ಕಾಗುತ್ತದೆ.

೩. ಕಣ್ಣಿನ ಆರ್ದ್ರ ಚರ್ಮ ಹೊಳಪಿನಿಂದ ಮಿಂಚುವುದಿಲ್ಲ, ಕಳೆಗುಂದಿದಂತೆ ಕಾಣುತ್ತದೆ.

೪. ರೋಗಿಗೆ ಪ್ರಕಾಶಮಾನವಾದ ಬೆಳಕಿನ ಮುಂದೆ ನಿಲ್ಲಲು ಸಾಧ್ಯವಾಗುವುದಿಲ್ಲ.

೫. ರೋಗಿಗೆ ರಾತ್ರಿಕಾಲದಲ್ಲಿ ಕಣ್ಣು ಕಾಣಿಸುವುದಿಲ್ಲ

೬. ಕಣ್ಣುಗುಡ್ಡೆಯ ಮೇಲೆ ಬಿಳಿಯ ಬೂದು ಬಣ್ಣದ ತ್ರಿಕೋನಾಕಾರದ ಪೊರೆ ಕಂಡುಬರುತ್ತದೆ.

ಕೊರತೆಯ ಲಕ್ಷಣಗಳು :

"ಎ" ಜೀವಸತ್ವದ ಅಭಾವದಿಂದ ಬರುವ ಕಣ್ಣುಮಾರಿ ರೋಗ ವಿವಿಧ ಹಂತಗಳಲ್ಲಿ ಬರುತ್ತದೆ.

ಪ್ರಾಥಮಿಕ

ಕೋಡ್ಪರೆಯ ಒಣಗುವಿಕೆ
ಬಿಟಾಟನ ಚುಕ್ಕೆಗಳು
ಕಣ್ಣಿನ ಪಾರದರ್ಶಕ ಪಟಲದ ಒಣಗುವಿಕೆ.
ಕಣ್ಣಿನ ಪಾರದರ್ಶಕ ಪಟಲದ ಗಾಯ ಮತ್ತು ಒಣಗುವಿಕೆ.
ಕಣ್ಣುಮಾರಿ

ದ್ವಿತೀಯ

ಇರುಳುಗಣ್ಣು
ಒಣಗಣ್ಣು
ಕಣ್ಣಿನ ಪಾರದರ್ಶಕ ಪಟಲದ ಗಾಯದ ಕಲೆ.

(ಜಾಗತಿಕ ಆರೋಗ್ಯ ಸಂಸ್ಥೆ ೧೯೭೬ರಲ್ಲಿ ಮಾಡಿದ ವರ್ಗೀಕರಣ.)

"ಎ" ಜೀವಸತ್ವದ ಕೊರತೆಯಿಂದ, ಚರ್ಮದಲ್ಲಿ ಬದಲಾವಣೆಗಳಾಗುತ್ತವೆ. ಕೆಲವು ಸಲ ಚರ್ಮದ ಬಣ್ಣವು ಬಿಳಿ, ಹಳದಿ ಆಗಬಹುದು. ಅಲ್ಲದೆ, ಒಣಗಿದಂತಾಗಿ ಪೊರೆ ಬಿಟ್ಟಂತೆ ಆಗಬಹುದು. ಚರ್ಮ ಒಣಗುವಿಕೆ, ಕಡಿತ ಸಣ್ಣ ಸಣ್ಣ ಗುಳ್ಳೆಗಳು ಏಳುವುದು ಕಂಡು ಬರುವುದು. ಕೂದಲು ಬಿರುಸಾಗಿ ಕಳೆಗುಂದಿ ಉದುರಿಹೋಗಬಹುದು, ಬಾಯಿ ಒಣಗಿದಂತಾಗುತ್ತದೆ. ಧ್ವನಿಯಲ್ಲಿ ಬದಲಾವಣೆಯೂ ಆಗಬಹುದು, ಅಲ್ಲದೇ ಭೇದಿ ಇರುವುದು ಸಾಮಾನ್ಯ.

ಕಣ್ಣಿನಲ್ಲಿ ಈ ರೋಗವು ವಿವಿಧ ಹಂತಗಳಲ್ಲಿ ಪಸರಿಸುವುದು. ಮೊಟ್ಟ ಮೊದಲು ಕಣ್ಣಿನಲ್ಲಿ ಯಾವ ಕುಂದೂ ಕಾಣದೇ ಹೋದಾಗ್ಯೂ ಮಗುವಿಗೆ ರಾತ್ರಿ ಅಂಧತ್ವ ಅಥವಾ ಇರುಳುಗಣ್ಣು ಇರುತ್ತದೆ. ನಂತರ ಕಣ್ಣು ಒಣಗುವುದು ಅದಕ್ಕೆ ಒಣಗಣ್ಣು ಅನ್ನುತ್ತಾರೆ. ಕಣ್ಣಿನ ಪಾರದರ್ಶಕ ಪಟಲ ತನ್ನ ಹೊಳಪನ್ನು ಕಳೆದುಕೊಳ್ಳುತ್ತದೆ. ಅದರ ಎಡ ಹಾಗೂ ಬಲ ಭಾಗಗಳಲ್ಲಿ ತ್ರಿಕೋನಾಕಾರದ, ಬೂದು ಬಿಳಿಯ ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಇವಕ್ಕೆ ಬಿತೋನ ಚುಕ್ಕೆಗಳು ಎನ್ನುತ್ತಾರೆ. ಇದರಲ್ಲಿಯ ಯಾವುದೇ ಒಂದು ಲಕ್ಷಣದ ಸುಳಿವು ಸಿಕ್ಕರೂ ನಿರ್ಲಕ್ಷ ಮಾಡಬಾರದು. ಅಕಸ್ಮಾತ್ ಅಲಕ್ಷ ಮಾಡಿದರೆ ಮಗುವಿನ ದೃಷ್ಟಿಗೆ ಧಕ್ಕೆ ಉಂಟಾಗುತ್ತದೆ. ಮಗುವು ತನ್ನ ದೃಷ್ಟಿಯನ್ನು ಅತೀ ಶೀಘ್ರದಲ್ಲಿ ಕಳೆದುಕೊಳ್ಳುವ ಸಂಭವ ಹೆಚ್ಚು. ಇದರಿಂದ ಜೀವನ ಪರ್ಯಂತ ಕತ್ತಲು ಖಗ್ರಾಸದಲ್ಲಿಯೇ ಕಾಲ ಕಳೆಯಬೇಕಾಗುತ್ತದೆ.

ಕರಿಯ ಆಡು ಈದಾಗ ಮಾಸ ಬೀಳುವ ಮೊದಲೇ ಮೊಲೆ ಹಾಲು ಹಿಂಡಿ ಕುಡಿಸಿದರೆ ಇರುಳುಗಣ್ಣು ಮಾಯವಾಗುವುದೆಂಬ ಭಾವನೆ ನಮ್ಮ ಜನರಲ್ಲಿ ಮನೆಮಾಡಿಕೊಂಡಿದೆ. ಈ ಭಾವನೆಯ ಸುತ್ತ ಗಸ್ತು ಹೊಡೆದರೆ ಕುರುಡರ ಸಂಖ್ಯೆ ತ್ವರಿತಗತಿಯಲ್ಲಿ ಹೆಚ್ಚಾದೀತು. "ಎ" ಜೀವಸತ್ವದ ಕೊರತೆ ನೀಗಿಸಲು ಕರಿಯ ಆಡು ಈಯುವುದಕ್ಕಾಗಿ ಕಾಯುವುದು ಬೇಡ. ಮಗುವಿಗೆ "ಎ" ಜೀವಸತ್ವದ ಎಳೆ ಸಿಕ್ಕರೂ ಹಚ್ಚಡ ನುಂಗಲು ಸಜ್ಜಾಗಬೇಕು. ಆಗ ಈಗ ಎಂದು ಯೋಚಿಸದೇ ತಕ್ಷಣ ತುರ್ತು ಚಿಕಿತ್ಸೆ ಕೊಡಿಸಬೇಕು. ತಾತ್ಸಾರಕ್ಕೆ ತೆರಬೇಕಾದ ಬೆಲೆ ಅಪಾರ.

ಪ್ರತಿಬಂಧಕೋಪಾಯ :

ನಿಮ್ಮ ಅಲಕ್ಷತನದಿಂದ ನಿಮ್ಮ ಮಗು ಜೀವನ ಪರ್ಯಂತ ಅಂಧವಾಗುವುದು

ಬೇಡ. ಮಗುವಿನ ಅಂಧತ್ವಕ್ಕೆ ನೀವೇ ಕಾರಣ ಎಂದು ಮನವರಿಕೆಯಾದಾಗ ನಿಮ್ಮ ಆತ್ಮಶಾಂತಿಗೆ ಭಂಗವಾಗುವುದು. ನಿಮಗೊಂದು ಬಗೆಹರಿಯದ ಸಮಸ್ಯೆಯನ್ನು ನೀವೇ ಆಹ್ವಾನಿಸಿದಂತಾಗುವುದಲ್ಲದೇ, ದೇಶಕ್ಕೊಂದು ಸಮಸ್ಯೆಯನ್ನು ಒಡ್ಡುವಿರಿ. ಜನಪಿಡಿ ನಿಮ್ಮ ನಿರಂತರ ಎಚ್ಚರ ಮಾತ್ರ ಈ ಭಯಂಕರ ಸಮಸ್ಯೆಗಳು ಉದ್ಭವಿಸದಂತೆ ಮಾಡಬಹುದು. ಅದಕ್ಕಾಗಿ ನೀವು ಇಂದ್ರ ಚಂದ್ರರನ್ನು ಭೂಮಿಗೆ ತರಬೇಕಾಗಿಲ್ಲ. ನಿಮ್ಮ ಮಗುವಿನ ಸರಿಯಾದ ಸಮಯೋಚಿತ ಪಾಲನೆ ಪೋಷಣೆ ಹಾಗೂ ತಾಯಿಗೆ ಪೌಷ್ಠಿಕ ಆಹಾರವನ್ನು ಒದಗಿಸಿ ಕೊಟ್ಟರೆ ಸಾಕು. ಮಗುವಿನ ತಾಯಿಗೆ ಪೌಷ್ಠಿಕ ಆಹಾರವನ್ನು ಒದಗಿಸುವುದೆಂದರೆ ಆಹಾರದಲ್ಲಿ ಈಗಾಗಲೇ ಹೇಳಿದ ಪದಾರ್ಥಗಳನ್ನು ಹೆಚ್ಚಿಗೆ ಬಳಸಬೇಕಲ್ಲದೆ ವಿಶೇಷವಾಗಿ ಹಾಲು, ತುಪ್ಪ, ಹಣ್ಣು, ಹಸಿರು ಸೊಪ್ಪು ಪಲ್ಲೆ, ಕೋಳಿಯ ತತ್ತಿ, ಬೆಣ್ಣೆ, ವಿಶೇಷವಾಗಿ ಗಜ್ಜರಿಯನ್ನು ಬಳಸಬೇಕು.

ಜೀವಸತ್ವಗಳು ಸಾಕಷ್ಟು ಪ್ರಮಾಣದಲ್ಲಿ ಸಮತೋಲನದಲ್ಲಿರುವಂತೆ ನೋಡಿಕೊಳ್ಳಬೇಕು. 'ಎ' ಜೀವಸತ್ವವನ್ನು ಹನಿಗಳ ರೂಪದಲ್ಲಿ ಮಗುವಿಗೆ ಕೊಡಿಸಬೇಕು. ಮಗುವಿಗೆ ಹನ್ನೊಂದು ತಿಂಗಳು ತುಂಬಿದ ಮೇಲೆ ಒಮ್ಮೆ, ನಂತರ ಪ್ರತಿ ಆರು ತಿಂಗಳಿಗೊಂದು ಸಾರಿಯಂತೆ ಮಗು ಐದು ವರ್ಷದ್ದಾಗುವವರೆಗೆ (ಒಟ್ಟು ಒಂಭತ್ತು ಸಾರಿ) ಕೊಡಿಸದರಾಯಿತು 'ಎ' ಜೀವಸತ್ವದಿಂದ ತಲೆದೋರುವ ಕುರುಡುತನವನ್ನು ಸಂಪೂರ್ಣ ನಿರ್ಮೂಲನ ಮಾಡಬಹುದು. ಇದಕ್ಕೆ ಪಾಲಕರು ಹಣ ಖರ್ಚು ಮಾಡಬೇಕಾಗಿಲ್ಲ ನಿಮ್ಮ ಮನೆಯ ಬಾಗಿಲವರೆಗೂ ಈ ಸೇವೆ ಸಲ್ಲಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿ ಸಜ್ಜಾಗಿದೆ. ಅವರಿಗೆ ಸಹಕಾರ ಕೊಟ್ಟರೆ ಸಾಕು. ಮಕ್ಕಳ ಕುರುಡುತನ ತಪ್ಪಿಸಿದಂತಾಗುತ್ತದೆ. ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ ಯಶಸ್ವಿಯೂ ಆಗುತ್ತದೆ.

ವ್ಯಕ್ತಿಸ್ವಾತಂತ್ರ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ ಇವೆರಡರ ಮಧ್ಯದ ಸಾಮರಸ್ಯವನ್ನು ನಾವು ಪಡೆಯಬೇಕು. ಸಮಸ್ತ ಸಮಾಜದ ಒಳಿತಿಗಾಗಿ ಸಾಮಾಜಿಕ ನಿಯಂತ್ರಣಕ್ಕೆ ಇಚ್ಛಾಪೂರ್ವಕವಾಗಿ ಶರಣು ಬರುವುದರಿಂದ ವ್ಯಕ್ತಿಯನ್ನೂ ಅವನನ್ನೊಳಗೊಂಡ ಸಮಾಜವನ್ನೂ ಶ್ರೀಮಂತಗೊಳಿಸುತ್ತವೆ.

ಗಾಂಧೀಜಿ

ವಿಜ್ಞಾನ

ಅಡ್ಯನಡ್ಕ ಕೃಷ್ಣಭಟ್ಟ
೨೩೮೬, ಎಂಟನೆ ಮುಖ್ಯ ರಸ್ತೆ
ವಿಜಯನಗರ, ಎರಡನೆಯ ಹಂತ
ಮೈಸೂರು-೫೭೦೦೧೭

"ಜ್ಞಾನಂ ವಿಜ್ಞಾನಸಹಿತಂ" ಇದು ಗೀತೋಕ್ತಿ. ಭೌತ ಪರಿಸರದಲ್ಲಿ ಜೀವನ ನಡೆಸಬೇಕಾದದ್ದು ಸೃಷ್ಟಿನಿಯಮ. ಎಂದೇ ಇದರ ಬಗೆಗಿನ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸುವುದು ಸಹಜ ಕ್ರಿಯೆ. ಫಲ ವಿಜ್ಞಾನ—ನಿಸರ್ಗದೊಂದಿಗೆ ಮಾನವ ಮತಿಯ ಅಂತರಕ್ರಿಯೆ ವಿಜ್ಞಾನದ ಉಗಮಕ್ಕೆ ಕಾರಣವಾಯಿತು. ವಿಜ್ಞಾನಾತೀತವಾಗಿ ಚಿಂತನೆ ಹರಿಸಿದಾಗ ವಿಶ್ವದ, ಜೀವನದ ಬಗ್ಗೆ ಸಮಗ್ರವಾಗಿ ವಿಶ್ವ-ಮಾನವ ಸಂಬಂಧಗಳ ಬಗ್ಗೆ ಸಮಗ್ರ ದೃಷ್ಟಿ ಪ್ರಾಪ್ತವಾಗುತ್ತದೆ. ಇದು ಜ್ಞಾನ. ಜ್ಞಾನದ ಬಲದಿಂದ ಅಜ್ಞಾನ ನಿವಾರಣೆ—ಸೂರ್ಯ ಮೂಡಿದಾಗ ತಮಸ್ಸು ಮಾಯವಾಗುವಂತೆ.

ವಿಜ್ಞಾನ ಅಂದರೆ ವಿಶೇಷವಾದ ಜ್ಞಾನ. ಕ್ರೋಢೀಕೃತ ಜ್ಞಾನ, ವಿಶೇಷವಾದ ಕೌಶಲ ಎಂಬೆಲ್ಲ ಅರ್ಥಛಾಯೆಗಳು ಬರುತ್ತವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಮಾನವ ಇತಿಹಾಸದ ಆದಿಯಿಂದ ಇಂದಿನವರೆಗಿನ ಬೆಳವಣಿಗೆಯನ್ನು ಗಮನಿಸಿದರೆ ವಿಜ್ಞಾನ ಸದಾ ಮುಂದುವರಿಯುತ್ತಿರುವ ಒಂದು ಪ್ರಕ್ರಿಯೆ. ನಾವಿರುವ ವಿಶ್ವವನ್ನೂ ಅದರಲ್ಲಿ ನಡೆಯುತ್ತಿರುವ ಸಕಲ ವಿದ್ಯಮಾನಗಳನ್ನೂ ಅವೆಲ್ಲ ವಾಸ್ತವವಾಗಿ ಹೇಗಿವೆಯೋ ಹಾಗೆ ಗ್ರಹಿಸುವಂತೆ ಮಾಡುವುದು ವಿಜ್ಞಾನದ ಈ ಪ್ರಕ್ರಿಯೆ.

ಮನುಷ್ಯನ ಅನೇಕಾನೇಕ ಚಟುವಟಿಕೆಗಳಿಂದಲೇ ವಿಜ್ಞಾನ ಚಿಗುರುತ್ತದೆ. ವೀಕ್ಷಣೆ ಮತ್ತು ಪ್ರಯೋಗಗಳಿಂದ ಹೊಸ ಪರಿಕಲ್ಪನೆಗಳು ಹುಟ್ಟುತ್ತವೆ. ಹೊಸ ಪರಿಕಲ್ಪನೆಗಳು ಇನ್ನೂ ಹೆಚ್ಚಿನ ವೀಕ್ಷಣೆ ಮತ್ತು ಪ್ರಯೋಗಗಳಿಗೆ ದಾರಿ ಮಾಡುತ್ತವೆ. ಕಳೆದು ಹೋದ ಶತಮಾನಗಳಲ್ಲಿ ಫಲದಾಯಕವಾದ ಹಾಗೂ ಫಲದಾಯಕವಲ್ಲದ ಅನೇಕ ಪರಿಕಲ್ಪನೆಗಳು ಹುಟ್ಟಿಕೊಂಡುವು. ಫಲದಾಯಕವಾದ ಪರಿಕಲ್ಪನೆಗಳಿಂದ ಹಾಸುಹೊಕ್ಕಾಗಿ, ಆಧುನಿಕ ವಿಜ್ಞಾನದ ನೆಯಿಗೆ ರೂಪುಗೊಂಡಿದೆ. ಒಂದು ಹೊಸ ಭಾವನೆ ಅಥವಾ ಸಿದ್ಧಾಂತ ಯಶಸ್ವಿ ಎನಿಸಬೇಕಾದರೆ ಈಗಾಗಲೇ ತಿಳಿದಿರುವ ಸಂಗತಿಗಳನ್ನು ಸುಸಂಬದ್ಧವಾಗಿ ವಿವರಿಸುವುದಷ್ಟೇ ಅಲ್ಲದೆ, ಹೊಸದಾದ ಫಲದಾಯಕವಾದ ವೀಕ್ಷಣೆ ಮತ್ತು ಪ್ರಯೋಗಗಳನ್ನು ಪ್ರೇರೇಪಿಸಬೇಕು.

ವಿಜ್ಞಾನದ ಕ್ರಿಯಾತ್ಮಕ ಗುಣ ಇರುವುದೇ ಇಲ್ಲ.

ಇಡೀ ವಿಶ್ವಕ್ಕೆ ಭೂಮಿಯೇ ಕೇಂದ್ರ. ಇಂಥ ಭೂಮಿಯಲ್ಲಿ ವಾಸಿಸುವ ಮನುಷ್ಯರು ಬಹಳ ಮಹತ್ವದ ಜೀವಿಗಳು ಎಂದು ಗ್ರಹಿಸುತ್ತಿದ್ದ ಕಾಲವಿತ್ತು. ಕಾಲಾಂತರದಲ್ಲಿ ಅದು ಮಾಯವಾಯಿತು. ಭೂಮಿಯು ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಒಂದು ಗ್ರಹ, ಸೂರ್ಯನೋ – ಆಕಾಶಗಂಗೆಯ ಕೋಟ್ಯಾಂತರ ನಕ್ಷತ್ರಗಳಲ್ಲಿ ಒಂದು ನಕ್ಷತ್ರ, ಗ್ರಹವ್ಯೂಹವನ್ನೊಳಗೊಂಡ ನಕ್ಷತ್ರಗಳು ಬೇರೆಯೂ ಇವೆ. ಜೀವಿಗಳಿರುವ ಗ್ರಹ ಭೂಮಿಯೊಂದೇ ಆಗಿರಬೇಕಾಗಿಲ್ಲ ಎಂದು ಈಗ ನಾವು ತಿಳಿಯುವಂತಾಗಿದೆ.

ವಸ್ತುವಿನ ರಚನೆಗೆ ಸಂಬಂಧಿಸಿದಂತೆಯೂ ಪರಿಕಲ್ಪನೆಗಳು ಬದಲಾಗಿವೆ. ಭೌತಿಕ ಜಗತ್ತಿನಲ್ಲಿ ಕಂಡು ಬರುವ ಅಸಂಖ್ಯ ವಸ್ತುಗಳು, ಜೀವಿಗಳು, ಅಜೀವಿಗಳು ಎಲ್ಲವೂ ಕೆಲವೇ ಕೆಲವು ಧಾತುಗಳಿಂದ ಅರ್ಥಾತ್ ಪಂಚಭೂತಗಳಿಂದ ರಚಿತವಾಗಿವೆ ಎಂಬ ಪರಿಕಲ್ಪನೆ ಅನೇಕ ಶತಮಾನಗಳ ಹಿಂದೆ ಇತ್ತು. ಅವು ಐದಲ್ಲ, ಸುಮಾರು ನೂರು; ಈ ಧಾತುಗಳ ಕನಿಷ್ಠ ಪ್ರಮಾಣ ಎಂದರೆ ಪರಮಾಣು; ಎಲ್ಲ ಧಾತುಗಳ ಎಲ್ಲ ಪರಮಾಣುಗಳೂ ಕೆಲವೇ ಕೆಲವು ಮೂಲ ಕಣಗಳಿಂದ ರಚಿಸಲ್ಪಟ್ಟಿವೆ ಎಂದು ನಮಗೀಗ ಗೊತ್ತು.

ಇದೇ ರೀತಿ ಜೀವದಹುಟ್ಟು, ವಿಶ್ವದ ಹುಟ್ಟು, ಅನುವಂಶತೆ, ರೋಗ ವಿಧಾನದಂಥ ವಿಷಯಗಳಿಗೆ ಸಂಬಂಧಿಸಿಯೂ ನಮ್ಮ ಪರಿಕಲ್ಪನೆಗಳು ಬದಲಾಗುತ್ತ ಹೋಗಿವೆ. ಹೆಚ್ಚು ಹೆಚ್ಚು ವಾಸ್ತವವಾದುದನ್ನು ತಿಳಿಯುವ ಪ್ರವೃತ್ತಿಯೇ ಇಂಥ ಬದಲಾವಣೆಗೆ ಕಾರಣ.

ವಿಜ್ಞಾನದ ಪ್ರಕ್ರಿಯೆ ಕೆಲವೇ ವ್ಯಕ್ತಿಗಳಿಂದ ಮುಂದುವರಿಯುವಂಥದ್ದಲ್ಲ. ಮೇಲುನೋಟಕ್ಕೆ ಗೆಲಿಲಿಯೊ, ನ್ಯೂಟನ್, ಮೆಂಡೆಲ್, ಡಾರ್ವಿನ್, ಐನ್‌ಸ್ಟೈನರಂಥ ಪ್ರತಿಭಾಶಾಲಿಗಳಿಂದ ಅದರ ಚಾಲನೆ ಕ್ಷಿಪ್ರವಾದಂತೆಯೂ ಬದಲಾವಣೆಗೆ ಹೊಂದಿಕೊಳ್ಳಲಾಗಿದೆ ವ್ಯಕ್ತಿ, ಪ್ರಭುತ್ವಗಳಿಂದ ಅದು ಕುಂದಿದಂತೆಯೂ ತೋರುತ್ತದೆ. ಅವರೆಲ್ಲ ದೀರ್ಘ ಕಾಲದಲ್ಲಿ ಹರಿದು ಬಂದ ಮಾನವ ಪೀಳಿಗೆಯ ಪ್ರತಿನಿಧಿಗಳು ಎಂದುಕೊಳ್ಳೋಣ. ಆಗ ವಿಜ್ಞಾನದ ಹರಿವನ್ನು ರೂಪಿಸುವುದರಲ್ಲಿ ಇಡೀ ಮಾನವಕುಲವೇ ಪಾಲುಗೊಂಡಿದೆ ಎನ್ನಬಹುದು.

ವಿಜ್ಞಾನದ ಪ್ರಕ್ರಿಯೆಯಲ್ಲಿ ನೇರವಾಗಿ ತೊಡಗಿಸಿಕೊಂಡವರು ಸಾಮಾನ್ಯವಾಗಿ ಅನುಸರಿಸುವುದು. ವೈಜ್ಞಾನಿಕ ವಿಧಾನವನ್ನು ;

ಇದು ಒಬ್ಬೊಬ್ಬ ವ್ಯಕ್ತಿಯ ಅಪೇಕ್ಷೆ ಉಪೇಕ್ಷೆಗಳನ್ನು ಅವಲಂಬಿಸಿ ಬದಲಾಗುವುದಿಲ್ಲ. ಈ ವಿಧಾನವನ್ನು ಅನುಸರಿಸುತ್ತಿರುವ ಸೀಮಿತ ಅವಧಿಯಲ್ಲಾದರೂ ವ್ಯಕ್ತಿಗಳು ವಿಶಿಷ್ಟವಾದೊಂದು ಮನೋಭಾವವನ್ನು ರೂಪಿಸಿಕೊಂಡಿರಬೇಕಾಗುತ್ತದೆ. ಬಹು ವಿಶಾಲವಾದ ಸಮುದಾಯಕ್ಕೆ ಕಲ್ಯಾಣವನ್ನು ತರುವ ಬದಲು ಕೆಲವೇ ಜನರಿಗೆ ಲಾಭ ತರುವ ಸ್ವಹಿತಾಸಕ್ತಿ, ಅಹಮಿಕೆಯನ್ನು ಪೋಷಿಸುವ ಸ್ವಪ್ರತಿಷ್ಠೆ, ಪ್ರಿಯವೆನಿಸುವ ಅಥವಾ ಪೂಜ್ಯ ಎನಿಸುವ ಗ್ರಂಥಗಳಾಗಲೀ ವ್ಯಕ್ತಿ

ಗಳಾಗಲೀ ಉಚ್ಚರಿಸುವ ಅಭಿಪ್ರಾಯಕ್ಕೆ ಪೂರ್ವಾಪರ ವಿವೇಚನೆಯಿಲ್ಲದೆ ನೀಡುವ ಮನ್ನಣೆ—ಇವೆಲ್ಲ ವಾಸ್ತವತೆಯನ್ನು ತಿಳಿಯಲು ಅಡ್ಡಿತರುವ ವೃತ್ತಿ ನಿಷ್ಠ ಪ್ರವೃತ್ತಿಗಳು. ಇವುಗಳಿಂದ ವಿಜ್ಞಾನ ಬೆಳೆಯುವುದಿಲ್ಲ.

ಈ ಶತಮಾನದ ಐದನೇ ದಶಕದಲ್ಲಿ ಸೋವಿಯೆತ್ ರಷ್ಯದಲ್ಲಿ ಲೈಸೆಂಕೊ ಎಂಬ ವಿಜ್ಞಾನಿ ಜೀವ ವಿಜ್ಞಾನದ ನಿರಂಕುಶಾಧಿಕಾರಿಯಂತೆ ವರ್ತಿಸಿದ. ಮೆಂಡೆಲ್ ಆವಿಷ್ಕರಿಸಿದ ಹಾಗೂ ಮುಂದೆ ಪುರಸ್ಕೃತವಾದ ಅನುವಂಶತೆಯ ತತ್ವಗಳನ್ನು ಆಧಾರರಹಿತ ಕಲ್ಪನೆಗಳೆಂದು ಆತ ಸಾರಿದ. ಪರಿಸರ ಬದಲಾವಣೆಯಿಂದ ....ಗುಣಗಳಿರುವ ಜೀವಿಗಳನ್ನು ಹುಟ್ಟುಹಾಕಬಹುದೆಂದು ವಾದಿಸಿದ. ಅವನ ಅಭಿಪ್ರಾಯವನ್ನು ಒಪ್ಪದವರು ಧ್ವನಿ ಎತ್ತದಂಥ ಪರಿಸ್ಥಿತಿ ಇತ್ತು. ಆದರೆ ವಿಜ್ಞಾನದ ಪ್ರಕ್ರಿಯೆಗೆ ಅಡ್ಡ ಬರುವಂತಾದ ಲೈಸೆಂಕೊ ಯುಗ ದೀರ್ಘಕಾಲ ಉಳಿಯಲಿಲ್ಲ. ಕೆಲವೇ ವರ್ಷಗಳಲ್ಲಿ ಲೈಸೆಂಕೊ ಟೀಕೆಗೊಳಗಾಗಿ ಸ್ಥಾನ ಕಳೆಕೊಂಡ. ವಿಜ್ಞಾನದ ಬೆಳವಣಿಗೆಗೆ ಅಪ್ರತಿಮ ಕೊಡುಗೆಗಳನ್ನು ನೀಡಿದ ನ್ಯೂಟನ್ ಮಹಾಶಯನೇ ತರಂಗಗಳ ರೂಪದಲ್ಲಿ ಬೆಳಕು ಇರಬಹುದೆಂಬುದನ್ನು ಒಪ್ಪಲಿಲ್ಲ. ಮುಂದೆ ಪ್ರಯೋಗಗಳಿಂದಾಗಿ ಬೆಳಕಿನ ತರಂಗ ಸಿದ್ಧಾಂತ ಬೇರೂರಿಬಿಟ್ಟಿತು. ಅಂದರೆ ವಾಸ್ತವತೆಯ ಚಿತ್ರಣವನ್ನು, ಶಾಶ್ವತವಾಗಿ ತಡೆಹಿಡಿಯಲು ಸಾಧ್ಯವಾಗುವುದಿಲ್ಲ.

ವಿಜ್ಞಾನದ ಯಾವುದೇ ಒಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಅಭಿಪ್ರಾಯಗಳೂ ಸೂಚನೆಗಳೂ ಸಿದ್ಧಾಂತಗಳೂ ಬರುತ್ತಲೇ ಇರುತ್ತವೆ. ಇವಾವುದನ್ನೂ ನಗಣ್ಯ ಎಂದು ತಿರಸ್ಕರಿಸುವಂತಿಲ್ಲ. ಅಂದರೆ ಹೊಸ ವಿಚಾರಗಳನ್ನು ಸ್ವಾಗತಿಸುವ ಮುಕ್ತ ಮನಸ್ಸು ಹಾಗೂ ಅಭಿಪ್ರಾಯ ಭೇದವನ್ನು ತಾಳಬಲ್ಲ ಸಹಿಷ್ಣುತೆ ವಿಜ್ಞಾನದ ಪ್ರಕ್ರಿಯೆಯಲ್ಲಿ ಹುದಗಿದೆ.

ವಿಜ್ಞಾನದಲ್ಲಿ ಯಾವುದೇ ತೀರ್ಮಾನ ನ್ಯೂಕ್ಲಿಯರ್ ಶಕ್ತಿಯ ಉಪಯೋಗ, ಜೆನೆಟಿಕ್ ತಂತ್ರದ ಬಳಕೆ, ಕ್ಲೋನಿಂಗಿನ ಅನ್ವಯ ಹೀಗೆ ಯಾವುದೇ ಕ್ಷೇತ್ರದಲ್ಲಿ ಕೈಗೊಳ್ಳುವ ತೀರ್ಮಾನ–ಒಂದು ಹಂತದಲ್ಲಿ ಸರಿಯೆಂದು ಕಂಡು ಬಂದರೂ ಅದೇನೂ ಶಾಶ್ವತವಲ್ಲ. ಹೊಸ ಮಾಹಿತಿ, ಹೊಸ ಪರಿಣಾಮಗಳ ಬೆಳಕಿನಲ್ಲಿ ಅದು ಬದಲಾಗಬಹುದು. ಆದ್ದರಿಂದ ಒಂದು ರೀತಿಯ ಅನಿಶ್ಚಿತತೆ ವಿಜ್ಞಾನದಲ್ಲಿ ಅಂತರ್ಗತವಾಗಿದೆ. ವಿಜ್ಞಾನದ ಫಲವಾಗಿ ರೂಢಿಗೆ ಬರುವ ತಂತ್ರವಿದ್ಯೆ ಕೂಡ ಇದನ್ನು ಪ್ರತಿಬಿಂಬಿಸುವುದು.

ವಿಜ್ಞಾನದ ಪ್ರಕ್ರಿಯೆ ಪ್ರಯೋಗಾಲಯದೊಳಗೆ ಅಥವಾ ಆಸಕ್ತ ವಿಜ್ಞಾನಿಗಳ ಕೂಟದಲ್ಲಿ ಕಂಡು ಬರುವಂತೆ ಜನಸಮುದಾಯದಲ್ಲಿ ಎದ್ದು ಕಾಣುವುದಿಲ್ಲ. ನಿಜ. ವ್ಯವಸ್ಥೆ ದೊಡ್ಡದಾದಷ್ಟೂ ಜಡತ್ವವೂ ಹೆಚ್ಚುತ್ತದೆ. ಆದರೆ ಸಮುದಾಯ ಜೀವನದಲ್ಲಿ ಕಾಣುವ ಎಷ್ಟೋ ಒಳ್ಳೆಯ ಅಂಶಗಳು, ಒಳ್ಳೆಯ ಮೌಲ್ಯಗಳು–ಕಾಲಾಂತರದಲ್ಲಿ ಇಂದಿನ ವಿಜ್ಞಾನ ಪ್ರಕ್ರಿಯೆಯ ಪರಿಣಾಮಗಳೇ ಸರಿ. ಹೀಗೆ ಇಂಗುವ ದರ ಹೆಚ್ಚಬೇಕೆಂಬ ಆಶಯವನ್ನು ನಮ್ಮ ರಾಷ್ಟ್ರದ ಸಂವಿಧಾನವೇ ಪುರಸ್ಕರಿಸಿದೆ.

ಸಾವಯವ ಕೃಷಿ—ನನ್ನ ಅನುಭವ

ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ'
ಸಾವಯವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು-೫೭೦೦೦೮

ನಿಸರ್ಗಕ್ಕೆ "ಬುದ್ಧಿವಂತ ಮಾನವ" ಪ್ರಾಣಿಯನ್ನು ಸೃಷ್ಟಿಸುವಲ್ಲಿ ಏನಾದರೂ ಉದ್ದೇಶವಿದ್ದುದಾದರೆ ಅದು : ಈತ ಪರಿಸರದ ಶಿಶುವಾಗಿ ಪೋಷಕನಾಗಿ ಪಾಲಕನಾಗಿ ಸಂವರ್ಧಕನಾಗಿ ಬಾಳಿ ಬೆಳಗಬೇಕು ಎಂಬುದು ಮಾತ್ರ. ಆದರೆ ಈ "ಬುದ್ಧಿವಂತಿಕೆ" ಎಂಬ ನಿಸರ್ಗದತ್ತ ಬಳುವಳಿಯನ್ನು ಈತ ಸ್ವಾರ್ಥಪೋಷಣೆ ಸಂವರ್ಧನೆ ದಿಶೆಯಲ್ಲಿ ಪೋಲುಮಾಡುತ್ತ ವರ್ತಮಾನ ಹೀನಸ್ಥಿತಿಗೆ ಬಂದಿದ್ದಾನೆ. ಆದ್ದರಿಂದ ಈಗ ಬೇಕಾದದ್ದು ಬೋಧನೆ ಅಲ್ಲ, ಅನುಷ್ಠಾನ. ಇಂಥ ಒಂದು ಅನುಷ್ಠಾನದ ನಿದರ್ಶನ ಪ್ರಸಕ್ತ ಲೇಖನ.

ಜನವರಿ ೧ ರಿಂದ ಹಿಡಿದು ಡಿಸೆಂಬರ್ ೩೧ರ ವರೆಗೆ ನಮಗೆ ಹಬ್ಬಗಳ ಕೊರತೆ ಏನೂ ಇಲ್ಲ. ಕೆಲಸ ಮಾಡದಿರಲು ನಮ್ಮಲ್ಲಿ ಬೇಕಾದಷ್ಟು ನೆಪಗಳಿವೆ. ಇಂಥಾ ಹಬ್ಬಗಳ ಸಾಲಿಗೆ ಇದೀಗ ಹೊಸ ಕೊಡುಗೆ—ವಿಶ್ವಪರಿಸರ ದಿನಾಚರಣೆ. ನಮ್ಮ ಪರಂಪರೆಯ ಹಬ್ಬಗಳಿಗೂ ಇಂದಿನ ಹೊಸ ಹಬ್ಬಕ್ಕೂ ಪ್ರಮುಖ ವ್ಯತ್ಯಾಸವಿದೆ. ಮೊದಲಿನ ಎಲ್ಲ ಹಬ್ಬಗಳೂ ಸಾಧನೆಯ ಸಮಾವೇಶ. ಆದರೆ ಈಗಿನ ಹಬ್ಬ ನಮ್ಮ ಸೋಲಿನ ಪ್ರತೀಕ. ಹಳೆಯ ಹಬ್ಬ ದುಷ್ಟ ಶಕ್ತಿಯ ಮೇಲೆ ಶಿಷ್ಟ ಶಕ್ತಿಯ ಗೆಲುವು. ಹೊಸ ಹಬ್ಬ ನಮ್ಮ ದೌರ್ಜನ್ಯದ ಅರಿವು. ಹಾಗಾಗಿ ಪರಿಸರ ದಿನಾಚರಣೆ ಎಂಬುದು ನಿಜವಾಗಿ ಹಬ್ಬವೇ ಅಲ್ಲ. ನಮ್ಮ ಹೊಲಸಿನ ಪ್ರದರ್ಶನ, ಪರಿಸರ ದಿನಾಚರಣೆ ನಮ್ಮ ಪರಂಪರೆಯ ಎಲ್ಲ ಹಬ್ಬಗಳೂ "ಅಸಂಗತ" ಎಂಬುದನ್ನು ಸಾರಿ ಹೇಳುತ್ತಿವೆ. ಪರಂಪರೆಯ ಹಬ್ಬಗಳು ತಮ್ಮ ನಿಜ ಆಶಯವನ್ನು ಈಡೇರಿಸುತ್ತಿದ್ದರೆ ಅಥವಾ ನಾವು ಅಂತೆ ನಡೆದಿದ್ದರೆ ಇಂದು ಪರಿಸರದ ಹಬ್ಬ ಆಚರಿಸುವ ಆವಶ್ಯಕತೆಯೇ ಬರುತ್ತಿರಲಿಲ್ಲ. ಪರಂಪರೆಯ ಹಬ್ಬಗಳ ತಿರುಳು ಪರಿಸರ ಪ್ರೇಮದಲ್ಲಿ ಇದೆ. ಮೌಲ್ಯಗಳ ಆರಾಧನೆಯಲ್ಲಿ ಇದೆ. ಅಂಥಾ ಪ್ರೇಮವನ್ನೂ ಮೌಲ್ಯವನ್ನೂ ನಾವು ಕಳಕೊಂಡು ಧನ ಕಾಮ್ಯ ಕರ್ಮಗಳನ್ನು ಮಾಡುತ್ತಿರುವ ಈ ಕಾಲ ನಮ್ಮ ಪರಂಪರೆಯ ಹಬ್ಬಗಳು ಎಸೆದ ಹಣ್ಣಿನ ಸಿಪ್ಪೆಗಳಾಗಿವೆ. ಇಂಥಾ ಹಬ್ಬಗಳ ಜೊತೆಗೆ ಇನ್ನೊಂದು ಹಬ್ಬ ಸೇರುವುದರಿಂದ ಪರಿಸರಕ್ಕೆ ಲಾಭವಾಗುವುದು ಸಾಧ್ಯವೇ ?

ನಮ್ಮ ತಪ್ಪಿನ ಅರಿವು ನಮಗಾಗುವುದು ಬಹಳ ಸಂತೋಷದ ವಿಷಯವೆ. ಹಾಗಾಗಿ ಜ್ಞಾನೋದಯವಾದ ದಿನ ಹಬ್ಬದ ದಿನವೇ ಹೌದು. ಆದರೆ ಇದು ವರ್ಷವರ್ಷ ಸಂಭ್ರಮಿಸಿ ಮೆರವಣಿಗೆಮಾಡಿ ಬಿಡಬೇಕಾದ ದಿನವಲ್ಲ. ದಿನ ದಿನವೂ ನಮ್ಮ ವರ್ತನೆಯಲ್ಲಿ ಅರಿವಿನ ಹೊಳಹು ಕಾಣಿಸಬೇಕಾದ ದಿನ. ನಾವು ಹಾಳುಮಾಡಿದ ನಮ್ಮ ಪರಿಸರಕ್ಕೆ ನಮ್ಮಿಂದ ಕೊಡುಗೆ ಸಲ್ಲಬೇಕಾಗಿದೆ. ನಾವು ದಿನ ದಿನವೂ ಅಭಿವೃದ್ಧಿಯಾಗಬೇಕಾಗಿದೆ. ಈ ಪ್ರಪಂಚದ ಎಲ್ಲ ಜೀವಿಗಳಿಗೂ ಸಮಾನ ಗೌರವ, ಅವಕಾಶ ಸಿಗುವ ಸ್ಥಿತಿಯೇ ನಿಜವಾದ ಅಭಿವೃದ್ಧಿ—ನಾಗರಿಕತೆ.

ಇಂಥಾ ಅಭಿವೃದ್ಧಿ ಸಾವಯವ—ಸಹಜ ಕೃಷಿಯಿಂದ ಮಾತ್ರ ಸಾಧ್ಯ. ಕೃಷಿ ಎಂದರೆ ಸೃಷ್ಟಿಕ್ರಿಯೆ. ಕೈಗಾರಿಕೆಗಳು ನಾಶದ ಕ್ರಿಯೆ. ಕೈಗಾರಿಕೆಗಳ ದಾರಿ ಹಿಡಿದು, ಸೃಷ್ಟಿಕ್ರಿಯೆಯಾಗಬೇಕಾದ ಕೃಷಿಯೂ ಆಧುನೀಕರಣಕ್ಕೊಳಗಾಗಿ ಇಂದು ನಾಶದ ಕ್ರಿಯೆಯಾಗಿ ಬದಲಾಗಿದೆ. ಹಾಗಾಗಿ ಸೃಷ್ಟಿ ಎಂಬುದು ಇಂದು ಇಲ್ಲ. ಎಂತಲೇ ಪರಿಸರ ದಿನಾಚರಣೆಯನ್ನು ಆಚರಿಸಬೇಕಾದಂಥ ದುಃಖಮಯ ಸನ್ನಿವೇಶ ನಮಗೆ ಎದುರಾಗಿದೆ. ಸೃಷ್ಟಿಕ್ರಿಯೆ ಸಾವಯವ—ಸಹಜ ಕೃಷಿಯಿಂದ ಮಾತ್ರ ಸಾಧ್ಯ. ಜೀವಂತ ಕೃಷಿಯ ಹೃದಯ ಸ್ವಾವಲಂಬನೆಯಲ್ಲಿದೆ. ಪ್ರಕೃತಿಯ ಆರಾಧನೆಯಲ್ಲಿದೆ. ನಾವು ನಮ್ಮ ಎಲ್ಲ ಹಬ್ಬಗಳಲ್ಲೂ ದೇವರನ್ನು ಆರಾಧಿಸುತ್ತೇವೆ. ಅಂಥಾ ದೇವರ ಹೆಚ್ಚುಗಾರಿಕೆಯಾದರೂ ಏನು?

ಯಾರು ರೂಪ, ವಿತ್ತ, ವಿದ್ಯೆ, ಗುಣ, ಶೀಲಂಗಳಲ್ಲಿ ಸಾಮಾನ್ಯರಿಗಿಂತ ಹೆಚ್ಚಿನ ಎತ್ತರವನ್ನು ಸೇರುತ್ತಾನೋ ಅವನು ಆದರ್ಶನಾಗುತ್ತಾನೆ. ಶ್ರೇಷ್ಠ ಗುರುವಾಗುತ್ತಾನೆ. ಆರಾಧ್ಯ ದೇವನಾಗುತ್ತಾನೆ. ದೇವರು ಸ್ವಾವಲಂಬಿ ಹಾಗೂ ಸಮರ್ಥ ನಿಗ್ರಹಾನುಗ್ರಹ ಶಕ್ತಿ ಉಳ್ಳವನು. ಇಂಥಾ ದೇವರನ್ನು ಪ್ರೀತಿಯಿಂದ ಆರಾಧಿಸುವುದರಿಂದ ನಾವೂ ಆ ಸಾಮರ್ಥ್ಯದೆಡೆಗೆ ಸಾಗಬೇಕೆಂಬುದೇ ಆಶಯವು. ಆದರೆ ಇಂದಿನ ನಮ್ಮ ಸ್ಥಿತಿ ಹೇಗಿದೆ?—ನಾವು ದಿನದಿಂದ ದಿನಕ್ಕೆ ಹೆಚ್ಚುಹೆಚ್ಚು ಪರಾವಲಂಬಿಗಳಾಗುತ್ತಿದ್ದೇವೆ. ಲಾರಿ ಚಾಲಕರಿಗೆ ದೇಶದ ಪ್ರಧಾನಿ ನಡುಗಬೇಕಾದಸ್ಥಿತಿ ನಮ್ಮದು. ಹಾಗಾದರೆ ನಮ್ಮ ಆರಾಧ್ಯ ದೇವರಲ್ಲಿ, ನಮ್ಮ ಆರಾಧನೆಯಲ್ಲಿ ದೋಷವಿದೆ ಎಂಬುದು ತರ್ಕಬದ್ಧವಲ್ಲವೇ? ದೇವರಲ್ಲಿ ಐದು ಗುಣವಿಶೇಷಗಳಿರುವುದನ್ನು, ಜ್ಞಾನಿಗಳು ಗುರುತಿಸಿರುವುದನ್ನು ನಾನು ಈಗಾಗಲೇ ಪಟ್ಟಿ ಮಾಡಿದ್ದೇನೆ. ಅದರಲ್ಲಿ ಎರಡನೆಯದಾದ ವಿತ್ತದ ಕಡೆಗೆ ಮಾತ್ರ ಇಂದು ನಮ್ಮ ಆರಾಧನೆ ಇರುವುದರಿಂದ (ಇದು ಐದನೇ ಒಂದಂಶ ಮಾತ್ರ) ನಮ್ಮ ಕಲ್ಪನೆಯ ಮಹಾಸೌಧದ ಪಂಚಾಂಗ ಈಗ ಕುಸಿಯುತ್ತಿರುವುದು. (ಪಂಚಗುಣ ವಿಶೇಷಗಳನ್ನು ಆರಾಧಿಸಿದಾಗ ಮಾತ್ರ ಪಂಚಾಂಗ ಭದ್ರವಾಗುವುದು.)

ಪಂಚಾಂಗ ಸುಂದರವಾದ, ಪಂಚಾಂಗ ಭದ್ರವಾದ ದೇವರೇ ನಮ್ಮ ಪ್ರಕೃತಿ. ರೂಪ, ವಿತ್ತ, ವಿದ್ಯೆ, ಗುಣ, ಶೀಲಗಳು ಮೊಗೆದಷ್ಟೂ ಮುಗಿಯದ ಅಮೃತ ಕಳಶ ನಮ್ಮ ನಿಸರ್ಗ— ಐದನ್ನೂ ಒಟ್ಟಿಗೆ ಮೊಗೆ

ದಾಗ ಮಾತ್ರ. ವಿತ್ತವೊಂದನ್ನೇ ಮೊಗೆದಾಗ ಪರಿಸರ ವಿಕಾರಗೊಳ್ಳುವುದು. ನಮ್ಮ ಎಲ್ಲ ಹಬ್ಬಗಳೂ ಅರ್ಥಕಳಕೊಳ್ಳುವುವು.

ಸ್ವಾವಲಂಬನೆ, ಸಂತೃಪ್ತಿ ಬಂದಾಗ ನಾವು ವಿಶೇಷವಾಗಿ ಹಬ್ಬ ಮಾಡಬೇಕಾಗಿಲ್ಲ. ದಿನವೂ ಹಬ್ಬದ ಸಂಭ್ರಮ ಇರುವುದು. ಇಂಥಾ ಅವಕಾಶ ಬರಬೇಕಾದರೆ ನಮ್ಮ ಹಬ್ಬಗಳಿಗೆ ಅರ್ಥ ಇರಬೇಕಾದರೆ ಮತ್ತು ನಾವು ಸಾವಯವ ಸಹಜ ಕೃಷಿಗೆ ಬರಬೇಕಾಗಿದೆ. ಇದು ಸಾಹಿತ್ಯದಿಂದ ನಾನು ಉರು ಹೊಡೆದ ಪಠ್ಯವಲ್ಲ. ಸ್ವಾನುಭವದಿಂದ, ಪ್ರಕೃತಿಯ ಒಡನಾಟದಿಂದ ಕಲಿತ ಪಾಠ.


ಈ ಭೂಮಿ ಸೃಷ್ಟಿಯಾದಾಗ ಇಲ್ಲಿ ಬೆಂಕಿ ಮಾತ್ರವಿತ್ತು. ಅಂಥೂ ಜೀವ ಸೃಷ್ಟಿ ಆದದ್ದು ಗಿಡ, ಮರ, ಬಳ್ಳಿಗಳ ನಿರಂತರ ಬೆಳವಣಿಗೆಯಿಂದ. ಅವಿರತ ದುಡಿಮೆಯಿಂದ ಇಂಥಾ ಗಿಡ, ಮರ, ಬಳ್ಳಿಗಳು ಭೂಭಾಗದ ಶೇಕಡಾ ೬೦ ಇದ್ದಾಗ ಮಾನವ ಸೃಷ್ಟಿಗೊಂಡ ತನ್ನ ಸೃಷ್ಟಿಗೆ ಕಾರಣವಾದ ಕಾಡನ್ನು ಕಡಿದ, ಧನಕಾಮುಕ್ಕಾಗಿ ಕಡಿಯುತ್ತಾ ಕಡಿಯುತ್ತಾ ಇಂದು ಶೇಕಡಾ ೬ರ ಅಂಚಿಗೆ ತಂದಿರುವ ದೆಸೆಯಿಂದ ನಾಗರೀಕತೆಯು ಪಂಚಾಂಗ ನಲುಗಿದೆ. ಎಂತಲೇ ಪರಿಸರ ದಿನಾಚರಣೆ ನಡೆಯಬೇಕಾಗಿದೆ. ಸರ್ವಾಂಗ ಸುಂದರ ದೇವರ ಪರಿಕಲ್ಪನೆ, ಆರಾಧನೆ ಆರಂಭವಾಗಬೇಕಾಗಿದೆ.

ಈ ಪ್ರಪಂಚದಲ್ಲಿ ಇರುವ ಎಲ್ಲ ಜೀವಿಗಳಿಗೂ ಬದುಕಲು ಗಾಳಿ, ನೀರು, ಆಹಾರ ಅತ್ಯಂತ ಅಗತ್ಯವಾಗಿ ಬೇಕು. ಇಂಥಾ ಮೂರನ್ನೂ ಸೃಷ್ಟಿಸುವುದು ಸಸ್ಯಗಳು ಮಾತ್ರ. ಹಾಗಾಗಿ ಜೀವಿಯ ಉಳಿವಿನಲ್ಲಿ ಕೈಗಾರಿಕೆಗಿಂತ ಪ್ರಧಾನ ಪಾತ್ರ ಕೃಷಿಗೆ ಎಂಬುದು ನಿರ್ವಿವಾದ ಸತ್ಯ. ಆದ್ದರಿಂದ ಕೃಷಿಯಲ್ಲಿ ಆದ್ಯಂತಿಕವಾದ ಬದಲಾವಣೆಯಾದರೆ ಮಾತ್ರ. ಈಗ ದೇಶ, ಜನ, ಮನ ಕೈಗಾರಿಕೆಗೆ ಕೊಡುತ್ತಿರುವ ಪ್ರಾಮುಖ್ಯತೆಯನ್ನು ಕೃಷಿಯು ಅಚ್ಯುತೆಯಾಗಿ ಬದಲಾಯಿಸಿದರೆ ಮಾತ್ರ ಪರಿಸರ ಚಳುವಳಿ ಪ್ರಯೋಜನಕಾರಿಯಾಗುವುದು. ಕೃಷಿಗೆ ಕೈಗಾರಿಕೆಯು ಸ್ಥಾನಮಾನ ಕೊಡುವುದು ಎಂದರೆ ಕೈಗಾರಿಕೆಯಂತೆಯೇ ಕೃಷಿಯಲ್ಲೂ ಹಣ ಗೋರಲು ಅವಕಾಶ ಮಾಡಿಕೊಡುವುದು ಎಂದು ಅರ್ಥವಲ್ಲ. ಕೈಗಾರಿಕೆಯಲ್ಲಿ ಹಣಗೋರುವ ಅವಕಾಶವನ್ನು ಕಡಿಮೆ ಮಾಡುವುದು ಎಂದು ಅರ್ಥ ಅಥವಾ ಕೈಗಾರಿಕೆಗಾಗಿ ಕೃಷಿ ಮಾಡುವ ಅನರ್ಥ ಹೋಗಬೇಕೆಂಬುದೇ ಆಶಯ.

ಜನರ, ಜನಾಂಗದ ಬೆಳವಣಿಗೆಯಲ್ಲಿ ಕಾಡಿನ ಪಾತ್ರವನ್ನು ಸ್ಥೂಲವಾಗಿ ತಿಳಿಸಿದೆ. ಪರಿಸರ ಚಳುವಳಿ ವಿಸ್ತಾರವಾಗಿ ಹೇಳುತ್ತಿದೆ. ಇಂಥಾ ಕಾಡನ್ನು ಮತ್ತೆ ನಾವು ಬೆಳೆಸಬೇಕು. ಆದರೆ ಹೇಗೆ? ಕಾಡು ಬೆಳೆದರೆ, ಬೆಳೆದ ಜನ ಸಂಖ್ಯೆಗೆ ಹೊಟ್ಟೆ ತುಂಬಿಸುವುದು ಹೇಗೆ? ಈ ಸಂದರ್ಭದಲ್ಲಿ ಉತ್ತರವಾಗುವುದು ಸಾವಯವ – ಸಹಜ ಕೃಷಿ ಅನುಭವಗಳು. ನಮ್ಮ ಭೂಮಿಯಲ್ಲಿ ಶೇಕಡಾ ೬೦ ಭಾಗ ಕೃಷಿ ಭೂಮಿ ಹಾಗೂ ಶೇಕಡಾ ೭೦ ಭಾಗ ಕೃಷಿಕರು. ಹಾಗಾಗಿ ನಮ್ಮ ಕಾಡು ಹೆಚ್ಚಾಗಬೇಕಾದರೆ, ನಮ್ಮ ಪರಿಸರ ಉಳಿದು ನಮ್ಮ ನಾಗರೀಕತೆ ಉಳಿಯಬೇಕಾದರೆ ಅದು ಕೃಷಿಕರಿಂದ ಮಾತ್ರ ಸಾಧ್ಯ. ಕೃಷಿ ಭೂಮಿಯಲ್ಲಿ ಮಾತ್ರ ಸಾಧ್ಯ.

ಕೃಷಿ ಭೂಮಿಯಲ್ಲಿ ಸಸ್ಯ ವೈವಿಧ್ಯಗಳನ್ನು ಹೆಚ್ಚಿಸುತ್ತಾ, ಹೆಚ್ಚಿಸುತ್ತಾ ಜೊತೆ ಜೊತೆಯಾಗಿ ಆಹಾರ ವಸ್ತುಗಳನ್ನು ಬೆಳೆಯುವ, ಪ್ರಕೃತಿಯಲ್ಲಿ ಸಮೃದ್ಧವಾಗಿ ಬರುವ ಅಸಾಂಪ್ರದಾಯಿಕ ಸಸ್ಯಗಳಲ್ಲಿ ಆಹಾರವನ್ನು ಕಾಣುವ ಪ್ರಕೃತಿಯ ಮಹೋನ್ನತ ಪಾಠ ಸಾವಯುವ-ಸಹಜ ಕೃಷಿ. ಇಂದು ಕೃಷಿಗೆ ಬಹಳಷ್ಟು ಒಳಸುರಿಗಳು ಬೇಕು—ಬೀಜ, ಗೊಬ್ಬರ, ಕೀಟನಾಶಕ ಕಳೆನಾಶಕ, ನೀರು. ಈ ಒಳಸುರಿಗಳು ಇಲ್ಲವಾದರೆ ಕೃಷಿ ಸರ್ವತಂತ್ರ ಸ್ವತಂತ್ರ ಸೃಷ್ಟಿಯ ಕ್ರಿಯೆ, ಸ್ವಾವಲಂಬೀ ಬದುಕು. ಕಾಡನ್ನೂ-ಕೃಷಿಯನ್ನೂ ಬಹು ಹಂತಗಳಲ್ಲಿ ಜೊತೆ ಜೊತೆಯಾಗಿ ಮಾಡುವುದರಿಂದ ಹಂತಹಂತವಾಗಿ ನಮ್ಮ ಒಳಸುರಿ ಕಮ್ಮಿಯಾಗುತ್ತಾ ಹೋಗುವುದು. ಸ್ವಾವಲಂಬನೆ ಹೆಚ್ಚುತ್ತಾ ಹೋಗುವುದು. ಆತ್ಮವಿಶ್ವಾಸ ಬಲಿಯುವುದು. ಇಂಥಾ ಕೃಷಿಯ ಪ್ರಾರಂಭ—ಸಾವಯುವ ಕೃಷಿ.... ಎಂದರೆ ರಾಸಾಯನಿಕ ರಹಿತ ಗೊಬ್ಬರವನ್ನು ಉಪಯೋಗಿಸುವುದು. ಈ ಕೃಷಿಯ ಅಂತ್ಯ ಸಹಜ ಕೃಷಿ ಎಂದರೆ ಎಲ್ಲಾ ಗೊಬ್ಬರಗಳೂ ಅಲ್ಲಲ್ಲೇ ಸೃಷ್ಟಿಯಾಗುವ ಮೇರು ಎತ್ತರವನ್ನು ತಲುಪುವುದು. ಇಂಥಾ ಆದರ್ಶ, ಗುರು, ದೇವರು ನಮ್ಮ ಪ್ರಕೃತಿ. ಪ್ರಕೃತಿಯ ಆರಾಧನೆಯಿಂದ ಮಾತ್ರ ನಾವು ದೇವರದ್ದಾದ ಸ್ವಾವಲಂಬೀ ಸಾಮರ್ಥ್ಯದೆಡೆಗೆ ಸಾಗಲು ಸಾಧ್ಯ. ಇದು ಸಾಧ್ಯವಾಗುವ ಕೆಲಸಗಳು ಮಾತ್ರ ನಮ್ಮ ಬಲಗಳಾಗುವುವು. ಅದಲ್ಲದ ಆರಾಧನೆ ದೌರ್ಬಲ್ಯವೆನಿಸುವುದು. ತನ್ನನ್ನು ತಾನು ರಕ್ಷಿಸಿಕೊಳ್ಳಲಾರದ ದುರ್ಬಲನನ್ನು ಯಾವ ದೇವರೂ ರಕ್ಷಿಸಲಾರ ಎಂದು ನಾವು ದೇವರೆಂದು ನಂಬಿದ ಶ್ರೀ ಕೃಷ್ಣನೇ ಸಾರಿದ್ದಾನೆ.

ಆದ್ದರಿಂದ ನಾವೆಲ್ಲರೂ ಸಾವಯುವ—ಸಹಜ ಕೃಷಿಕರಾಗೋಣ, ಅಂಥಾ ಕೃಷಿಗೆ ಪ್ರೋತ್ಸಾಹಿಸೋಣ, ಅಂಥಾ ಕೃಷಿ ವಸ್ತುಗಳನ್ನು ಆಗ್ರಹಿಸೋಣ.



ಅರಳಿದ ಗುಲಾಬಿಯ ಸುವಾಸನೆ ನಮಗೆಬೇಕಾಗಿದ್ದರೆ ನಾವದರ ಮುಳ್ಳಿನ ಚುಚ್ಚುವಿಕೆಯ ನೋವನ್ನು ಸಹಿಸಬೇಕಾಗುತ್ತದೆ. ಮುಂಜಾವಿನ ಮಾಧುರ್ಯ ಬೇಕಾಗಿದ್ದರೆ ರಾತ್ರಿಯ ಗಾಢಾಂಧಕಾರ ಕಳೆಯಬೇಕಾಗುತ್ತದೆ.

—ನೇತಾಜಿ ಸುಭಾಷ್ ಚಂದ್ರಬೋಸ್

ಪುಸ್ತಕ ಪರಿಚಯ

ಕಲಾವಿದ ಕಂಡ ಫ್ರಾನ್ಸ್—ಲೇಖಕರು: ಪಿ. ಆರ್. ಶಿಪ್ಪೇಸ್ವಾಮಿ; ಡೆಮ್ಮಿ ೧/೮, ಪುಟಗಳು xiv+೧೧೨, ಬೆಲೆ: ೪೫ ರೂ. ಪ್ರಕಾಶಕರು: ಮಯೂರ್ ಪಬ್ಲಿಕೇಷನ್ಸ್, ನಂ ೬೧೮, ೨ನೇ ಮೈನ್, ೨ನೇ ಕ್ರಾಸ್, ಎನ್.ಜಿ.ಇ.ಎಫ್. ಲೇಔಟ್, ಬೆಂಗಳೂರು-೫೬೦ ೦೬೨;

'ಯಕ್ಷಗಾನ ಸೂತ್ರ ಬೊಂಬೆ ಆಟ'ದ ತಂಡದ ನಾಯಕರಾಗಿ ಶ್ರೀ ಪಿ. ಆರ್. ಶಿಪ್ಪೇಸ್ವಾಮಿ ಅವರು ಫ್ರಾನ್ಸ್‌ಗೆ ಹೋಗಿ ಬಂದ ಅನುಭವವನ್ನು 'ಕಲಾವಿದ ಕಂಡ ಫ್ರಾನ್ಸ್' ಕೃತಿಯಲ್ಲಿ ನಿರೂಪಿಸಿದ್ದಾರೆ. ಫ್ರಾನ್ಸ್ ಯಾತ್ರೆಯ ಮೊದಲ ಅಧ್ಯಾಯ 'ಬೆಂಗಳೂರಿಂದ ಮುಂಬೈಗೆ' ಪ್ರಾರಂಭವಾಗಿ 'ಕಲಾನಗರಿಗೆ ಕೊನೆಯ ನಮಸ್ಕಾರ' ದೊಂದಿಗೆ ೨೦ ನೆಯ ಅಧ್ಯಾಯದಲ್ಲಿ ಮುಕ್ತಾಯವಾಗುತ್ತದೆ.

ವಿಮಾನಯಾನದಲ್ಲಿ ತಮಗೆ ಆದ ಅನುಭವ, ಫ್ರಾನ್ಸ್‌ನ ಜನಜೀವನ, ಅವರ ಕಲಾ ಶ್ರೀಮಂತಿಕೆ, ಸ್ವಚ್ಛತೆ, ಶಿಸ್ತುಬದ್ಧ ನಡೆನುಡಿ, ಮ್ಯೂಸಿಯಂಗಳ ವೈಶಿಷ್ಟ್ಯ, ಸೂತ್ರಬೊಂಬೆ ಆಟಕ್ಕೆ ಅಲ್ಲಿನ ಜನರಿಂದ ದೊರೆತ ಪ್ರತಿಕ್ರಿಯೆ, ಈ ಎಲ್ಲವನ್ನೂ ಕಲಾವಿದರಾಗಿ ಅನುಭವಿಸಿ, ಲೇಖಕರಾಗಿ ನಿರೂಪಿಸಿದ್ದಾರೆ ಶ್ರೀ ಪಿ. ಆರ್. ಶಿಪ್ಪೇಸ್ವಾಮಿ ಅವರು.

ಕೃತಿಯ ಅಲ್ಲಲ್ಲಿ ನವಿರು ಹಾಸ್ಯ ಲಾಸ್ಯವಾಡುತ್ತದೆ. ಲೇಖಕರು ಈ ಹಾಸ್ಯ ಸನ್ನಿವೇಶಗಳಿಗೆ ತಮ್ಮ ಬೊಂಬೆ ಆಟದ ತಂಡದ ಸದಸ್ಯರನ್ನೇ ಒಳಗುಮಾಡುತ್ತಾರೆ. ಈ ಸದಸ್ಯರ ವರ್ತನೆ ಔಚಿತ್ಯದ ಮಿತಿಯಲ್ಲಿದ್ದಾಗ ಹಾಸ್ಯಕ್ಕೆ ವಸ್ತುವಾದರೆ, ಔಚಿತ್ಯದ ಎಲ್ಲೆ ಮೀರಿದಾಗ ಖೇದದಲ್ಲಿ ಪರ್ಯವಸಾನವಾಗುತ್ತದೆ.

ಫ್ರಾನ್ಸ್ ದೇಶದಲ್ಲಿರುವಷ್ಟು ಅಲ್ಪ ದಿನಗಳಲ್ಲಿ ಅಲ್ಲಿನ ಒಳ್ಳೆಯದೆಲ್ಲವನ್ನೂ ಹೀರಿಕೊಂಡು. ತನ್ನ ನಾಡಿನಲ್ಲಿ ಅಳವಡಿಸಬೇಕೆಂಬ ತವಕ ಲೇಖಕರನ್ನು ಎಡೆಬಿಡದೆ ಕಾಡುತ್ತದೆ. "ಇಲ್ಲಿಯ ಕಲಾ ಗ್ಯಾಲರಿಗಳು, ಸಂಗೀತ, ನಾಟಕ ಶಾಲೆಗಳು ಫ್ರೆಂಚರಿಗೆ ದೇವಾಲಯಗಳಿದ್ದಂತೆ. ನಾವು ನಮ್ಮ ದೇವಾಲಯದ ಗರ್ಭಗುಡಿಯಲ್ಲಿ ಪ್ರವೇಶಿಸುವಂತೆ, ಅವರು ಇಲ್ಲಿ ನಿಶ್ಯಬ್ಧವಾಗುತ್ತಾರೆ. ಇಲ್ಲಿ ಕತ್ತಲ ಬದಲು ಬೆಳಕಿರುತ್ತದೆ. ಮೂರ್ತಿ ಪೂಜೆಯ ಬದಲು ಕಲಾ ಸಂದರ್ಶನವಾಗುತ್ತದೆ." ಎಂದು ಕಲಾನಗರಿಗೆ ಕಲಾವಿದ ಲೇಖಕರು ಕೊನೆಯ ನಮಸ್ಕಾರ ಹೇಳುತ್ತಾರೆ.

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಅರ್ಪಿತವಾಗಿರುವ ಈ ಕೃತಿಯು ಪೂಜ್ಯರ ಆಶೀರ್ವಚನದೊಂದಿಗೆ ಶ್ರೀ ಬರಗೂರು ರಾಮಚಂದ್ರಪ್ಪ ಅವರ ಪ್ರಾಸ್ತಾವಿಕ ಮಾತುಗಳನ್ನು ಒಳಗೊಂಡಿದೆ. ಖ್ಯಾತ ಕಲಾವಿದ ಶ್ರೀ ಚಂದ್ರನಾಥ್ ಅವರ ಸಾಂಕೇತಿಕ ಮುಖಚಿತ್ರ ಕೃತಿಗೆ ಮೆರುಗು ನೀಡಿದೆ. ಕಲಾವಿದ ಲೇಖಕರು ಕುಂಚಿಸಿದ ಚಿತ್ರಗಳೊಡನೆ ಆರ್ಟ್ ಕಾಗದದಲ್ಲಿ ತಪ್ಪಿಲ್ಲದೆ ಅಂದವಾಗಿ ಮುದ್ರಣವಾಗಿದೆ. ಒಟ್ಟಾರೆಯಾಗಿ ಕೃತಿಯೊಂದು ಎಷ್ಟು ಸಮರ್ಪಕವಾಗಿ ಹೊರಬರಲು ಸಾಧ್ಯವೋ ಅಷ್ಟನ್ನೂ ಮೈಗೂಡಿಸಿಕೊಂಡು 'ಕಲಾವಿದ ಕಂಡ ಫ್ರಾನ್ಸ್' ಹೊರಬಂದಿದೆ.

ಗೋಪುರದ ದೀಪ—ಲೇಖಕರು : ಡಾ|| ಮ. ಸು. ಕೃಷ್ಣಮೂರ್ತಿ ; ತಳಗವಾದಿ ಪ್ರಕಾಶನ, ೨೨, 'ವಿಜಯಶ್ರೀ' ಕುವೆಂಪುನಗರ, ಮೈಸೂರು-೨೩; ಪುಟಗಳು : ೧೮೦, ಕ್ರೌನ್ ಅಷ್ಟದಳ, ಬೆಲೆ : ೫೫-೦೦ ರೂ.

ಪ್ರಸಿದ್ಧರಾದವರ ಬಗ್ಗೆ ಕೃತಿ ರಚಿಸುವುದು ಸಾಮಾನ್ಯ. ಆದರೆ ಹತ್ತರಲ್ಲಿ ಹನ್ನೊಂದಾದವರನ್ನೂ ಗುರುತಿಸಿ ಎಲ್ಲರನ್ನೂ ಒಂದೇ ಸಾಲಿನಲ್ಲಿ ಸೇರಿಸಿ ಕೃತಿ ರಚಿಸುವುದು ಒಂದು ವಿಶೇಷ. ಅಂಥ ಒಂದು ವಿಶೇಷ ಕೃತಿ 'ಗೋಪುರದ ದೀಪ.'

ಶಿಕ್ಷಣತಜ್ಞ, ವಿಚಾರವಾದಿ ಡಾ|| ಎಚ್. ನರಸಿಂಹಯ್ಯ, ರಿಕ್ಷಾಚಾಲಕ ಚಿಕ್ಕಹಂಡೆ, ಕತೆಗಾರ ಅಶ್ವತ್ಥ, ನಾಯಿಸೀನಪ್ಪ, ಗಾಂಧೀವಾದಿ ಟಿ. ಎಸ್. ಸುಬ್ಬಣ್ಣ, ಪುರೋಹಿತ ರಂಗಭಟ್ಟ, ಮೇದರಚೆನ್ನ, ಸದ್‌ಗೃಹಿಣಿ ಅಮ್ಮಾಮಿ, ಪ್ರಕಾಂಡ ಪಂಡಿತ ಪ್ರೊ|| ಡಿ.ಎಲ್. ನರಸಿಂಹಾಚಾರ್, ವಿದ್ವಾಂಸ ಎಂ. ಬಿ. ಚಿತ್ರಲಿಂಗಯ್ಯ ಈ ಹತ್ತು ವ್ಯಕ್ತಿ ಚಿತ್ರಗಳನ್ನೊಳಗೊಂಡ ಕೃತಿ ಗೋಪುರದ ದೀಪ.

ಈ ಕೃತಿಯ ಮೊದಲ ಲೇಖನ ಡಾ|| ಎಚ್. ನರಸಿಂಹಯ್ಯ ಅವರನ್ನು ಕುರಿತದ್ದಾಗಿದೆ. ಡಾ|| ಎಚ್. ಎನ್. ಅವರ ವೈಜ್ಞಾನಿಕ ವೈಚಾರಿಕ ದೃಷ್ಟಿ, ಸರಳ ಜೀವನ, ಉದಾತ್ತ ಚಿಂತನೆ, ಕರ್ತವ್ಯನಿಷ್ಠೆ, ವಿನೋದ ಪ್ರವೃತ್ತಿ, ವಿದ್ಯಾರ್ಥಿಗಳೊಡನಾಟ, ನ್ಯಾಷನಲ್ ಕಾಲೇಜಿನೊಡನಿರುವ ಸಂಬಂಧ ಈ ಮುಂತಾದ ಹಲವು ಹತ್ತು ಅಂಶಗಳನ್ನು ಲೇಖಕರು ನಿದರ್ಶನಪೂರ್ವಕವಾಗಿ ನಿರೂಪಿಸಿದ್ದಾರೆ. 'ಗೋಪುರದ ದೀಪ' ಕೃತಿಯ ಶೀರ್ಷಿಕೆಯಾಗಿರುವುದರ ಜೊತೆಗೆ ಈ ಲೇಖನದ ಉಪಶೀರ್ಷಿಕೆಯೂ ಆಗಿರುವುದು ಅರ್ಥಪೂರ್ಣವಾಗಿದೆ.

೨. ಚಿಕ್ಕಹಂಡೆ

"ಅವನ ನಿಜವಾದ ಹೆಸರೇನೋ ಕಾಣೆ. ಆದರೆ ಜನರೆಲ್ಲ ಅವನನ್ನು ಹಾಗೇ ಕರೆಯುತ್ತಿದ್ದರು. ಹೀಗಾಗಿ ಇಂದಿಗೂ ಅದೇ ಹೆಸರು ನನ್ನ ನೆನಪಿನ ಚೀಲದಲ್ಲಿ ಉಳಿದಿದೆ." ಎಂದು ಲೇಖಕರು ತಮ್ಮ ಮಾಧ್ಯಮಿಕ ಶಾಲೆಯ ಈ ಗೆಳೆಯನ ಬಗ್ಗೆ ನೆನಪಿನ ಬುತ್ತಿ ಬಿಚ್ಚುತ್ತಾರೆ. ಈ ಗೆಳೆಯನ ಬಾಲ್ಯದ ತುಂಟಾಟ,

ಮಲತಾಯಿ ಹಿಡಿತದಲ್ಲಿ ಸಿಕ್ಕಿ ಅನುಭವಿಸಿದ ಯಾತನೆ, ಸಣ್ಣ ವಯಸ್ಸಿಗೆ ಹೆಗಲೇರಿದ ಸಂಸಾರದ ಭಾರ, ಹಲವಾರು ವರ್ಷಗಳ ನಂತರ ರಿಕ್ಷಾ ಚಾಲಕನಾಗಿ ಪ್ರತ್ಯಕ್ಷನಾಗಿ ಉಂಟುಮಾಡಿದ ಅಚ್ಚರಿ. ಈ ಎಲ್ಲವೂ ಲೇಖಕರ ಸ್ಮೃತಿಪಟಲದಲ್ಲಿ ಹಾದು ಹೋಗುತ್ತವೆ. 'ಇಂದಿಗೂ ಬೆಂಗಳೂರಿಗೆ ಹೋದಾಗಲೆಲ್ಲ ಕಂಡಕಂಡ ರಿಕ್ಷಾಗಳತ್ತ ನನ್ನ ಕಣ್ಣು ಅನಾಯಾಸವಾಗಿ ಹರಿಯುತ್ತದೆ. ಆದರೆ ಚಿಕ್ಕಹಂಡೆ ಮಾತ್ರ ಕಂಡು ಬರಲಿಲ್ಲ. ಕಾಣುವನೋ, ಇಲ್ಲವೆ ಯಾರೂ ಕಾಣದ ತಾಣಕ್ಕೆ ಹೊರಟುಹೋದನೊ ಎಂದು ಯೋಚಿಸಿ, ಒಮ್ಮೊಮ್ಮೆ ನನ್ನ ಎದೆ ತಲ್ಲಣಿಸುತ್ತದೆ.' ಎಂದು ಲೇಖಕರು ಗೆಳೆಯನಿಗಾಗಿ ಹಂಬಲಿಸುತ್ತಾರೆ.

೩. ಊರ್ಧ್ವಮೂಲ

೨೨-೧-೧೯೯೫ರಂದು ಮೈಸೂರಿನಲ್ಲಿ ತೀರಿಕೊಂಡ ಕತೆಗಾರ ಅಶ್ವತ್ಥರನ್ನು ಕುರಿತ ಲೇಖನ 'ಊರ್ಧ್ವಮೂಲ.' ಅಶ್ವತ್ಥರದು ತಾಂತ್ರಿಕ ಕ್ಷೇತ್ರವಾದರೂ ಕನ್ನಡ ನವೋದಯ ಪಂಕ್ತಿಗೆ ಸೇರಿದ ಲೇಖಕರು. ಕತೆ, ಕವಿತೆ, ನಾಟಕ, ಕಾದಂಬರಿ, ಪ್ರಬಂಧ ಹೀಗೆ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೆಲಸಮಾಡಿದರು. ಅಶ್ವತ್ಥರ ಸಾಮಾಜಿಕ ಕಳಕಳಿ, ತತ್ವನಿಷ್ಠೆ, ಪ್ರಾಮಾಣಿಕತೆ ಊಹಾತೀತ. ಈ ಮೌಲ್ಯಗಳನ್ನು ದಿನ ನಿತ್ಯದ ನಡವಳಿಕೆಯಲ್ಲಿ ಅಳವಡಿಸಿಕೊಂಡಿದ್ದ ಇವರ ಬದುಕು ನಮ್ಮಂಥವರಿಗೆ ಪವಾಡವಾಗಿ ಕಂಡರೂ ಇದು ಪವಾಡವಲ್ಲ ಸತ್ಯ. ಅಶ್ವತ್ಥರಿಗೆ ಊರ್ಧ್ವಮೂಲ ಅನ್ವರ್ಥ. "ಪರಬ್ರಹ್ಮ ತಲೆಕೆಳಕಾಗಿರುವ ಅಶ್ವತ್ಥ ವೃಕ್ಷದಂತೆ, ಅಶ್ವತ್ಥರನ್ನು ನೆನೆದಾಗಲೆಲ್ಲ ಈ ಅರಳಿಯಮರದ ಚಿತ್ರ ನನ್ನ ಕಣ್ಣೆದುರಿಗೆ ನಿಲ್ಲುತ್ತದೆ." ಎಂದು ಲೇಖಕರು ಅಶ್ವತ್ಥರನ್ನು ಸ್ಮರಿಸಿಕೊಳ್ಳುವುದರಲ್ಲಿ ಉತ್ಪ್ರೇಕ್ಷೆ ಇಲ್ಲ.

೪. ನಾಯಿ ಸೀನಪ್ಪ

ನಾಯಿ ಸೀನಪ್ಪ ಕ್ಷೌರಿಕೆ ಹಾಗೂ ಓಲಗ ಎರಡರಲ್ಲೂ ಸವ್ಯಸಾಚಿ. ಸೀನಪ್ಪನಿಗೆ ನಾಯಿ ವಿಶೇಷಣ ತಗಲಿಕೊಂಡಿರುವುದನ್ನು ಲೇಖಕರು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಋಷಿ ಸದೃಶ ಜೀವನ ನಡೆಸಿದ ಸೀನಪ್ಪ ಕಾಯಕವೇ ಕೈಲಾಸ ಎಂಬ ತತ್ವನಿಷ್ಠ. ದುಃಖವನ್ನು ಒಂಟಿಯಾಗಿ ಅನುಭವಿಸಬೇಕು, ಆದರೆ ಸುಖವನ್ನು ಹಂಚಿಕೊಂಡು ಅನುಭವಿಸಬೇಕೆಂಬ ಧ್ಯೇಯವಾದಿ. ಶರಣರ ಗುಟ್ಟು ಮರಣದಲ್ಲಿ ಎಂಬುದನ್ನು ಸಾಕ್ಷಾತ್ಕರಿಸಿದ ನಾಯಿ ಸೀನಪ್ಪ "ಬದುಕನ್ನು ಮಂಗಳದ ಅಂಗಳವನ್ನಾಗಿ ಮಾಡುತ್ತಿದ್ದ ಆತ 'ನಾಯಿ' ಅಲ್ಲ ಸ್ವತಃ 'ಶಹನಾಯಿ'ಯಾಗಿದ್ದರು." ಎಂದು ಲೇಖಕರು ಅಗಲಿದ ಸೀನಪ್ಪನಿಗೆ ಅಶ್ರುತರ್ಪಣ ಸಲ್ಲಿಸುತ್ತಾರೆ.

೫. ಎಲೆಮರೆಯ ಹಣ್ಣು

ಹದಿನಾರಾಣೆ ಗಾಂಧಿವಾದಿಯಾಗಿದ್ದ ದಿವಂಗತ ಟಿ. ಎಸ್. ಸುಬ್ಬಣ್ಣ ಅವರು ಭಿಕ್ಷೆ ಎತ್ತಿ ಸಾರ್ವಜನಿಕ ಶಿಕ್ಷಣಸಂಸ್ಥೆ ಕಟ್ಟಿ, ವಿದ್ಯಾರ್ಥಿಗಳಿಗೆ, ಅದರಲ್ಲೂ ನೊಂದವರ ಬಾಳಿಗೆ ಬೆಳಕಾದ ಜ್ಞಾನ ದಾಸೋಹಿ. ಪ್ರಶಸ್ತಿ, ಸನ್ಮಾನ ಪ್ರಚಾರಗಳಿಂದ ಗಾವುದ ದೂರವಿದ್ದು, ಇವು ಕೊನೆವರೆಗೂ ಹತ್ತಿರ

ಸುಳಿಯದಂತೆ ಎಚ್ಚರ ವಹಿಸಿದವರು. ಪ್ರಚಾರಕ್ಕೆಳೆಯಲು ಬಂದವರಿಗೆ ಮತ್ತೊಮ್ಮೆ ಅವರತ್ತ ಸುಳಿಯದಂತೆ ನಡುಕ ಉಂಟುಮಾಡಿದವರು ಸುಬ್ಬಣ್ಣ. ಈ ಕಾಲದಲ್ಲೂ ಇಂಥವರಿದ್ದರೆ ಎಂದರೆ? ಹೌದು: ಇದ್ದರು, ೧೩-೯-೯೧ರಂದು ಮೈಸೂರಿನಲ್ಲಿ ತೀರಿಕೊಂಡರು—ಅವರೇ ಟಿ. ಎಸ್. ಸುಬ್ಬಣ್ಣ. "ಈ ಲೋಕದಲ್ಲಿ ತಾನೊಬ್ಬನೇ ಭಕ್ತ ಉಳಿದವರೆಲ್ಲ ಜಂಗಮ ಲಿಂಗಗಳು ಎಂದು ಬಸವಣ್ಣನವರು ಭಾವಿಸಿದ್ದರೆ, ಸುಬ್ಬಣ್ಣನವರು ತಾವೊಬ್ಬರೇ ಸೇವಕರು, ಉಳಿದ ಮರ್ತ್ಯ ಜೀವಿಗಳೆಲ್ಲ ದೇವರು ಎಂದು ಭಾವಿಸಿ ದರಿದ್ರನಾರಾಯಣ ಸೇವೆಗಾಗಿ ಗಂಧದ ಮರದಂತೆ ತಮ್ಮ ಬಾಳನ್ನೇ ತೇಯ್ದರು. ಇಂದು ಆ ಗಂಧದ ಮರವಿಲ್ಲ. ಆದರೆ ಅದರ ಗಂಧ ಗಾಳಿಯಲ್ಲಿ ಎಲ್ಲೆಲ್ಲೂ ತೇಲುತ್ತಿದೆ." ಎಂಬ ಲೇಖಕರ ಮಾತಿಗೆ ಓದುಗರ ದನಿಯೂ ಕೂಡುತ್ತದೆ.

೬. ರಂಗಭಟ್ಟರು

ಮಧುಗಿರಿ ತಾಲ್ಲೂಕಿನ ಒಂದು ಹಳ್ಳಿಯ ಜೋಡಿದಾರರಾದ ರಂಗಭಟ್ಟರು, ವೈದಿಕ ವೃತ್ತಿಯಿಂದ ಜೀವನ ನಡೆಸುತ್ತ, ನಿಷ್ಠ ಬ್ರಹ್ಮಚಾರಿಯಾಗಿ, ಈ ಬ್ರಹ್ಮಚರ್ಯದಲ್ಲೇ ಗೃಹಸ್ಥ ಜೀವನದ ಸವಿ ಕಂಡವರು. ಮಾನಸಿಕ ತೊಳಲಾಟದ ವಿಲಕ್ಷಣ ಮನೋಭಾವ ಹೊಂದಿದ್ದ ರಂಗಭಟ್ಟರು ಮನೆಪಾಠ ಹೇಳುವುದರಲ್ಲಿ ಕಟ್ಟುನಿಟ್ಟಾದ ವ್ಯಕ್ತಿ. ಪಾಠ ಒಪ್ಪಿಸದಿದ್ದ ವಿದ್ಯಾರ್ಥಿಗೆ ಶಿಕ್ಷೆ ಕೊಟ್ಟು, ನಂತರ ಅವರಿಗೆ ರಸಕವಳ ನೀಡಿ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು.

ರಂಗಭಟ್ಟರು ಬ್ರಹ್ಮಚಾರಿಯಾದರೂ ವಿಶ್ವ ಕುಟುಂಬಿ. ಮಕ್ಕಳೆಂದರೆ ಬಲು ಪ್ರೀತಿ. ಬೀದಿ ಮಕ್ಕಳನ್ನು ಕರೆದು ತಿಂಡಿ ಹಂಚುತ್ತಿದ್ದರು. ಕಾಯಿಲೆಯಾದವರ ಮನೆಗೆ ಹೋಗಿ ವಿಚಾರಿಸಿಕೊಂಡು ಬರುವರು. ಆಸ್ಪತ್ರೆಯಿಂದ ಔಷಧಿ ತಂದು ಕೊಡುವರು. ಮಕ್ಕಳನ್ನು ಶಾಲೆಗೆ ಸೇರಿಸುವರು. ಅವರಿಗೆ ಫ್ರೀಶಿಪ್ ಸ್ಕಾಲರ್‌ಶಿಪ್ ಕೊಡಿಸಲು ಪರಿಚಿತರಿಗೆ ದಂಬಾಲು ಬೀಳುತ್ತಿದ್ದರು. ಹೀಗೆ ವಿಶಿಷ್ಟವಾಗಿ ಬದುಕಿದ ರಂಗಭಟ್ಟರ ಸಾವೂ ವಿಶಿಷ್ಟದಲ್ಲೇ ಅಂತ್ಯವಾಗುತ್ತದೆ.

೭. ಸೋದರ ಚನ್ನ

ಕುಶಲಕಲೆಯನ್ನು ಅದ್ಭುತವಾಗಿ ಕರಗತ ಮಾಡಿಕೊಂಡಿದ್ದ ವ್ಯಕ್ತಿ ಚೆನ್ನ. ಇವನ ಕೈಚಳಕ ಕಂಡ ಮಿತ್ರರೊಬ್ಬರು ಲೇಖಕರಿಗೆ "ಇಂಟೀರಿಯರ್ ಡೆಕೋರೇಷನ್" ಎನ್ನುವುದು ಇಂದು ಒಂದು ದೊಡ್ಡ ಕಲೆಯಾಗಿ ಬೆಳೆದಿದೆ. ನಿಮ್ಮ ಚೆನ್ನ ಅದನ್ನೇನಾದರೂ ಕಲಿತರೆ ಬರೀ ಕನ್ಸಲ್ಟೇಷನ್ ಫೀ ಅಂತಲೇ ಸಾವಿರಾರು ರೂಪಾಯಿಗಳಿಸಬಲ್ಲ." ಎಂದು ಹೇಳಿದ ಮಾತಿನಲ್ಲಿ ಚೆನ್ನನ ಸಾಮರ್ಥ್ಯ ಅಡಗಿದೆ.

"ಚೆನ್ನನನ್ನು ನೆನೆದಾಗ ನನ್ನ ಕಣ್ಣು ತೇವಗೊಳ್ಳುತ್ತದೆ. ಅವನು ಇಂಟೀರಿಯರ್ ಡೆಕೋರೇಟರ್ ಆಗಿದ್ದರೆ ಸಾವಿರಾರು ರೂ. ಗಳಿಸುತ್ತಿದ್ದ. ಹಳ್ಳಿಯ ಕೊಂಪೆ ಸೇರಿ ಅವನ ಪ್ರತಿಭೆ ಹಾಳಾಯಿತು. ಅದನ್ನು ನಾನು ತಪ್ಪಿಸಬಹುದಾಗಿತ್ತೋ ಏನೋ. ಅವನು

ಕೊಟ್ಟ ಬುಟ್ಟಿ, ತಟ್ಟೆ, ಆಟದ ಸಾಮಾನು ಗಳು ನನ್ನ ಮಕ್ಕಳ ಕೈಗೆ ಸಿಕ್ಕಿ ಆಕಾರ ಕಳೆದುಕೊಂಡಿವೆ. ಆದರೂ ನಮ್ಮ ಮನೆಯ ಹಳೆಯ ಸಾಮಾನುಗಳನ್ನು ತೆಗೆದಾಗ ಅವನು ಕೊಟ್ಟ ಸಾಮಾನುಗಳು ಅಂಗ ಭಂಗವಾದರೂ ನನ್ನನ್ನು ನೋಡಿ ಅಟ್ಟಹಾಸ ಮಾಡಿ ನಗುತ್ತವೆ." ಎಂದು ಲೇಖಕರು ಪರಿತಪಿಸಿ ಕಂಬನಿ ಮಿಡಿಯುವಾಗ, ಓದು ಗರೂ ಇದರಲ್ಲಿ ಪಾಲುದಾರರಾಗುತ್ತಾರೆ.

೮. ಪರ್ವತ ಪುತ್ರಿ

ಪರ್ವತ ಪುತ್ರಿಯನ್ನು ಕುರಿತು ಲೇಖನ ಹೀಗೆ ಪ್ರಾರಂಭವಾಗುತ್ತದೆ. "ಆಕೆಯನ್ನು ತಿಳಿದವರೆಲ್ಲ 'ಅಮ್ಮಾಮಿ' ಎಂದು ಕರೆಯು ತ್ತಿದ್ದರು. ಅವರು ನಮ್ಮ ಗುರುಗಳೊಬ್ಬರ ತಾಯಿ. ಆಕೆ ಚಾಮುಂಡಿಬೆಟ್ಟದವರು. ಗಾದೆಯ ಮಾತನ್ನು ಹೇಳುವುದಾದರೆ ಅವರು ಅಪ್ಪಾ ಭಟ್ಟರ ಮಗಳು ತಿಪ್ಪಾ ಭಟ್ಟರ ಸೊಸೆ. ಕೈಹಿಡಿದದ್ದು 'ವೇದರತ್ನಂ' ಬಿರುದಾಂಕಿತ ಘನವಿದ್ವಾಂಸರೊಬ್ಬರನ್ನು ಆಕೆ ಹುಟ್ಟಿದ ಮನೆ ಹೊಕ್ಕ ಮನೆ ಎರಡೂ ವೇದ ವಿದ್ಯೆಯ ತೌರು. ಆದ್ದರಿಂದ ಆಕೆ ಸಾಕಷ್ಟು ಬಡತನವನ್ನು ಕಂಡವರು. ಆದರೆ ಆಕೆ ಹಡೆದ ರತ್ನದಂಥ ಮಕ್ಕ ಳಿಂದಾಗಿ ಒಡೆತನವನ್ನೂ ಕಂಡವರು. ಆದರೆ ಬಡತನವೇ ಶಾಶ್ವತ ಎಂದು ಕಡೆತನಕ ನಂಬಿ ನಡೆದವರು."

ಅಮ್ಮಾಮಿ ವೈದಿಕ ಮನೆತನದ ಹೆಣ್ಣಾ ದರೂ ವೈಚಾರಿಕತೆ. ವೈಜ್ಞಾನಿಕತೆಯನ್ನು ಅಳವಡಿಸಿಕೊಂಡಿದ್ದ ಮಹಿಳೆ. ಸ್ವಾಮಿಗಳ ಶಿಲಾ ಪ್ರತಿಮೆ ಸ್ಥಾಪನೆಗೆ ದೇಣಿಗೆ ಕೇಳಲು ಬಂದವರಿಗೆ ಅಮ್ಮಾಮಿ ಹೀಗೆ ಹೇಳು ತ್ತಾರೆ. "ನಮ್ಮಲ್ಲಿ ಅಶ್ವತ್ಥ ಕಟ್ಟೆಗೆ ಹಾಕು ವಷ್ಟು ದೇವರಿದ್ದಾರೆ. ಅದು ಸಾಲದು ಅಂತ ಇನ್ನೊಂದು ವಿಗ್ರಹ ನೆಡುವುದು ನನಗೆ ಸುತರಾಂ ಇಷ್ಟ ಇಲ್ಲ. ಇದಕ್ಕೆ ನಾನು ಒಂದು ಕಾಸೂ ಕೊಡಲಾರೆ. ಅನಾಥಾಲಯ ವನ್ನೋ ಹಾಸ್ಪಟಲನ್ನೋ ಕಟ್ಟಿಸಿ, ನನ್ನ ಶಕ್ತಿ ಮೀರಿ ಹಣ ನೀಡುತ್ತೇನೆ" ಎಂದು ಹೇಳಿ ಕಳುಹಿಸುತ್ತಾರೆ.

ವಿದೇಶದಲ್ಲಿದ್ದ ಮೊಮ್ಮಗ ಅಲ್ಲಿನ ಹೆಣ್ಣನ್ನೇ ಮದುವೆಯಾಗಿ, ಊರಿಗೆ ಬರುವ ವಿಷಯ ತಿಳಿಸುತ್ತಾನೆ. ಈ ಬಗ್ಗೆ ಅಮ್ಮಾಮಿ ಅಭಿಪ್ರಾಯ ಕೇಳಿದಾಗ "ಬರಲಿ ಬಿಡು ನನಗೆ ಲಿಂಗಾಯಿತ ಮಗ, ಒಕ್ಕಲಿಗ ಮಗ. ಕೊನೆಗೆ ಮಾಪಿಗ ಮಗ ಳಿಲ್ಲವೆ? ಹಾಗೆಯೆ ಒಬ್ಬ ಇಂಗ್ಲಿಷ್ ಸೊಸೆಯೂ ಇದ್ದಾಳೆ. ಇದರಲ್ಲಿ ತಪ್ಪೇನು? ಮುಂದಿನ ಸಮಾಜವೇ ಹೀಗೆ. ಅದಕ್ಕೆ ಈಗಲೇ ನಾವು ಸಿದ್ಧರಾಗೋಣ" ಎಂದು ಜಾತ್ಯಾತೀತತೆಯ ಹೃದಯ ವೈಶಾಲ್ಯ ಮೆರೆಯುತ್ತಾರೆ.

ಅಮ್ಮಾಮಿಯು ದು ಕಾರಂತರ 'ಮೂಕಜ್ಜಿ'ಯಂತಹ ಭವ್ಯ ವ್ಯಕ್ತಿತ್ವ.

೯. ಡಿ. ಎಲ್. ಎನ್.

ಈ ಲೇಖನದಲ್ಲಿ ಪ್ರೊ|| ಡಿ. ಎಲ್. ನಗಸಿಂಹಾಚಾರ್ ಅವರ ವಿದ್ವತ್ತು, ತಳಸ್ಪರ್ಶಿ ಸಂಶೋಧನೆ, ಭಾಷಾ ಪ್ರೌಢಿಮೆ, ಅವರಿಗೆ ವಿದ್ಯಾರ್ಥಿಗಳ ಮೇಲಿದ್ದ ವಾತ್ಸಲ್ಯ ಮುಂತಾದುವುಗಳನ್ನು ನಿದರ್ಶನ ಪೂರ್ವಕ ವಾಗಿ ನಿರೂಪಿಸಿದ್ದಾರೆ. "ಒಂದೊಮ್ಮೆ ವ್ಯಕ್ತಿಗೂ ಅತನ ಹೆಸರಿಗೂ ಅರ್ಥಾರ್ಥಕ ಸಂಬಂಧವಿರುವುದಿಲ್ಲ. ಆದರೆ ನರಸಿಂಹಾ

ಚಾರ್ಯರದು ಹಾಗಲ್ಲ. ಅವರು ಅನ್ವರ್ಥ ನಾಮರು. ಅವರು 'ದೊಡ್ಡ ಬೆಲೆಯವರು'" ಎಂಬ ಲೇಖಕರ ಮಾತಿನಲ್ಲಿ ಅತಿಶಯೋಕ್ತಿ ಇಲ್ಲ.

೧೦. ಮಹಾ ಪಂಡಿತ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಉಪನ್ಯಾಸಕರಾಗಿದ್ದ ಶ್ರೀ ಎಂ. ವಿ. ಚಿತ್ರಲಿಂಗಯ್ಯ ಅವರನ್ನು ಕುರಿತ ವ್ಯಕ್ತಿ ಚಿತ್ರವಾಗಿದೆ. ಲೇಖಕರು ತಮ್ಮ ಮತ್ತು ಚಿತ್ರಲಿಂಗಯ್ಯನವರ ನಲವತ್ತು ವರ್ಷಗಳ ಬಾಂಧವ್ಯವನ್ನು ಸ್ಮರಿಸಿಕೊಂಡಿದ್ದಾರೆ. ಚಿತ್ರಲಿಂಗಯ್ಯನವರ ವಿಶ್ವ ಕುತೂಹಲ ಪ್ರಜ್ಞೆ. ವಿವಿಧ ಭಾಷೆಗಳಲ್ಲದೆ ಇತಿಹಾಸ, ಪುರಾತತ್ವ, ಸಮಾಜಶಾಸ್ತ್ರ, ಮನೋವಿಜ್ಞಾನ, ಮಾನವ ವಿಜ್ಞಾನ, ರಾಜ್ಯಶಾಸ್ತ್ರ ಮುಂತಾದ ಹಲವು ಹತ್ತು ವಿಷಯಗಳಲ್ಲಿ ಇವರಿಗಿದ್ದ ಅತಿಶಯ ಜ್ಞಾನ ಅಚ್ಚರಿ ಮೂಡಿಸುವಂತಹುದು. ನಿರೀಕ್ಷಿತ ಪ್ರಮಾಣದಲ್ಲಿ ಇಂಥ ಮೇಧಾವಿಯಿಂದ ಸಮಾಜ ಪ್ರಯೋಜನ ಪಡೆದುಕೊಳ್ಳಲಿಲ್ಲ ಎಂಬ ಲೇಖಕರ ಕೊರಗಿಗೆ ಓದುಗರೂ ದನಿಗೂಡಿಸಬೇಕಾಗುತ್ತದೆ.

'ಗೋಪುರದ ದೀಪ' ಕೃತಿಯಲ್ಲಿನ ಹತ್ತು ವ್ಯಕ್ತಿಚಿತ್ರಗಳಲ್ಲಿ ಡಾ|| ಎಚ್. ಎನ್. ಅಶ್ವತ್ಥ, ಟಿ. ಎಸ್. ಸುಬ್ಬಣ್ಣ, ಪ್ರೊ|| ಡಿ. ಎಲ್. ಎನ್ ಹಾಗೂ ಚಿತ್ರಲಿಂಗಯ್ಯ ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಸಿದ್ಧರಾಗಿದ್ದು, ಸಮಾಜ ಗುರುತಿಸುವ ವ್ಯಕ್ತಿಗಳಾಗಿದ್ದಾರೆ.

ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ಲೇಖಕರಿಗೆ ಈ ವರ್ಗದವರ ಪರಿಚಯ, ಸಂಪರ್ಕ ಇರುವುದರಲ್ಲಿ ಹೆಚ್ಚಿನ ವಿಶೇಷ ಇಲ್ಲ. ಆದರೆ ಎಂದೋ ನೋಡಿದ್ದ ಯಾವುದೋ ಸನ್ನಿವೇಶದಲ್ಲಿ ಪರಿಚಿತರಾಗಿದ್ದ ಚಿಕ್ಕ ಹುಂಡಿ, ನಾಯಿಂದಸೀನಪ್ಪ ಪುರೋಹಿತ ರಂಗಭಟ್ಟ, ಮೇದರ ಚೆನ್ನ ಹಾಗೂ ಅಮ್ಮಾವಿಯಂಥ ಪ್ರಕಾಶಕ್ಕೆ ಬಾರದ ವ್ಯಕ್ತಿಗಳೂ ಪ್ರಸಿದ್ಧರೇ: ಎಲ್ಲರೂ ಗೋಪುರದ ಒಂದೇ ಸಾಲಿನ ದೀಪಗಳು. ಇದನ್ನು ಲೇಖಕರಂತೆ ಓದುಗರೂ ಎರಡು ಮಾತಿಲ್ಲದೆ ಅನುಮೋದಿಸಲೇಬೇಕು. ಇಲ್ಲಿನ ವ್ಯಕ್ತಿ ಚಿತ್ರಗಳು ರಕ್ತ ಮಾಂಸದಿಂದ ಉಸಿರಾಡುವ ಜೀವಂತ ಚಿತ್ರಗಳಾಗಿವೆ. ಓದುಗರನ್ನೂ ವಶೀಕರಿಸಿಕೊಳ್ಳುವ ಸರಳ ಮತ್ತು ಸಂಕೀರ್ಣ ಶೈಲಿಯಿಂದಾಗಿ ಕೃತಿ ವಿಶೇಷ ಮೆರುಗು ಪಡೆದಿದೆ.

ಸುವರ್ಣ ಚಿತ್ರಕ್ಕೆ ಸಾಮಾನ್ಯ ಚೌಕಟ್ಟು

೧೮೦ ಪುಟಗಳ ವ್ಯಾಪ್ತಿಯ ಈ ಕೃತಿಯು ಕಡಿಮೆ ದರ್ಜೆಯ ನ್ಯೂಸ್ ಪ್ರಿಂಟ್ ಕಾಗದವನ್ನೂ ಒಳಗೊಂಡಂತೆ ಮೂರು ನಮೂನೆ ಕಾಗದದಲ್ಲಿ ಮುದ್ರಣವಾಗಿ, ಸ್ಪೈಡ್ ಪಿನ್ನಿಂಗ್ ಹೊಂದಿದ್ದು ಪುಸ್ತಕದ ಪುಟ ತೆರೆದು ಓದಿದ ನಂತರ ಆ ಪುಟವೇ ಕೈಗೆ ಬರುತ್ತದೆ. ಬೆಡಗು ಬಿನ್ನಾಣದ ಮುದ್ರಣ ಕಲೆಯ ಇಂದಿನ ದಿನದಲ್ಲಿ 'ಗೋಪುರದ ದೀಪ'ದಂಥ ಮೌಲಿಕ ಕೃತಿಯೊಂದು ಹೀಗೆ ಪೇಲವದಿಂದ ಕನಿಕರಕ್ಕೆ ಗುರಿಯಾಗಿ ಮುದ್ರಣವಾಗಿರುವುದನ್ನು ನೋಡಿ, ಈ ಆಘಾತದಿಂದ ಲೇಖಕರು ಚೇತರಿಸಿಕೊಳ್ಳಲಿ ಎಂದು ಹಾರೈಸಬೇಕಾಗಿದೆ.

'ಸಾಮಾಜಿಕ ಅನಿಷ್ಟಗಳು: ನಿವಾರಣೆ'—ಲೇಖಕರು ಮತ್ತು ಪ್ರಕಾಶಕರು: ಎಚ್. ಆರ್. ಚಂದ್ರವದನರಾವ್, ಪ್ರಾಂಶುಪಾಲರು (ನಿ) ಚಾಮುಂಡಿಪುರಂ, ಮೈಸೂರು-೪; ಪುಟಗಳು: ೪೦; ಬೆಲೆ: ೧೦ರೂ.

ಮದ್ಯಪಾನ, ಧೂಮಪಾನ, ವರದಕ್ಷಿಣೆ, ಬಾಲ್ಯವಿವಾಹ, ಅಸ್ಪೃಶ್ಯತೆ, ಪರಿಸರ ಮಾಲಿನ್ಯ, ಮೂಢನಂಬಿಕೆ ಮುಂತಾದ ಹಲವು ವಿಷಯಗಳನ್ನು ಕೃತಿ ಒಳಗೊಂಡಿದೆ. ಮುನ್ನುಡಿ ಹಿನ್ನುಡಿಗಳ ಭಾರವಿಲ್ಲದೆ ನೇರ ವಿಷಯ ಪ್ರತಿಪಾದನೆಯಿಂದಲೇ ಕೃತಿ ಪ್ರಾರಂಭವಾಗುತ್ತಿದೆ.

ಹನುಮನಹಳ್ಳಿಗೆ ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿ ಬಂದ ರಾಮಪ್ಪ ಆ ಗ್ರಾಮದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಪರಿಚಿತರು ಹಾಗೂ ಅಧಿಕಾರಿ ವರ್ಗದವರನ್ನು ಗ್ರಾಮಕ್ಕೆ ಕರೆತಂದು ಅವರಿಂದ ಮೂಢನಂಬಿಕೆ, ಮದ್ಯಪಾನ, ಧೂಮಪಾನಗಳ ದುಷ್ಪರಿಣಾಮ, ವರದಕ್ಷಿಣೆ ಪಿಡುಗು, ಬಾಲ್ಯವಿವಾಹದ ಅನಾಹುತ, ಅಸ್ಪೃಶ್ಯತೆ, ಪರಿಸರ ಮಾಲಿನ್ಯ, ಕಾನೂನು ನೆರವು ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಕೊಡಿಸುತ್ತಾರೆ.

ಇದರ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ಯುವಕ ಸಂಘ ಗ್ರಾಮಾಭಿವೃದ್ಧಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ, ಕ್ರಮೇಣ ಹನುಮನಹಳ್ಳಿಯು ಮಾದರಿ ಗ್ರಾಮವಾಗಿ ಪ್ರಗತಿ ಹೊಂದುತ್ತದೆ.

೧೬ ಪಾಯಿಂಟ್‌ಗಳಲ್ಲಿ ಮುದ್ರಣವಾಗಿರುವ ಈ ಕೃತಿಯಲ್ಲಿ ವಿಷಯವು ಸರಳವಾಗಿ ವರದಿ ರೂಪದಲ್ಲಿ ನಿರೂಪಣೆಯಾಗಿರುವುದರಿಂದ ನವಸಾಕ್ಷರರನ್ನು ಮುಟ್ಟಬಲ್ಲದು. ಸೂಕ್ತ ಚಿತ್ರಗಳನ್ನು ಒಳಗೊಂಡಿರುವ ಈ ಕೃತಿ ಸಾಧ್ಯವಾದಮಟ್ಟಿಗೂ ಮುದ್ರಣ ದೋಷದಿಂದ ವಿಮುಕ್ತಿ ಹೊಂದಿ, ಅಂದವಾಗಿ ಮುದ್ರಣವಾಗಿದೆ.

ಚಂದ್ರಶೇಖರಾರಾಧ್ಯ
೧೪೫೫, 'ಇಂಚರ', ಎಂ. ಬ್ಲಾಕ್
೨ನೆಯ ಹಂತ, ಕುವೆಂಪುನಗರ,
ಮೈಸೂರು-೫೭೦೦೨೩

ನಾನು ಯಾವುದೇ ಸಂಬಳದ ನೌಕರಿ ಮಾಡಲು ಇಚ್ಛಿಸುವುದಿಲ್ಲ. ನನ್ನ ಜೀವನವನ್ನು ದೇಶ ಸೇವೆಗಾಗಿ ವಿನಿಯೋಗಿಸಲು ನಿಶ್ಚಯಿಸಿದ್ದೇನೆ.

—ನೇತಾಜಿ ಸುಭಾಷ್‌ಚಂದ್ರ ಬೋಸ್

ಓದುಗರ ಅನಿಸಿಕೆಗಳು

ಮಾನ್ಯ ಸಂಪಾದಕರಿಗೆ,

'ಪುಸ್ತಕ ಪ್ರಪಂಚ'ದ ಚಂದಾದಾರನಾಗಿ, ಓದುಗನಾಗಿ ಕಳೆದ ಕೆಲವು ವರ್ಷಗಳಿಂದ ಆ ಪತ್ರಿಕೆಯಿಂದ ಲಾಭ ಪಡೆದಿದ್ದೇನೆ.

ಡಾ|| ತಾಳ್ತಜೆ ವಸಂತಕುಮಾರ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾನಿಲಯ
ಮುಂಬಯಿ-೪೦೦ ೦೯೮

ಪುಸ್ತಕ ಪ್ರಪಂಚ ಚೆನ್ನಾಗಿ ಮೈಗೂಡಿಸಿಕೊಂಡು ಬರುತ್ತಿದೆ. ವಿಚಾರಪೂರಿತ ಲೇಖನಗಳಿಂದ ಕೂಡಿದೆ. ಹಿಂದಿನ ಪುಸ್ತಕ ಪ್ರಪಂಚದ ಘನತೆ ಗೌರವವನ್ನು ಉಳಿಸಿಕೊಂಡು ಬರುತ್ತಿದೆ. ಸಂಪಾದಕ ಮಂಡಳಿಗೆ ನನ್ನ ಅಭಿನಂದನೆಗಳು.

ಪಿ. ಆರ್. ತಿಪ್ಪೇಸ್ವಾಮಿ
ಕಲಾವಿದರು
೧೭೩, ರಮಾವಿಲಾಸ ರಸ್ತೆ, ಮೈಸೂರು-೨೪

ಕಳೆದ ಜೂನ್ ಸಂಚಿಕೆಯಲ್ಲಿ ದೇಜಗೌ ಅವರ 'ಸಜ್ಜನಿಕೆಗೆ ಮತ್ತೊಂದು ಹೆಸರು ವೀರೇಂದ್ರ' ಲೇಖನದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ವೀರೇಂದ್ರ ಪಾಟೀಲರ ದಕ್ಷತೆಯೊಂದಿಗೆ ಮಿಳಿತವಾಗಿದ್ದ ಸೌಜನ್ಯದ ಚಿತ್ರವನ್ನು ಸಂಕ್ಷಿಪ್ತವಾದರೂ ಸಮರ್ಪಕವಾಗಿ ನಿದರ್ಶನಗಳ ಮೂಲಕ ತಿಳಿಸಿದ್ದಾರೆ. ಇಂದಿನ ದಿನಗಳಲ್ಲಿ ವೀರೇಂದ್ರ ಪಾಟೀಲರಂಥ ಮೌಲ್ಯಾಧಾರಿತ ರಾಜಕಾರಣಿಯೊಬ್ಬರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದುದು ಗೌರವದ ಸಂಗತಿ. ಪುಸ್ತಕ ಪ್ರಪಂಚದ ಮೂಲಕ ಈ ಸಜ್ಜನಿಕೆಯ ಮೂರ್ತಿಯನ್ನು ಪರಿಚಯಿಸಿದ ಡಾ|| ದೇಜಗೌ ಅವರಿಗೆ ನಮ್ಮ ಅಭಿನಂದನೆಗಳು.

ಬಿ. ಸತ್ಯಮೂರ್ತಿ
ಕೆ. ಅನಂತನಾರಾಯಣ
ಗೌರಿಬಿದನೂರು

ಈ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ 'ಸ್ತ್ರೀ ಸಮಾನತೆ ಸಾಧ್ಯವೇ?' ಎಂಬ ಲೇಖನಕ್ಕೆ ಬಂದ ಸಂವಾದವನ್ನು ಮೇ-ಜೂನ್ ಸಂಚಿಕೆಯಲ್ಲಿ ಪ್ರಕಟಿಸಿದ್ದೀರಿ. ಇಂಥ ಪ್ರತಿಕ್ರಿಯೆಗಳಿಂದ, ಇವುಗಳನ್ನು ಪ್ರಕಟಿಸುವುದರಿಂದ ಪತ್ರಿಕೆ ಮೌಲ್ಯ ವೃದ್ಧಿಸುತ್ತದೆ. ಪುರುಷರೊಬ್ಬರು (ಎ. ಪಿ. ಚಂದ್ರಶೇಖರ್) ಬರೆದ ಲೇಖನಕ್ಕೆ ಪ್ರಕಟವಾಗಿರುವ ಆರು ಪ್ರತಿಕ್ರಿಯೆಗಳೂ ಮಹಿಳೆಯರದೇ ಆಗಿವೆ. ಈ ಬಗ್ಗೆ ಪುರುಷರಿಂದ ಯಾವ ಪ್ರತಿಕ್ರಿಯೆಯೂ ಬಾರಲಿಲ್ಲವೆ? ಬಂದರೂ ಪ್ರಕಟಿಸಲಿಲ್ಲವೆ?

ದಯಾನಂದ
ಸಂಪಿಗೆ, ತುಮಕೂರು ಜಿಲ್ಲೆ

ತಾವು ಪ್ರಕಟಿಸುತ್ತಿರುವ ಪುಸ್ತಕ ಪ್ರಪಂಚ ನಮ್ಮ ಮನಸ್ಸಿಗೆ ತುಂಬಾ ಹಿಡಿಸಿತು. ನಾನು ಪುಸ್ತಕ ಪ್ರಪಂಚದ ಚಂದಾದಾರನಾಗ ಬಯಸಿದ್ದೇನೆ.

ಶ್ಯಾಮಗೊಂಡಹಳ್ಳಿ-೫೭೨ ೧೩೨ ಸಿ. ಆರ್. ಸ್ವಾಮಿ

ಈ ಸಾಲಿನ ಜೂನ್ ಸಂಚಿಕೆಯಲ್ಲಿ 'ವ್ಯಕ್ತಿ–ವಿಚಾರ' ಎಂಬ ತುಣುಕು ಲೇಖನಗಳು ಪ್ರಕಟವಾಗಿದ್ದು, ಇದು ಪುಸ್ತಕ ಪ್ರಪಂಚದ ವೈವಿಧ್ಯತೆಗೆ ಸಾಕ್ಷಿಯಾಗಿದೆ. ಇಂಥ ತುಣುಕು ವಿಷಯಗಳನ್ನು ಒಂದೇ ಕಡೆ ಮುದ್ರಿಸುವುದಕ್ಕಿಂತ ರೀಡರ್ಸ್ ಡೈಜೆಸ್ಟ್ ಮಾದರಿಯಲ್ಲಿ ಪುಟಗಳ ಅಲ್ಲಲ್ಲಿ ಮುದ್ರಿಸುವುದು ಸೂಕ್ತವಾಗಿರುತ್ತದೆ.

ತೆರಕಣಾಂಬಿ ನಾಗವೇಣಿ ಶ್ರೀಧರ್

ಜುಲೈ ೯೭ರ ಸಂಚಿಕೆಯಲ್ಲಿ ಶ್ರೀಮತಿ ಎಸ್. ರೋಹಿಣಿ ಶರ್ಮ ಅವರು 'ಕನ್ನಡ ನಾಡಿನ ಹಬ್ಬ ಹರಿದಿನಗಳು' ಎಂಬ ಲೇಖನದಲ್ಲಿ ವರ್ಷ ಪೂರ್ತಿ ಬರುವ ಹಬ್ಬಗಳನ್ನು ಕುರಿತು ತಿಳಿಸಿದ್ದಾರೆ. ಆದರೆ 'ಭೀಮನ ಅಮಾವಾಸ್ಯೆ'ಯನ್ನು ಕುರಿತು ಪ್ರಸ್ತಾಪ ಇರುವುದಿಲ್ಲ. ಈ ಹಬ್ಬದ ವಿಶೇಷತೆಯನ್ನು ತಿಳಿಯಬೇಕೆಂಬ ಕುತೂಹಲದಿಂದ ಲೇಖನ ಓದಿದ ನನಗೆ ಇದೊಂದು ಕೊರತೆಯಾದರೂ, ಒಟ್ಟಾರೆ ಲೇಖನ ಉಪಯುಕ್ತವಾಗಿತ್ತು.

ತಿ. ನರಸೀಪುರ ಎಂ. ಬಿ. ಸರ್ಪಭೂಷಣಾರಾಧ್ಯ

'ಪುಸ್ತಕ ಪ್ರಪಂಚ'ದಲ್ಲಿ ದಿನಮಾನಕ್ಕೆ ತಕ್ಕಹಾಗೆ, ವಸ್ತು ವಿಷಯಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವುದು ಸಂತಸ. ಒಮ್ಮೊಮ್ಮೆ ಒಂದೇ ವಿಷಯಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟವಾಗುತ್ತಿರುವ ಬಗ್ಗೆ ಒಂದು ಸಣ್ಣ ಸಲಹೆ. ೯೭ನೇ ಏಪ್ರಿಲ್ ಸಂಚಿಕೆಯಲ್ಲಿ ಎ. ಪಿ. ಚಂದ್ರಶೇಖರರವರ 'ಸ್ತ್ರೀ ಸಮಾನತೆ ಸಾಧ್ಯವೇ?' ಲೇಖನ ಪ್ರಕಟವಾಗಿದೆ. ಈ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಮೇ, ಜೂನ್ ಸಂಚಿಕೆಯಲ್ಲಿ ಓದುಗರಿಂದ ಆರೋಗ್ಯಪೂರ್ಣ ಅನಿಸಿಕೆಗಳು ವ್ಯಕ್ತವಾಗಿವೆ. ಆದರೆ ಜುಲೈ ಸಂಚಿಕೆಯಲ್ಲಿ ಮಹಿಳೆಯರ ಸಮಸ್ಯೆಯನ್ನೆತ್ತಿಕೊಂಡು ಡಾ|| ಎ. ಎಸ್. ರಾಘವ ಕುಮಾರಿಯವರ 'ಸಮಸ್ಯೆಗಳ ಸುಳಿಯಲ್ಲಿ ಮಹಿಳೆ' ಎಂಬ ಲೇಖನವನ್ನು ಪ್ರಕಟಿಸಲಾಗಿದೆ. ಒಂದೇ ವಿಷಯಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸುವಾಗ ಸ್ವಲ್ಪ ಕಾಲ ಅಂತರವಿರುವುದು ಸೂಕ್ತವಾಗುತ್ತದೆ.

ಕೆ. ಎನ್. ಪುರ, ಮೈಸೂರು ಜಿ. ಮಮತಾ

ಡಾ|| ಎಚ್. ಕೆ. ರಂಗನಾಥ್ ಅವರ 'ನಾಕಂಡ ನಾ. ಕ' ಲೇಖನದಲ್ಲಿ ನಾ. ಕಸ್ತೂರಿ ಅವರ ಅಂತರಂಗದ ಬಳಗದಲ್ಲೊಬ್ಬರಾದ ರಂಗನಾಥ್ ಅವರು ಕಸ್ತೂರಿ ಅವರೊಡನಾಟದಲ್ಲಿ ಹಲವಾರು ನೆನಪುಗಳನ್ನು ಮೆಲಕು ಹಾಕಿದ್ದಾರೆ. ನಾ. ಕಸ್ತೂರಿ ನಿಜಕ್ಕೂ ಕನ್ನಡದ ಕಸ್ತೂರಿ.

ಚಿಂತಾಮಣಿ ಸರ್ವಮಂಗಳ ಆರ್. ಮೂರ್ತಿ

ಜಿ. ಟಿ. ನಾರಾಯಣರಾವ್ ಅವರ

'ನಕ್ಷತ್ರ ವೀಕ್ಷಣೆ'

ಎರಡನೆಯ ಮುದ್ರಣದಲ್ಲಿ ಸಮಿತಿಯಿಂದ ಪ್ರಕಟವಾಗಿ ಮಾರಾಟಕ್ಕಿದೆ. ೧೨೦ ಪುಟಗಳ ಆಫ್‌ಸೆಟ್ ಮುದ್ರಣದ ಅಂದವಾದ ಈ ಕೃತಿಯ ಬೆಲೆ ಕೇವಲ ೨೦-೦೦ ರೂ.ಗಳು ಮಾತ್ರ. ಅಂಚೆ ಮೂಲಕ ಬೇಕಾದಲ್ಲಿ ಕೃತಿಗೆ ೧೫-೦೦ ರೂ. ಪ್ರತ್ಯೇಕ.

"ನೀಲಿಯಾಕಾಶದಲ್ಲಿ ರಾತ್ರಿ ಹೊತ್ತು ಮಿನುಗುತ್ತ ವಿಸ್ಮಯಗೊಳಿಸುವ ನಕ್ಷತ್ರಗಳ ಬಗ್ಗೆ ನಮಗೆಷ್ಟು ಗೊತ್ತು? ಹೊಳೆವ ಪ್ರತಿಯೊಂದು ನಕ್ಷತ್ರದ ಹಿಂದೆ ದೊಡ್ಡ ಇತಿಹಾಸವಿದೆ ಎಂದು ಬಲ್ಲವರು ಎಷ್ಟು ಜನ? ಎಣಿಕೆಗೆ ನಿಲುಕದ ಬೆಳಕಿನ ಹುಡಿಗಳ ಬಗ್ಗೆ ಆಸಕ್ತಿ ವಹಿಸಿ ಅರಸುತ್ತಾ ಹೊರಟ ಜನರಿಗೆ ಮಾಹಿತಿ ದೊರೆಯುವುದು ಅಷ್ಟು ಸುಲಭದ ಮಾತಲ್ಲ. ಕನ್ನಡ ಸಾಹಿತ್ಯದಲ್ಲಂತೂ ವೈಜ್ಞಾನಿಕ ದೃಷ್ಟಿಯಿಂದ ನಕ್ಷತ್ರಗಳ ವಿವರ ದೊರೆಯುವುದು ದುರ್ಲಭ. ಈ ಕೊರತೆ ನಿವಾರಿಸುವಲ್ಲಿ ಶ್ರೀ ಜಿ. ಟಿ. ನಾರಾಯಣರಾಯರ "ನಕ್ಷತ್ರ ವೀಕ್ಷಣೆ" ಮಹತ್ವದ ಕೃತಿ.

ನಾರಾಯಣರಾಯರ ಬರವಣಿಗೆ ಶೈಲಿ ಓದುಗರಿಗೆ ಇದೊಂದು ಶಾಸ್ತ್ರ ಗ್ರಂಥ ಎಂದು ಅನಿಸುವುದೇ ಇಲ್ಲ. ಈ ಕೃತಿ ಓದುತ್ತಾ ಹೋದಂತೆ ರಮ್ಯ ಕಥಾನಕ ಓದಿದ ಅನುಭವ ಆಗುವುದು ಸಹಜ. ಚಿತ್ರ, ಸಂಖ್ಯೆ, ರೂಪಕ, ಕತೆ, ವಿವರಣೆ, ಪದ್ಯ ಹೀಗೆ ಹಲವು ಅಂಶಗಳಿಂದ ಓದುಗನಿಗೆ ತಾನರಿಯದ ಜಗತ್ತಿನ ಬಗ್ಗೆ ಕುತೂಹಲ ಕೆರಳಿಸುವಲ್ಲಿ ಈ ಕೃತಿ ಯಶಸ್ವಿಯಾಗುತ್ತದೆ. ಎರಡನೆಯ ಮುದ್ರಣ ಕಂಡಿರುವುದೇ "ನಕ್ಷತ್ರ ವೀಕ್ಷಣೆ"ಯ ಜನಪ್ರಿಯತೆಗೆ ಹಿಡಿದ ಕೈಗನ್ನಡಿ."


(೩-೮-೯೭ರ 'ಸುಧಾ' ವಾರಪತ್ರಿಕೆಯ "ಪುಸ್ತಕ ಪ್ರೀತಿ" ಅಂಕಣದಿಂದ)

ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು-೫೭೦೦೦೬

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone : 512485